ಬುಧವಾರ, ಸೆಪ್ಟೆಂಬರ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 253 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಪರಿಸರಸ್ನೇಹಿ ಎನಿಸಿರುವ ಬ್ಯಾಟರಿಚಾಲಿತ ವಾಹನಗಳ ತಯಾರಿಕೆಯು ಪರಿಸರಹಾನಿಗೂ ಕಾರಣವಾಗುತ್ತದೆ

ಆಳ-ಅಗಲ

ಎಂಪಾಕ್ಸ್: ಇರಲಿ ಎಚ್ಚರ

'ಸಮಾನತೆ ಬಂದಾಗ ಮೀಸಲು ರದ್ದತಿಗೆ ಚಿಂತನೆ' 13

'ನ್ಯಾ.ಹೇಮಾ ಸಮಿತಿ ವರದಿ: ಕ್ರಮ ಜರುಗಿಸದಿರುವುದು ಆಘಾತಕಾರಿ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,921	25,041	₹73,750 (ಬೆಂಗಳೂರು)	₹84,100 (ಬೆಂಗಳೂರು)	83.98

ವಾಲ್ಮೀಕಿ ನಿಗಮದ ಅಕ್ರಮ: ಚುನಾವಣೆಗೆ ₹20.19 ಕೋಟಿ ● ಇ.ಡಿ ದೋಷಾರೋಪ ಪಟ್ಟಿ

ನಾಗೇಂದ್ರ ಮೊದಲ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ₹94 ಕೋಟಿ ಅಕ್ರಮದಲ್ಲಿ ಮಾಜಿ ಸಚಿವ ಹಾಗೂ ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಅವರನ್ನು ಮೊದಲ ಆರೋಪಿಯಾಗಿ ಹೆಸರಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ಈ ಮೊತ್ತದಲ್ಲಿ ₹20.19 ಕೋಟಿಯನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಗೆ ಬಳಸಿಕೊಳ್ಳಲಾಗಿದೆ ಎಂದೂ ಉಲ್ಲೇಖಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಮಧ್ಯಾಹ್ನ 4,970 ಪುಟಗಳ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ.

ನಿಗಮದ ಅಕ್ರಮ ಕುರಿತು ತನಿಖೆ ನಡೆಸಲು ಸರ್ಕಾರ ರಚಿಸಿದ್ದ ವಿಶೇಷ ತನಿಖಾ ದಳವು ನ್ಯಾಯಾಲಯಕ್ಕೆ ಪ್ರತ್ಯೇಕವಾಗಿ ಸಲ್ಲಿಸಿದ್ದ ದೋಷಾರೋಪ ಪಟ್ಟಿಯಲ್ಲಿ ನಾಗೇಂದ್ರ ಅವರನ್ನು ಆರೋಪಿ ಎಂದು ಉಲ್ಲೇಖಿಸಿರಲಿಲ್ಲ. ಅಧಿಕಾರಿಗಳನ್ನಷ್ಟೇ ಹೊಣೆ ಮಾಡಿತ್ತು. ಇ.ಡಿ. ಸಲ್ಲಿಸಿರುವ ದೋಷಾರೋಪ ಪಟ್ಟಿ ಇದಕ್ಕೆ ವ್ಯತಿರಿಕ್ತವಾಗಿದೆ.

'ನಿಗಮದ ಹಣವನ್ನು ದೋಚಲು ಚುನಾವಣೆಗೂ ಹಲವು ತಿಂಗಳು ಮೊದಲೇ ನಾಗೇಂದ್ರ ಸಂಚು ರೂಪಿಸಿದ್ದರು. ಅವರು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಸಮಯದಲ್ಲಿ, ಅವರ ಆಣತಿಯಂತೆಯೇ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ. ಜತೆಗೆ ಈ ಹಣದಲ್ಲಿ ಸ್ವತಃ ನಾಗೇಂದ್ರ ₹5.26 ಕೋಟಿ ಬಳಸಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಇ.ತುಕಾರಾಂ ಪರವಾಗಿ ಮತದಾರರನ್ನು ಸೆಳೆಯಲು ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಪ್ರತಿ ಮತಗಟ್ಟೆಯಲ್ಲೂ ಹಣ ಹಂಚಲಾಗಿದೆ ಮತ್ತು ಮತದಾರರಿಗೆ ಹಂಚಲು ಕೋಟ್ಯಂತರ ಮೊತ್ತದ ಮದ್ಯ ಖರೀದಿಸಲಾಗಿದೆ. ಮದ್ಯದಂಗಡಿಯ ಪರವಾನಗಿ ಹೊಂದಿರುವ ನಾಲ್ವರಿಗೆ ಈ ಹಣ ಹೋಗಿದೆ' ಎಂದು ದೋಷಾರೋಪ ಪಟ್ಟಿ ಉಲ್ಲೇಖಿಸಿದೆ.

ನಾಗೇಂದ್ರ ಪಾತ್ರವೇನು?



- ಹಣ ಲಪಟಾಯಿಸುವ ಉದ್ದೇಶದಿಂದಲೇ ನಾಗೇಂದ್ರ ಅವರ ಆಪ್ತ ಜೆ.ಜಿ.ಪದ್ಮನಾಭ ಅವರನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕ
- ಯೂನಿಯನ್ ಬ್ಯಾಂಕ್‌ನ ಶಾಖೆಯಲ್ಲಿ ಖಾತೆ ತೆರೆಯುವಂತೆ ಮತ್ತು ಎಲ್ಲ ಹಣವನ್ನು ಆ ಖಾತೆಗೇ ವರ್ಗಾಯಿಸುವಂತೆ ನಾಗೇಂದ್ರ ಸೂಚನೆ. ವಸಂತನಗರದ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ಸಭೆ ನಡೆಸಿದ ಸಾಕ್ಷ್ಯ ಲಭ್ಯ
- ಲೋಕಸಭಾ ಚುನಾವಣೆಗೆ ಹಣ ಬಳಸಿರುವ, ಪ್ರತಿ ಮತಗಟ್ಟೆಯಲ್ಲಿ ಎಷ್ಟು ಹಣ ಹಂಚಲಾಗಿದೆ ಎಂಬುದರ ವಿವರ ಇರುವ ಪಟ್ಟಿ ನಾಗೇಂದ್ರ ಆಪ್ತ ಸಹಾಯಕ ವಿಜಯಕುಮಾರ್ ಮೊಬೈಲ್‌ನಲ್ಲಿ ಪತ್ತೆ
- ಹಣದ ಕಂತೆಗಳು, ಚೀಟಿಗಳ ಚಿತ್ರ ಸೇರಿ ಮಹತ್ವದ ದಾಖಲೆಗಳು ಪತ್ತೆ

ಪ್ರಮುಖ ಆರೋಪಿಗಳು

ಎ1: **ಬಿ.ನಾಗೇಂದ್ರ,** ಶಾಸಕ
ಎ2: **ಸತ್ಯನಾರಾಯಣ ವರ್ಮಾ,** ಫಸ್ಟ್ ಫೈನಾನ್ಸ್ ಕ್ರೆಡಿಟ್ ಸೊಸೈಟಿ ಪಾಲುದಾರ
ಎ3: **ಸತ್ಯನಾರಾಯಣ ಏಕತಾರಿ,** ಫಸ್ಟ್ ಫೈನಾನ್ಸ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ
ಎ4: **ಜೆ.ಜಿ.ಪದ್ಮನಾಭ,** ನಿಗಮದ ಅಂದಿನ ವ್ಯವಸ್ಥಾಪಕ ನಿರ್ದೇಶಕ
ಎ8: **ಬಿ.ವಿಜಯಕುಮಾರ್,** ನಾಗೇಂದ್ರ ಆಪ್ತ ಸಹಾಯಕ

- ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿರುವ ರಾಯಚೂರು ಗ್ರಾಮೀಣ ಕ್ಷೇತ್ರ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರ ಹೆಸರೂ ಆರೋಪ ಪಟ್ಟಿಯಲ್ಲಿ ಮುಂದೆ ಬರಬಹುದು ಎಂದು ಮೂಲಗಳು ಹೇಳಿವೆ.

'ಹಣಕಾಸು ಇಲಾಖೆಯ ಲೋಪ'

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮತ್ತು ಹಣಕಾಸು ಇಲಾಖೆಗಳಿಂದಲೂ ಲೋಪವಾಗಿದೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. 'ನಿಗಮವು ಎರಡನೇ ಖಾತೆ ತೆರೆಯುವುದನ್ನು ತಡೆಯುವಲ್ಲಿ ಎರಡೂ ಇಲಾಖೆಗಳು ವಿಫಲವಾಗಿವೆ. ಈ ವಿಚಾರದಲ್ಲಿ ಎರಡೂ ಇಲಾಖೆಗಳಿಂದ ಲೋಪವಾಗಿದೆ. ಎರಡನೇ ಖಾತೆಗೆ ಹಣಕಾಸು ಇಲಾಖೆಯಿಂದ ಹಣ ವರ್ಗಾವಣೆ ಆಗಿದೆ' ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ತುಕಾರಾಂ ವಜಾಕ್ಕೆ ಆಗ್ರಹ

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ₹20.19 ಕೋಟಿಯನ್ನು ಬಳ್ಳಾರಿ ಚುನಾವಣೆಗೆ ಬಳಕೆ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ ತನ್ನ ದೋಷಾರೋಪ ಪಟ್ಟಿಯಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಆದ್ದರಿಂದ, ಬಳ್ಳಾರಿ ಸಂಸದ ಇ. ತುಕಾರಾಂ ಅವರ ಸದಸ್ಯತ್ವವನ್ನು ಚುನಾವಣಾ ಆಯೋಗ ವಜಾ ಮಾಡಬೇಕು ಎಂದು ವಿಧಾನಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಗ್ರಹಿಸಿದರು.

'ಈ ಹಗರಣದಲ್ಲಿ ನಾಗೇಂದ್ರ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ಇ.ಡಿ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ. ಆದರೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇನ್ವೆಸ್ಟಿಗೇಶನ್ ಟೀಂ (ಎಸ್‌ಐಟಿ) ನಾಗೇಂದ್ರಗೆ ಕ್ಲೀನ್ ಚಿಟ್ ಕೊಟ್ಟಿತ್ತು. ಎಸ್‌ಐಟಿ ತನಿಖೆಯಲ್ಲಿ ನಾಗೇಂದ್ರ ಅವರನ್ನು ರಕ್ಷಿಸಲಾಗಿದೆ' ಎಂದು ಆರೋಪಿಸಿದ್ದಾರೆ.

4,970 ದೋಷಾರೋಪ ಪಟ್ಟಿಯ ಒಟ್ಟು ಪುಟಗಳು

144 ನಿಗಮದಿಂದ ವಿವಿಧ ಬ್ಯಾಂಕ್ ಖಾತೆಗಳಿಗೆ ಮತ್ತು ಚುನಾವಣೆಯಲ್ಲಿ ಹಣ ಹೇಗೆ ಬಳಕೆಯಾಗಿದೆ ಎಂಬುದನ್ನು ವಿವರಿಸುವ ಪುಟಗಳ ಸಂಖ್ಯೆ

25 ಮಂದಿಯ ವಿರುದ್ಧ ಆರೋಪ

15 ಸಾಕ್ಷ್ಯಗಳ ಉಲ್ಲೇಖ

ಇನ್ನೊಂದು ಸುದ್ದಿ 10




ಪ್ರತಿಭಟನೆ ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಘಟನೆ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರು ಮಂಗಳವಾರ ಕೋಲ್ಕತ್ತದ ಸ್ವಾಸ್ಥ್ಯ ಭವನದತ್ತ ಮೆರವಣಿಗೆಯಲ್ಲಿ ಸಾಗಿದ ದೃಶ್ಯ –ಪಿಟಿಐ ಚಿತ್ರ

ಸೈಬರ್ ಅಪರಾಧ ತಡೆಗೆ ಕೇಂದ್ರ ಸ್ಥಾಪನೆ: ಅಮಿತ್ ಶಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಭೌಗೋಳಿಕ ಗಡಿಯನ್ನು ಮೀರಿ ವ್ಯಾಪಿಸುತ್ತಿರುವ ಸೈಬರ್ ಅಪರಾಧಗಳಿಗೆ ಕಡಿವಾಣ ಹಾಕಲು, ಸೈಬರ್ ಅಪರಾಧಗಳಿಗೆ ಸಂಬಂಧಿಸಿ ರಾಜ್ಯಗಳ ನಡುವೆ ಸಮನ್ವಯ ಉತ್ತಮಗೊಳಿಸಲು ಸೈಬರ್ ಅಪರಾಧಿಗಳ 'ಶಂಕಿತರ ಮಾಹಿತಿ ದಾಖಲೆ ಕೇಂದ್ರ' ಸ್ಥಾಪಿಸಲಾಗುವುದು ಎಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಆನ್‌ಲೈನ್ ಮೂಲದ ಆರ್ಥಿಕ ಅಪರಾಧ ತಡೆಯಲು ಅನಿಯಮಿತವಾಗಿ ಸಹಕಾರ ನೀಡುವುದು ಇದರ ಗುರಿ. ಈ ಕೇಂದ್ರ ಸೈಬರ್ ಅಪರಾಧ ಕುರಿತ ಸಮಗ್ರ ಅಂಕಿ ಅಂಶಗಳನ್ನು ಹೊಂದಿರಲಿದೆ. ಮುಂದಿನ ಐದು ವರ್ಷಗಳಲ್ಲಿ ಐದು ಸಾವಿರ ಮಂದಿ ತರಬೇತಿ ಪಡೆದ ಸೈಬರ್ ಕಮಾಂಡೊಗಳನ್ನು ಕೇಂದ್ರಕ್ಕೆ ನಿಯೋಜಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.



'ಶಂಕಿತರ ಮಾಹಿತಿ ಸಂಗ್ರಹ'

ರಾಷ್ಟ್ರೀಯ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್ (ಎನ್‌ಸಿಆರ್‌ಪಿ) ಆಧರಿಸಿ ಶಂಕಿತರ ಮಾಹಿತಿ ಸಂಗ್ರಹಿಸಲಾಗುವುದು ಎಂದು ಸಚಿವ ಅಮಿತ್ ಶಾ ತಿಳಿಸಿದರು.

ಈ ಕಾರ್ಯಕ್ರಮದಡಿ ಸೈಬರ್ ಕಮಾಂಡೊಗಳ ವಿಶೇಷ ಘಟಕವು ಇರಲಿದೆ. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದರ ಘಟಕ ಸ್ಥಾಪನೆಯಾಗಲಿದೆ. ದೇಶದಾದ್ಯಂತ ಸೈಬರ್ ಭದ್ರತೆಗೆ ಎದುರಾಗುವ ಬೆದರಿಕೆಯನ್ನು ಎದುರಿಸುವುದು ಇದರ ಗುರಿ. ತರಬೇತಿ ಪಡೆದ ಸೈಬರ್ ಕಮಾಂಡೊಗಳು ಡಿಜಿಟಲ್ ಭದ್ರತೆಗೆ ಸಂಬಂಧಿಸಿ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಅಗತ್ಯ ನೆರವು ಒದಗಿಸುವರು ಎಂದು ಹೇಳಿಕೆಯು ವಿವರಿಸಿದೆ.

'ಈಗ 'ಅಗತ್ಯವಿದ್ದರೆ ಮಾಹಿತಿ ಪಡೆಯಿರಿ' ಎಂಬ ನಿಲುವಿತ್ತು. ಈಗ 'ಮಾಹಿತಿ ಹಂಚಿಕೊಳ್ಳುವುದು ಕರ್ತವ್ಯ'ವಾಗಲಿದೆ. ಸಮನ್ವಯ ವೇದಿಕೆಯು ಈ ಕಾರ್ಯವನ್ನು ನಿಭಾಯಿಸಲಿದೆ' ಎಂದು ಅಮಿತ್ ಶಾ ಹೇಳಿದರು.

ಮಂಗಳವಾರ ಇಲ್ಲಿ ನಡೆದ 'ಭಾರತೀಯ ಸೈಬರ್ ಅಪರಾಧ ಸಹಕಾರ ಕೇಂದ್ರ' ಅಥವಾ '14ಸಿ'ಯ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಇದು ಸೇರಿದಂತೆ ನಾಲ್ಕು ಕಾರ್ಯಕ್ರಮಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಕಟಿಸಿದರು.

'ಸೈಬರ್ ಭದ್ರತೆಯು ದೇಶದ ಆಂತರಿಕ, ರಾಷ್ಟ್ರೀಯ ಭದ್ರತೆಯ ಪ್ರಶ್ನೆ. ಇದು, ಡಿಜಿಟಲ್ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಡಿಜಿಟಲ್ ಆಸ್ತಿ ಭದ್ರಪಡಿಸಿಕೊಳ್ಳದೇ ದೇಶದ ಪ್ರಗತಿ ಅಸಾಧ್ಯ' ಎಂದರು.

13ನೇ ಪುಟ ನೋಡಿ

ಜಿಲ್ಲಾ ಆಸ್ಪತ್ರೆಯ ಹೊರ ರೋಗಿ ವಿಭಾಗ ಬಂದ್: ಪರದಾಡಿದ ರೋಗಿಗಳು

ವೈದ್ಯರಿಗೆ ಚಪ್ಪಲಿ ಎಸೆತ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಇಲ್ಲಿಯ ಜಿಲ್ಲಾ ಆಸ್ಪತ್ರೆಯ ಕರ್ತವ್ಯನಿರತ ವೈದ್ಯರ ಮೇಲೆ ಮಹಿಳೆಯೊಬ್ಬರು ಚಪ್ಪಲಿ ಎಸೆದು ಅವರನ್ನು ಎಳೆದಾಡಿದ್ದು, ವೈದ್ಯರು ಮತ್ತು ಸಿಬ್ಬಂದಿ ಹೊರ ರೋಗಿ ವಿಭಾಗ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಹಲ್ಲೆ ನಡೆಸಿದ ಆರೋಪದಲ್ಲಿ ಇಬ್ಬರನ್ನು ಪೊಲೀಸರು ಬಂಧಿಸಿದರು.

ಗಲಾಟೆಯೊಂದರಲ್ಲಿ ಗಾಯಗೊಂಡಿದ್ದ ಇರ್ಫಾನ್ ಎಂಬವರು ಅರಳುಗುಪ್ಪೆ ಮಲ್ಲೇಗೌಡ ಜಿಲ್ಲಾಸ್ಪತ್ರೆಗೆ ಮಂಗಳವಾರ ಬಂದಿದ್ದರು. ಮೂಳೆ ತಜ್ಞ ಬಿ.ಎಸ್. ವೆಂಕಟೇಶ್ ಅವರು ತಪಾಸಣೆ ನಡೆಸಿ ಚಿಕಿತ್ಸೆ ನೀಡುತ್ತಿದ್ದರು.

'ಈ ವೇಳೆ ಗಾಯಾಳು ಕಡೆಯವರು ಒಳಗೆ ಬಂದರು. ಹೊರ ಹೋಗುವಂತೆ ವೈದ್ಯರು ತಿಳಿಸಿದಾಗ ಮಾತಿಗೆ ಮಾತು ಬೆಳೆದಿದೆ. ಕುಪಿತಗೊಂಡ ಸಂಬಂಧಿ ತಸ್ಲಿಮಾ ವೈದ್ಯರ ಕೊರಳ ಪಟ್ಟಿ ಹಿಡಿದು ಎಳೆದು, ಚಪ್ಪಲಿ ಬಿಚ್ಚಿ ಎಸೆದಿದ್ದಾರೆ' ಎಂದು ಅಲ್ಲಿದ್ದವರು ತಿಳಿಸಿದರು.



ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆ ಎದುರು ಜಮಾಯಿಸಿದ್ದ ವೈದ್ಯರು, ಸಿಬ್ಬಂದಿಯನ್ನು ಉದ್ದೇಶಿಸಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಮೋಹನ್‌ಕುಮಾರ್ ಮಾತನಾಡಿದರು

ಅಲ್ಲೇ ಇದ್ದ ಕೆಲವರು ಈ ಘಟನೆಯನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದು, ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಹೊರರೋಗಿ ವಿಭಾಗ ಬಂದ್ ಮಾಡಿದ ವೈದ್ಯರು ಮತ್ತು ಸಿಬ್ಬಂದಿ, ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ ಎದುರು ಜಮಾಯಿಸಿದರು. ವೈದ್ಯರ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿ ಇಲ್ಲದೆ ತಪಾಸಣೆಗೆ ಬಂದಿದ್ದ ರೋಗಿಗಳು ಪರದಾಡಿದರು.

7ನೇ ಪುಟ ನೋಡಿ

ಸಿಎಚ್‌ಸಿ ಮುಖ್ಯ ವೈದ್ಯಾಧಿಕಾರಿ ಮೇಲೆ ಹಲ್ಲೆ 7

ಮಣಿಪುರ: ಹಿಂಸೆಗೆ ತಿರುಗಿದ ವಿದ್ಯಾರ್ಥಿಗಳ ಪ್ರತಿಭಟನೆ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಶಾಂತಿಸ್ಥಾಪನೆಗೆ ಒತ್ತಾಯಿಸಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆ ಹಿಂಸೆಗೆ ತಿರುಗಿದ ಬೆನ್ನಲ್ಲೇ ಮುಂಜಾಗ್ರತೆ ಕ್ರಮವಾಗಿ 2 ಜಿಲ್ಲೆಗಳಲ್ಲಿ ಕರ್ಫ್ಯೂ, ಒಂದರಲ್ಲಿ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. 11

ನೇಮಕಾತಿ: ವಯೋಮಿತಿ 3 ವರ್ಷ ಸಡಿಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳ ಗ್ರೂಪ್ 'ಬಿ' ಮತ್ತು 'ಸಿ' ಹುದ್ದೆಗಳ ನೇಮಕಾತಿಗೆ ಈಗಾಗಲೇ ಹೊರಡಿಸಿದ ಮತ್ತು ಮುಂದಿನ ಒಂದು ವರ್ಷದ ಒಳಗೆ ಹೊರಡಿಸಲಾಗುವ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯಿಸುವಂತೆ ಗರಿಷ್ಠ ವಯೋಮಿತಿಯನ್ನು 3 ವರ್ಷ ಸಡಿಲಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

'ಕೋವಿಡ್ ಸೇರಿ ಇತರ ಕಾರಣಗಳಿಗೆ ಸರ್ಕಾರವು ನೇಮಕಾತಿಯನ್ನು ಮುಂದೂಡುತ್ತಲೇ ಬಂದಿದೆ. ಇದರಿಂದ ಅಭ್ಯರ್ಥಿಗಳ ವಯೋಮಿತಿ ಹೆಚ್ಚಿದ್ದು, ಅರ್ಜಿ ಸಲ್ಲಿಸುವ ಅವಕಾಶದಿಂದ ವಂಚಿತರಾಗುತ್ತಿದ್ದೇವೆ.' ಎಂದು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಸದಸ್ಯರ ಸಂಖ್ಯೆ ಹೆಚ್ಚಿಸಿ, ಪಕ್ಷ ಬಲಪಡಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿಜೆಪಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ಪಕ್ಷವನ್ನು ಬಲ ಪಡಿಸಬೇಕು ಎಂದು ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್ ತಿಳಿಸಿದರು.

ಕೆ.ಆರ್.ಪುರ ಸಮೀಪದ ಬಸವನ ಪುರದಲ್ಲಿ ಹಮ್ಮಿಕೊಂಡಿದ್ದ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಪ್ರತಿ ಬೂತ್‌ನಿಂದ 300 ಜನರನ್ನು ಸದಸ್ಯರನ್ನಾಗಿಸುವ ಮೂಲಕ ಪಕ್ಷವನ್ನು ಬಲಪಡಿಸಬೇಕಿದೆ’ ಎಂದು ಹೇಳಿದರು.

‘ಲೈಟ್ಸ್, ಕ್ಯಾಮೆರಾ, ಅಕೌಂಟಬಿಲಿಟಿ! – ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳ’ ಕುರಿತ ಚರ್ಚೆಯಲ್ಲಿ ನಟ ಚೇತನ್ ಅಹಿಂಸಾ

‘ನಮ್ಮಲ್ಲಿಯೂ ಲೈಂಗಿಕ ದೌರ್ಜನ್ಯ ಪ್ರಕರಣಗಳಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದಲ್ಲಿಯೂ ಲೈಂಗಿಕ ದೌರ್ಜನ್ಯ ಪ್ರಕರಣ ಗಳಿವೆ. ಸಾಕಷ್ಟು ನಟಿಯರು ಈ ಬಗ್ಗೆ ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಇಕ್ವಾಲಿಟಿ (ಫೈರ್) ಬಳಿ ಅಳಲು ತೋಡಿಕೊಂಡಿದ್ದಾರೆ. ಹಂತಹಂತವಾಗಿ ಎಲ್ಲವನ್ನೂ ಬಹಿರಂಗ ಪಡಿಸುತ್ತೇವೆ ಎಂದು ನಟ ಚೇತನ್ ಅಹಿಂಸಾ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಮಂಗಳವಾರ ನಡೆದ ‘ಲೈಟ್ಸ್, ಕ್ಯಾಮೆರಾ, ಅಕೌಂಟಬಿಲಿಟಿ! – ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳ’ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಕಲಾವಿದೆಯರು ಎದುರಿಸುತ್ತಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ಅಧ್ಯಯನಕ್ಕೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯನ್ನು ರಚಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಮನವಿ ನೀಡಿದಾಗ, ನಮ್ಮಲ್ಲಿ ಅಂಥ ಪ್ರಕರಣಗಳಿವೆಯಾ ಎಂದು ಸ್ವತಃ ಮುಖ್ಯಮಂತ್ರಿಗಳು ಪ್ರಶ್ನಿಸಿದ್ದು ಅಚ್ಚರಿ ಮೂಡಿಸಿತು. ಸೆ.16ಕ್ಕೆ ಈ ಬಗ್ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸಭೆ ಕರೆಯಲಾಗಿದೆ. ಫೈರ್ ಸಂಸ್ಥೆ ಅಧ್ಯಕ್ಷರು ಕೂಡ ಸದ್ಯ ನಗರದಲ್ಲಿಲ್ಲ. ಅವರು ಮರಳಿದ ಬಳಿಕ ನಮ್ಮ ಮುಂದಿನ ನಡೆಯ ಬಗ್ಗೆ ತಿಳಿಸುತ್ತೇವೆ’ ಎಂದರು.

‘ಸಾರ್ವಜನಿಕರಲ್ಲಿಯೂ ಈ ಬಗ್ಗೆ ಜಾಗೃತಿ ಮೂಡಬೇಕು. ಯಾವುದೇ ಬಗೆಯ ಅಸಮಾನತೆಯ ವಿರುದ್ಧ ಸಂಸ್ಥೆಗಳ ಮೂಲಕ ಸಂಘಟಿತ ಹೋರಾಟ ನಡೆಯಬೇಕು. ಯೂನಿಯನ್ ಪ್ರಾರಂಭಕ್ಕೂ ಮೊದಲು ಸಿನಿಮಾದಲ್ಲಿನ ಕೆಲಸಗಾರರಿಗೆ ವ್ಯವಸ್ಥಿತ ಸಂಘಟನೆ ಇರಲಿಲ್ಲ. ಬಳಿಕ ಒಂದು ಸಂಘಟನೆಯಾಯಿತು. ಒಂದಷ್ಟು ಕಾನೂನುಗಳು ಜಾರಿಯಾದವು. ಲೈಂಗಿಕ ದೌರ್ಜನ್ಯ ತಡೆಯುವ ವಿಷಯದಲ್ಲಿಯೂ ಇದೇ ರೀತಿ ಆಗಬೇಕು. ಆ ನಿಟ್ಟಿನಲ್ಲಿ ನಾವೊಂದಷ್ಟು ಜನ ಒಟ್ಟಾಗಿದ್ದೇವೆ’ ಎಂದು ಅವರು ತಿಳಿಸಿದರು.

ರಂಗಕರ್ಮಿ, ಸಾಹಿತಿ ದು.ಸರಸ್ವತಿ ಮಾತನಾಡಿ, ‘ಲೈಂಗಿಕ ದೌರ್ಜನ್ಯ ಎಂಬುದು ಒಂದು ಕಾಯಿಲೆ ಇದ್ದಂತೆ. ಮೊದಲು ಕಾಯಿಲೆ ಇದೆ ಎನ್ನುವುದನ್ನು ಒಪ್ಪಿಕೊಳ್ಳಬೇಕು. ನಂತರ ಕಾಯಿಲೆಯ ಸ್ವರೂಪ, ಚಿಕಿತ್ಸೆ ತಿಳಿಯುತ್ತ ಹೋಗುತ್ತದೆ. ಕೇರಳದಲ್ಲಿ ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಕಾಯಿಲೆ ಇರುವುದನ್ನು ಅಧಿಕೃತಪಡಿಸಿದೆ. ನಮ್ಮಲ್ಲಿಯೂ ಅಂಥ ಕೆಲಸವಾಗಬೇಕು’ ಎಂದರು.

‘ಮಹಿಳೆಯರು ತಮ್ಮ ದೇಹದ ಕುರಿತು ಅಸಹ್ಯಪಡುವುದನ್ನು ಬಿಡಬೇಕು. ಅತ್ಯಾಚಾರವಾದರೆ ಅತ್ಯಾಚಾರ ಮಾಡಿದವನು ಭಯಪಡಬೇಕೇ ಹೊರತು ಮಹಿಳೆ ಬಚ್ಚಿಟ್ಟು ಕುಳಿತುಕೊಳ್ಳಬಾರದು. ಎಲ್ಲಿಂದಲೋ ಒಂದು ಹೋರಾಟ ಪ್ರಾರಂಭವಾಗಬೇಕು. ನ್ಯಾಯಮೂರ್ತಿ ಹೇಮಾ ಸಮಿತಿ ವರದಿಯಿಂದ ಅದು ಪ್ರಾರಂಭವಾಗಿದೆ ಎಂದು ತಿಳಿದುಕೊಳ್ಳೋಣ’ ಎಂದು ತಿಳಿಸಿದರು.

ಅಶ್ವಿನಿ ಒಬುಳೇಶ್, ಮುಕ್ತಾ ದೀದಿ, ಕೀರ್ತನಾ ಕುಮಾರ್ ಮೊದಲಾದವರು ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡಿದರು.



ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ನಡೆದ ‘ಲೈಟ್ಸ್, ಕ್ಯಾಮೆರಾ, ಅಕೌಂಟಬಿಲಿಟಿ! – ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳದ ಕುರಿತ ಚರ್ಚೆಯಲ್ಲಿ ಚೇತನ್ ಅಹಿಂಸಾ, ಮುಕ್ತಾ ದೀದಿ ಚಾಂದ್, ಕೀರ್ತನಾ ಕುಮಾರ್, ಅಶ್ವಿನಿ ಒಬುಳೇಶ್ ಮತ್ತು ದು. ಸರಸ್ವತಿ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ಫೈರ್ ವಿರುದ್ಧ ಸಾ.ರಾ.ಗೋವಿಂದು ಕಿಡಿ

‘ಯಾವ್ ಫೈರ್ ರೀ?, ಏನಿದೆ ಕನ್ನಡ ಇಂಡಸ್ಟ್ರಿಯಲ್ಲಿ. ನಮಗೆ ಯಾವ ಫೈರ್ ಸಂಸ್ಥೆಯೂ ಗೊತ್ತಿಲ್ಲ’ ಎಂದು ನಿರ್ಮಾಪಕ ಸಾ.ರಾ.ಗೋವಿಂದು ಕಿಡಿಕಾರಿದ್ದಾರೆ.

ನಿರ್ಮಾಪಕ ಸಂಘದ ಕೆಲ ವಿಚಾರಗಳನ್ನು ಚರ್ಚಿಸಲು ಸಾ.ರಾ.ಗೋವಿಂದು ನೇತೃತ್ವದ ತಂಡವೊಂದು ಮಂಗಳವಾರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತು. ಬಳಿಕ ಮಾತನಾಡಿದ ಸಾ.ರಾ. ಗೋವಿಂದು, ‘ಫೈರ್ ಒಂದು ಅಧಿಕೃತ ಸಂಸ್ಥೆಯಲ್ಲ. ನಮಗೆ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ’ ಎಂದರು.

‘ನಿರ್ಮಾಪಕರ ಸಂಘದ ವಿಚಾರಕ್ಕಾಗಿ ಮುಖ್ಯಮಂತ್ರಿಗಳ ಬಳಿ ಹೋಗಿದ್ದೆವು. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೈರ್ ಸಂಸ್ಥೆ ಕುರಿತು, ಲೈಂಗಿಕ ದೌರ್ಜನ್ಯ ಪ್ರಕರಣಗಳ ಬಗ್ಗೆ ವಿಚಾರಿಸಿದ್ದಾರೆ. ನಮಗೂ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ, ಅದೊಂದು ಚಿತ್ರರಂಗದ ಅಧಿಕೃತ ಸಂಸ್ಥೆಯಲ್ಲ ಎಂದು ಹೇಳಿದ್ದೇವೆ. ಲೈಂಗಿಕ ದೌರ್ಜನ್ಯದ ಬಗ್ಗೆ ವಾಣಿಜ್ಯ ಮಂಡಳಿಯಲ್ಲಿ ಯಾವುದೇ ದೂರು ಬಂದಿಲ್ಲ. ಸೆ.16ಕ್ಕೆ ಈ ಬಗ್ಗೆ ಕಲಾವಿದೆಯರ ಸಭೆ ಕರೆದಿದ್ದೇವೆ. ಮಹಿಳಾ ಆಯೋಗದ ಅಧ್ಯಕ್ಷರೂ ಸಭೆಗೆ ಬರುತ್ತಾರೆ. ಅಲ್ಲಿ ದೂರು ಕೇಳಿ ಬಂದರೆ ಖಂಡಿತ ಮುಂದಿನ ಕ್ರಮ ತೆಗೆದುಕೊಳ್ಳುವ ನಿಟ್ಟಿನಲ್ಲಿ ಚರ್ಚಿಸುತ್ತೇವೆ’ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಆರ್ಥಿಕ ಸಂಕಷ್ಟದಲ್ಲಿ ರೇಷ್ಮೆ ಇಲಾಖೆ

ರಾಮನಗರ: ‘ರೇಷ್ಮೆ ಇಲಾಖೆ ಆರ್ಥಿಕ ಸಂಕಷ್ಟದಲ್ಲಿದೆ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗಮನಕ್ಕೂ ತರಲಾಗಿದೆ. ಇಲಾಖೆ ಚೇತರಿಕೆಗೆ ಏನಾದರೂ ಮಾಡೋಣ ಎಂದಿದ್ದಾರೆ’ ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ. ವೆಂಕಟೇಶ್ ಹೇಳಿದರು.

‘ರೇಷ್ಮೆ ಇಲಾಖೆಯಲ್ಲಿ ಎಲ್ಲವೂ ಸರಿ ಇದೆ ಎನ್ನಲಾರೆ. ಅಧಿಕಾರಿಗಳು, ಸಿಬ್ಬಂದಿ ಕೊರತೆ ಸೇರಿದಂತೆ ನಮ್ಮಲ್ಲೂ ನ್ಯೂನತೆಗಳಿವೆ. ಅದಕ್ಕೆ ಕಾರಣಗಳೂ ಇವೆ. ರೇಷ್ಮೆ ಕೃಷಿಗೆ ಸಂಬಂಧಿಸಿದ ಜಿಲ್ಲೆಗಳ ಶಾಸಕರ ನಿಯೋಗದೊಂದಿಗೆ ಒಮ್ಮೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಸಮಸ್ಯೆಗಳನ್ನು ಮನವರಿಕೆ ಮಾಡಿ ಕೊಡೋಣ. ನಂತರ ಹಂತಹಂತವಾಗಿ ಪರಿಹಾರ ಕಂಡುಕೊಳ್ಳೋಣ’ ಎಂದರು.

ಜಾಗತಿಕ ಸವಾಲುಗಳ ಪರಿಹಾರಕ್ಕೆ ಕರ್ನಾಟಕ ಸಿದ್ಧ

ಯುಎಸ್–ಇಂಡಿಯಾ ಬಿಜಿನೆಸ್ ಕೌನ್ಸಿಲ್ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕರ್ನಾಟಕವು ವ್ಯಾಪಾರ–ವ್ಯವಹಾರಕ್ಕೆ ಮುಕ್ತ
- ಸುಸ್ಥಿರ ಅಭಿವೃದ್ಧಿಯನ್ನು ಪೋಷಿಸುವ ವಾತಾವರಣ ಕಲ್ಪಿಸಲು ಬದ್ಧ

ಬೆಂಗಳೂರು: ‘ಐಟಿ-ಬಿಟಿ, ಏರೋಸ್ಪೇಸ್ ಅಥವಾ ಇನ್ನಾವುದೇ ಕ್ಷೇತ್ರವಿರಲಿ, ಜಾಗತಿಕ ಸವಾಲುಗಳನ್ನು ಎದುರಿಸಲು ಅಮೆರಿಕದ ಉದ್ಯಮಗಳ ಸಹಯೋಗದೊಂದಿಗೆ ಒಟ್ಟಾಗಿ ಪರಿಹಾರಗಳನ್ನು ಕಂಡುಕೊಳ್ಳಲು ನಾವು ಸಿದ್ಧರಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ತಂತ್ರಜ್ಞಾನ, ನಾವೀನ್ಯತೆ, ವ್ಯಾಪಾರ ಮತ್ತು ಮೂಲಸೌಕರ್ಯ ವಲಯದಲ್ಲಿ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಯುಎಸ್–ಇಂಡಿಯಾ ಬಿಜಿನೆಸ್ ಕೌನ್ಸಿಲ್ (ಯುಎಸ್ಐಬಿಸಿ) ಗ್ಲೋಬಲ್ ಬೋರ್ಡ್ ಆಫ್ ಡೈರೆಕ್ಟರ್ಸ್ ಮಿಷನ್ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ಕರ್ನಾಟಕ ರಾಜ್ಯ ವ್ಯಾಪಾರ– ವ್ಯವಹಾರಗಳಿಗೆ ಮುಕ್ತವಾಗಿದೆ. ಕರ್ನಾಟಕದಲ್ಲಿರುವ ಉತ್ತಮ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಆಹ್ವಾನಿಸುತ್ತೇನೆ’ ಎಂದು ಹೇಳಿದರು.

‘ನಮ್ಮ ಸರ್ಕಾರ ಉದ್ಯಮಶೀಲತೆ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಪೋಷಿಸುವ ವಾತಾವರಣವನ್ನು ಕಲ್ಪಿಸಲು ಬದ್ಧವಾಗಿದೆ. ಕರ್ನಾಟಕ ಅಪಾರ ಅವಕಾಶಗಳನ್ನು ಒದಗಿಸುವ ರಾಜ್ಯವಾಗಿದ್ದು, ನಮ್ಮ ಜನ ಹಾಗೂ ಜಾಗತಿಕ ಸಮುದಾಯದ ಭವಿಷ್ಯಕ್ಕಾಗಿ ಇವುಗಳನ್ನು ಬಳಸಿಕೊಳ್ಳಲು ಬದ್ಧರಾಗಿದ್ದೇವೆ’ ಎಂದರು.

ಮೂಲಸೌಕರ್ಯ ಯೋಜನೆಗಳ ಕುರಿತು ಮಹಾನಗರ ಪಾಲಿಕೆ, ವ್ಯಾಪಾರ ಮತ್ತು ಹೂಡಿಕೆ ಅವಕಾಶಗಳ ಕುರಿತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಒಳನೋಟಗಳನ್ನು ನೀಡಿದರೆ, ಬೆಂಗಳೂರು ನಗರದ ಮೂಲಸೌಕರ್ಯ ಮತ್ತು ಅಭಿವೃದ್ಧಿ ಯೋಜನೆಗಳ ಕುರಿತು ನಗರಾಭಿವೃದ್ಧಿ ಇಲಾಖೆ ಮತ್ತು ಬಿಬಿಎಂಪಿ ವಿಷಯ ಮಂಡಿಸಿದವು.

ಪರಿಸರ ವಿಜ್ಞಾನ ಮತ್ತು ಅರಣ್ಯ ಇಲಾಖೆಯು ಸುಸ್ಥಿರ ಅಭ್ಯಾಸಗಳ ಪ್ರಾಮುಖ್ಯದ ಬಗ್ಗೆ ವಿಷಯ ಮಂಡನೆ ಮಾಡಿತು. ಕೌಶಲ ಅಭಿವೃದ್ಧಿ ಇಲಾಖೆಯು ರಾಜ್ಯದಲ್ಲಿ ಕೌಶಲ ತರಬೇತಿ ಯಂತಹ ಪ್ರಮುಖ ಕಾರ್ಯಕ್ರಮಗಳನ್ನು ಹೆಚ್ಚಿಸುವ ಕುರಿತು ತನ್ನ ಕಾರ್ಯ ಚಟುವಟಿಕೆಯನ್ನು ವಿವರಿಸಿತು.

ಸಭೆಯಲ್ಲಿ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಎಂಇಐಎಸ್ಎ ಕಾರ್ಯಾಚರಣೆಗಳ ಅಧ್ಯಕ್ಷ ಕಾಮಿ ವಿಶ್ವನಾಥನ್, ಐಬಿಎಂ ಇಂಡಿಯಾ ಮತ್ತು ಸೌತ್ ಏಷ್ಯಾದ ವ್ಯವಸ್ಥಾಪಕ ನಿರ್ದೇಶಕ ಸಂದೀಪ್ ಪಟೇಲ್, ಝಡ್ ಸ್ಕೇಲರ್ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಕವಿತಾ ಮಾರಿಯಪ್ಪನ್, ಗೂಗಲ್‌ನ ಉಪಾಧ್ಯಕ್ಷ ವಿಲ್ಸನ್ ವೈಟ್, ವಾಲ್‌ಮಾರ್ಟ್‌ನ ಜಾಗತಿಕ ಸರ್ಕಾರಿ ವ್ಯವಹಾರಗಳ ಉಪಾಧ್ಯಕ್ಷ ಪಾಲ್ ಡಿಕ್ ಮತ್ತು ಮೆಟಾ ಉಪಾಧ್ಯಕ್ಷೆ ಸಂಧ್ಯಾ ದೇವನಾಥನ್ ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು.



ಯುಎಸ್– ಇಂಡಿಯಾ ಬಿಜಿನೆಸ್ ಕೌನ್ಸಿಲ್ ದುಂಡು ಮೇಜಿನ ಸಭೆಯಲ್ಲಿ ಉದ್ಯಮಿಯೊಬ್ಬರ ಕೈ ಕುಲುಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸ್ಯ ಚಟಾಕಿ ಹಾರಿಸಿದರು

ಓಣಂ: ಹುಬ್ಬಳ್ಳಿ-ಕೊಚ್ಚುವೇಳಿ ವಿಶೇಷ ರೈಲು

ಹುಬ್ಬಳ್ಳಿ: ಓಣಂ ಪ್ರಯುಕ್ತ ಪ್ರಯಾಣಿಕರ ದಟ್ಟಣೆ ಸರಿದೂಗಿಸಲು ಹುಬ್ಬಳ್ಳಿ ಮತ್ತು ಕೇರಳದ ಕೊಚ್ಚುವೇಳಿ ರೈಲು ನಿಲ್ದಾಣಗಳ ನಡುವೆ ಓಣಂ ವಿಶೇಷ ರೈಲು ಸೇವೆಗೆ ನೈರುತ್ಯ ರೈಲ್ವೆ ನಿರ್ಧರಿಸಿದೆ.

ರೈಲು ಸಂಖ್ಯೆ 07333 ಸೆಪ್ಟೆಂಬರ್ 13ರಂದು ಬೆಳಿಗ್ಗೆ 6:55ಕ್ಕೆ ಹುಬ್ಬಳ್ಳಿ ನಿಲ್ದಾಣದಿಂದ ಹೊರಟು, ಮರುದಿನ ಬೆಳಿಗ್ಗೆ 6:45ಕ್ಕೆ ಕೊಚ್ಚುವೇಳಿ ತಲುಪಲಿದೆ. ರೈಲು ಸಂಖ್ಯೆ 07334 ಸೆಪ್ಟೆಂಬರ್ 14ರಂದು ಮಧ್ಯಾಹ್ನ 12:50ಕ್ಕೆ ಕೊಚ್ಚುವೇಳಿಯಿಂದ ಹೊರಟು, ಮರುದಿನ ಮಧ್ಯಾಹ್ನ 12:50ಕ್ಕೆ ಹುಬ್ಬಳ್ಳಿ ನಿಲ್ದಾಣಕ್ಕೆ ಬರಲಿದೆ.

ಈ ರೈಲು ಹಾವೇರಿ, ರಾಣೆಬೆನ್ನೂರು, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ತುಮಕೂರು, ಚಿಕ್ಕಬಾಣಾವರ, ಎಸ್ಎಂವಿಟಿ ಬೆಂಗಳೂರು, ಕೃಷ್ಣರಾಜಪುರಂ, ಬಂಗಾರಪೇಟೆ, ಸೇಲಂ ಮತ್ತಿತರ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

mahindra Rise

auto.mahindra.com

ಉನ್ನತಿಯ 25 ವರ್ಷಗಳು ಸಂಭ್ರಮಾಚರಣೆಗೆ ಮ್ಯಾಕ್ಸ್‌ನ ಅಮೋಘ ವಾಗ್ದಾನಗಳು

ಮ್ಯಾಕ್ಸ್‌ನ ವಾಗ್ದಾನ

- 5 ವರ್ಷಗಳ ವಾರಂಟಿ*
- 5 ವರ್ಷಗಳ ಉಚಿತ ಮೇಂಟೆನೆನ್ಸ್*
- 5 ವರ್ಷಗಳ ರೋಡ್‌ಸೈಡ್ ಅಸಿಸ್ಟೆನ್ಸ್*
- 5 ವರ್ಷಗಳ ನಂತರ ₹ 5 ಲಕ್ಷದ ಖಚಿತ ರಿಸೇಲ್ ವ್ಯಾಲ್ಯೂ*
- ₹ 25 000.00ದವರೆಗೆ ಎಕ್ಸ್‌ಚೇಂಜ್ ಬೋನಸ್*

08037805420ಗೆ ಮಿಸ್ಡ್ ಕಾಲ್ ಕೊಡಿ



ಆಕರ್ಷಕ ಫೈನಾನ್ಸ್ ಆಫರ್

100% ವರೆಗೆ ಫಂಡಿಂಗ್* / ಬಡ್ಡಿದರ 10.75%ದಿಂದ ಆರಂಭ* / 7 ವರ್ಷಗಳವರೆಗಿನ ಅವಧಿ*

CELEBRATING 25 YEARS | BOLERO MaXX PIK-UP ಮ್ಯಾಕ್ಸ್ ಅಂದರೆ ಎಲ್ಲಕ್ಕಿಂತ ಅಧಿಕ

with you hamesha 1800-209-6006 | xmart by mahindra SMART BUY. SMART EXCHANGE. | UDAY ಹತ್ತು ಲಕ್ಷ ರೂಪಾಯಿಗಳ ಅಪಘಾತ ವಿಮೆ

*ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ತೋರಿಸಿರುವ ಆಕ್ಸೆಸರೀಸ್, ಸ್ಟ್ಯಾಂಡರ್ಡ್ ಎಕ್ವಿಪ್‌ಮೆಂಟ್‌ನ ಭಾಗಗಳಲ್ಲ . ಸ್ಟಾಕ್ ಇರುವವರೆಗೆ ಮಾತ್ರ.

SIDDHARTH MOTORS: GARVE BHAVI PAYLA, SINGSANDRA, ANEKAL, ATTIBELE, HOSKOTE, BANGARPET, YESHWANTHPUR, DABBASPET: 8448481362, **ANANT CARS AUTO PVT LTD:** MYSORE ROAD, K R PURAM, RAMNAGAR, MALUR, H CROSS, HUNASAMARANAHALLI: 8884499043, **PPS MOTORS:** KENGERI, KANAKAPURA TOWN, DEVANAHALLI, CHINTAMANI, HBR LAYOUT, KANAKAPURA ROAD, NELMANGALA, BANASHANKARI: 7949107818, **INDIA GARAGE BANGALORE:** LALBAGH ROAD, YESHWANTPUR, KOLAR, CHIKKABALLAPURA, PEENYA, BIDADI, NELAMANGALA: 8884498958.

PRESIDENCY UNIVERSITY

Established under Section 2(f) of UGC Act, 1956 I Presidency University Act, 2013 of the Karnataka Act No. 41 of 2013

Bengaluru

ENTERPRISE 4.0 FUTURE-READY CURRICULA | APPROVED BY AICTE NEW DELHI | CONCESSIONAL FEE WITH CHOICE OF BRANCH FOR COMEDK / CET ASPIRANTS

Discover Excellence



8 Advanced Schools | 48 Specialized Programs | 97% Placement Record | 600+ Corporate Partners | 2350+ Students Got Placed in 2023-24

PROGRAMMES OFFERED

SCHOOL OF COMPUTER SCIENCE & ENGINEERING

B.Tech. - Computer Science and Engineering
B.Tech. - Computer Science and Engineering
(Artificial Intelligence and Machine Learning)
B.Tech. - Computer Science & Engg. (Data Science)
B.Tech. - Computer Science & Engg. (Cyber Security)
B.Tech. - Computer Science & Engg. (Block Chain)
B.Tech. - Computer Science & Engg. (Internet of things)
B.Tech. - Computer Science & Technology (Big Data)
B.Tech. - Computer Science & Technology (Devops)
B.Tech. - Computer Science & Technology
Specialisation : Artificial Intelligence and Machine Learning
B.Tech. - Computer Engineering
Specialisation : Artificial Intelligence and Machine Learning
B.Tech. - Computer Science & Engineering (Networks)
B.Tech. - Computer Science & Information Technology
B.Tech. - Information Science & Engineering
Specialisation : Artificial Intelligence and Robotics
B.Tech. - Information Science & Technology
Specialisation : Artificial Intelligence and Data Science
M.Tech. - (Data Science)
M.Tech.. - (Artificial Intelligence)

SCHOOL OF ENGINEERING

B.Tech. - Civil Engineering
B.Tech. - Electrical and Electronics Engineering
B.Tech. - Electronics and Communication Engineering
B.Tech. - Mechanical Engineering
B.Tech. - Mechanical Engineering
Specialisation : Mechatronics
B.Tech. - Petroleum Engineering
B.Tech. - VLSI
M.Tech. - (Embedded System and VLSI)
M.Tech. - (Building and Construction Technology)
M.Tech. - (Product Design and Development)

INTERNATIONAL OPPORTUNITIES AVAILED BY 300+ STUDENTS

130+ Partners from 35+ Countries

OUR PLACEMENT PARTNER

Capgemini, TATA, square yards, ICICI Bank, genpact, Cognizant, Mindtree, DELL, hp, Shell, The Mathworks Group, TVS, Tech Mahindra, NTT Data, HDFC Life, KPMG, Adecco, eldoas, Mphasis, ap, Deloitte., ORACLE, HCL, Bandhan Bank, amazon, ALTEN INDIA, AXIS BANK, SBI general, wipro, BYJU'S, kotak, Reliance, AND MANY MORE...

INTERNATIONAL UNIVERSITY PARTNERS

UTHM, LA TROBE, HELP, uco, DHIK, IGCHE, Drexel, FH-W-S, AND MANY MORE...

SCHOOL OF LAW	SCHOOL OF INFORMATION SCIENCE	SCHOOL OF DESIGN	SCHOOL OF MANAGEMENT	SCHOOL OF MEDIA STUDIES	SCHOOL OF COMMERCE
LL. B. I LL. M.	BCA I MCA	B.DESIGN I B. SC. - MULTIMEDIA	BBA I MBA	BA - JOURNALISM	B.COM I B.SC. - ECONOMICS

CET/DCET CODE: E237 | COMEDK CODE: 173 | PGCET CODE : MBA – B349 | M.TECH – T983 | MCA - C575MC | Hostel Facility Available

SCAN THE QR CODE TO VISIT THE CAMPUS | ₹15 CRORE MERITORIOUS STUDENTS · SCHOLARSHIPS · DESERVING STUDENTS · FEE CONCESSIONS

admission@presidencyuniversity.in I presidencyuniversity.in

ADMISSIONS OPEN 2024-25 +91-90240 60000

Presidency University, Itgalpur, Rajanakunte, Yelahanka, Bengaluru 560064

INTEREST FREE EDU. LOAN FACILITY

ಹಬ್ಬಕ್ಕೆ ಸಿದ್ಧರಾಗಿ
ಎಕ್ಸ್‌ಕ್ಲೂಸಿವ್ ಸ್ಕೂಟರ್ ಆಫರ್‌ಗಳೊಂದಿಗೆ

Hero CENTENNIAL CELEBRATION HERO FOREVER



Pleasure+ XTEC

₹72,413*



XOOM

₹77,070*



DESTINI PRIME

₹76,518*

RS/Hero/09/24

Flipkart ಆಫರ್ ₹5000^ವರೆಗೆ | ಕಡಿಮೆ ಡೌನ್ ಪೇಮೆಂಟ್ ₹4999^ ರಿಂದ ಆರಂಭ

100 DAYS OF HAPPINESS | STAND A CHANCE TO WIN 100% CASHBACK ON YOUR PURCHASE**

TOLL FREE NO. 1800-266-0018 | INDIA'S FIRST 5 YEAR WARRANTY *Conditions apply

Regd. Office: Hero MotoCorp Ltd., The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. **As per the cumulative global production volume till 21st January 2021. ***Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^^Based on offers from empaneled dealers on Wheels of Trust platform. Available at select dealerships. *Ex-showroom price of Pleasure Xtec LX Variant, Xoom LX Variant and Destini Prime in Karnataka. ^Finance scheme is at the sole discretion of financiers and subject to its respective terms and conditions. #T&C apply. Offer valid from 26th Jun to 3rd Oct. Offer is for limited period or till stock lasts. For further information, contact nearest Hero MotoCorp authorised outlet (s) or visit website www.heromotocorp.com

Exchange Powered By Wheels of Trust^^ SCAN FOR BEST RESALE VALUE

Authorised Dealers: Bengaluru: hosur Road: RT Krishna Hero, Ph: 9289923177, **Lalbagh Road: Prakash Hero,** Ph: 9289922117, **Byatarayanapura: Bimal Hero,** Ph: 9289922863, **Peenya: Sai Hero,** Ph: 9289922830, **Hosur Road: Rt Krishna Hero,** Ph: 9289923177, **Banashankari: Sai Hero,** Ph: 9289922476, **Banaswadi: Bhagath Hero,** Ph: 9289922738, **Magadi Road: Poorna Hero,** Ph: 9289923212, **Marathalli: Vaayuratha Hero,** Ph: 9289923811, **Rajaji Nagar: Max Hero,** Ph: 9289923023, **Kolar: Sai Balaji Hero,** Ph: 9821745024, **Chikkaballapur: Manjunath Hero**, Ph: 9821751332, **Tumkur: Sai Hero**, Ph: 9289922986, **B.h.road–sai Hero,** Ph: 7022752841, **Kamakshipalya: Poorna Motors,** Ph: 9606922534, **Jp Nagar: Sai Hero,** Ph: 99002 36280, **Kanakpura Road: Sai Hero,** 8904677394, **Hoskote: Bhagath Hero,** Ph: 8884600051, **K R Puram: Bhagath Hero,** Ph: 7829488706, **Jigani: Rt Krishna Hero**, Ph: 8762860999, **Rt Nagar: Bimal Hero,** 9535327710, **Tiptur: Sai Hero,** Ph. 9164840456, **Kunigal: Sai Hero,** Ph: 7022752858, **Doddaballapura: Bimal Hero,** 9742202125, **Associate Dealer: Belathur,** Ph: 9902649569, **Madiwala,** Ph: 9731660639, **Banashankari 3rd Stage,** Ph: 9513353864, **Bannerghatta Road,** Ph: 41209619, **Kengeri,** Ph: 9739275523, **Yelahanka,** Ph: 28462524, 9341025589, **Mysore Road:** Ph: 9611997733, **Devanahalli,** Ph: 9964560599, **Kanakapura,** Ph: 9880212346, **Bagepalli,** Ph: 282828, **Srinivaspur,** Ph: 9738504002, **Sidlaghatta,** Ph: 254827, **Nelamangala,** Ph: 27723395, Pavagada, Ph: 9740324639, **Madhugiri,** Ph: 9972278989, **Vijayapura:** Ph: 9449619920. **Sira:** Ph: 9448417393, **Chandapura:** Ph: 9481329064, **Vidyaranyapura:** Ph: 9606934533, **Magadi:** 9482090890, **Also Available At: Dunnasandra:** Ph: 8310166369, **Hsr Layout:** Ph: 7428893265, **Mathikere:** Ph: 9035027951, **Domlur:** Ph: 7353919910, **J.p.nagar:** Ph: 9035024274, Rt Nagar: Ph: 9535327710, **Attibele:** 8050609104, **B Narayanapura:** Ph: 9945472149, **Varthur:** Ph: 9900877227, **Papareddypalya:** 9916678309. **Anekal:** Ph: 9739519252, **Konankunte:** Ph: 9886122251, **Sarjapur Main Road:** Ph: 8762860999, **Bidadi:** Ph: 9844767719, **Ramanagara:** Ph: 9663399909, **Jigani:** Ph: 9986498884, **Chikkanayakanahalli:** Ph: 9880807399, **Turuvekere:** Ph: 9448403205, **Koratagere:** Ph: 9731713711, **Peresandra:** 9901502049, **For Bulk Deals/corporate Purchase:** Bangalore@heromotocorp.com & Kiran.kumart@heromotocorp.com, **For Buy/sell/exchange Old Any Vehicle Contact:** VV Puram, Bengaluru Olety Sai Hero Sure: 98450 74491.

459 ಕಿ.ಮೀ ಉದ್ದದ ರಸ್ತೆಗಳ ಮೇಲ್ಮೈ ದುರಸ್ತಿಗೆ ₹660 ಕೋಟಿ: ಒಂದೆರಡು ತಿಂಗಳಲ್ಲಿ ಕಾಮಗಾರಿ

ಗುಂಡಿ ದುರಸ್ತಿ: ಮುಖ್ಯ ಆಯುಕ್ತ ರಾತ್ರಿ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಏಪ್ರಿಲ್ 1 ರಿಂದ ನಾಲ್ಕು ಸಾವಿರ ಗುಂಡಿ ಮುಚ್ಚಲಾಗಿದೆ. ಇನ್ನೂ ಎರಡು ಸಾವಿರ ಗುಂಡಿ ಮುಚ್ಚಬೇಕಿದೆ. 'ರಸ್ತೆ ಗುಂಡಿ ಗಮನ' ಆ್ಯಪ್‌ನಲ್ಲಿ ಸುಮಾರು 1,600 ದೂರುಗಳು ಬಂದಿವೆ. ಅದರಲ್ಲಿ ಒಂದು ಸಾವಿರ ದೂರುಗಳು ರಸ್ತೆ ಗುಂಡಿಗಳಿಗೆ ಸಂಬಂಧಿಸಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ರಸ್ತೆಗಳ ಗುಂಡಿ ದುರಸ್ತಿ ಕಾಮಗಾರಿಯನ್ನು ವೀಕ್ಷಿಸಲು ಅವರು ನಗರದ ಪ್ರಮುಖ ರಸ್ತೆಗಳಲ್ಲಿ ಮಂಗಳವಾರ ರಾತ್ರಿ ಸಂಚರಿಸಿದರು.

'ರಸ್ತೆಗಳ ಗುಂಡಿಗಳನ್ನು ಮುಚ್ಚುವುದು ನಿರಂತರ ಕೆಲಸ. ಮಳೆ ಬರುತ್ತೆ, ಮತ್ತೆ ಗುಂಡಿಯಾಗುತ್ತದೆ. ನಾವು ಮುಚ್ಚಿದ ಗುಂಡಿ ಪಕ್ಕದಲ್ಲೇ ಗುಂಡಿಯಾಗುತ್ತದೆ' ಎಂದು ಸುದ್ದಿಗಾರರಿಗೆ ಹೇಳಿದರು.

ಪ್ರಮುಖ ರಸ್ತೆಗಳನ್ನು ಗುಂಡಿ ಮುಕ್ತವಾಗಿಸಲು ಪ್ರತಿ 5 ಕಿ.ಮೀಗೆ ಒಬ್ಬ ಎಂಜಿನಿಯರ್ ನೇಮಿಸಲಾಗಿದೆ. ಇದರ ಮೇಲ್ವಿಚಾರಣೆಯನ್ನು ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರಿಗೆ ವಹಿಸಲಾಗಿದೆ. ವಾರ್ಡ್ ರಸ್ತೆಗಳ ನಿರ್ವಹಣೆಗೂ ನೋಡಲ್ ಎಂಜಿನಿಯರ್‌ಗಳನ್ನು ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಮುಖ ರಸ್ತೆಗಳನ್ನು ಹಲವು ವರ್ಷಗಳಿಂದ ದುರಸ್ತಿ ಮಾಡಿಲ್ಲ. 459 ಕಿ.ಮೀ ಉದ್ದದ ಪ್ರಮುಖ ರಸ್ತೆಗಳಲ್ಲಿ ₹660 ಕೋಟಿ ವೆಚ್ಚದಲ್ಲಿ ಮೇಲ್ಮೈ ಪದರದ ಡಾಂಬರೀಕರಣ ಮಾಡಲಾಗುತ್ತದೆ. ಅಕ್ಟೋಬರ್‌ನಲ್ಲಿ ಕಾರ್ಯಾದೇಶ ನೀಡಿ, ಒಂದೆರಡು ತಿಂಗಳಲ್ಲಿ ಈ ರಸ್ತೆಗಳನ್ನು ದುರಸ್ತಿ ಮಾಡಲಾಗುತ್ತದೆ ಎಂದರು.

ಹೆಬ್ಬಾಳ ಜಂಕ್ಷನ್, ವೀರಣ್ಣಪಾಳ್ಯ, ಮಾನ್ಯತಾ ಪಾರ್ಕ್, ಕೆ.ಆರ್. ಪುರ, ಎಚ್‌ಆರ್‌ಬಿಆರ್ ಲೇಔಟ್ ಹಾಗೂ ಪಶ್ಚಿಮ ವಲಯದ ಕೆಲವು ರಸ್ತೆಗಳಲ್ಲಿ ಮುಖ್ಯ ಆಯುಕ್ತರು ಸಂಚರಿಸಿದರು.

ಬಿಎಂಆರ್‌ಸಿಎಲ್ ಕಾಮಗಾರಿ ನಡೆಯುತ್ತಿರುವ ಕಡೆ, ಮಳೆ ನೀರು ಹರಿಯಲು ಕ್ರಮ ವಹಿಸುವಂತೆ, ರಸ್ತೆ ಸುಸ್ಥಿತಿಯಲ್ಲಿಡುವಂತೆ ಸೂಚಿಸಿದರು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ್ ರಾವ್ ಅವರು ಉಪಸ್ಥಿತರಿದ್ದರು.

ಅಮಾನತು ಎಚ್ಚರಿಕೆ: 'ರಸ್ತೆ ಗುಂಡಿ ಮುಚ್ಚುವುದನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಯಾವುದೇ ಮುಲಾಜಿಲ್ಲದೆ ಅಮಾನತು ಮಾಡಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಸಿದರು.

ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆ ಹಾಗೂ ವಾರ್ಡ್ ರಸ್ತೆಗಳನ್ನು ಮಂಗಳವಾರ ಮಧ್ಯಾಹ್ನ ದಿಢೀರ್ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಶಾಂತಲಾನಗರ ವ್ಯಾಪ್ತಿಯ ವಾರ್ ಮೆಮೋರಿಯಲ್ ಜಂಕ್ಷನ್ (ಡೆಕತ್ಲಾನ್ ಹತ್ತಿರ) ಬಳಿ ರಸ್ತೆ ಮೇಲ್ಮೈ ಹಾಳಾಗಿದ್ದು, ಮಿಲ್ಲಿಂಗ್ ಮಾಡಿ ರಸ್ತೆ ಸರಿಪಡಿಸಲು ಸೂಚಿಸಿದರು.

ವಿಕ್ಟೋರಿಯಾ ಲೇಔಟ್‌ನ ಪಿ.ಕೆ ಕ್ವಾರ್ಟರ್ಸ್ ರಸ್ತೆ ಹಾಗೂ ಮದರ್ ಥೆರೆಸಾ ರಸ್ತೆಯ ಮಧ್ಯಭಾಗದಲ್ಲಿ ಜಲಮಂಡಳಿ ರಸ್ತೆ ಕತ್ತರಿಸಿದ್ದು, ಸರಿಯಾಗಿ ದುರಸ್ತಿ ಮಾಡಿರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ, ದುರಸ್ತಿ ಮಾಡುವಂತೆ ಸೂಚಿಸಿದರು.


ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮಂಗಳವಾರ ರಾತ್ರಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ರಸ್ತೆ ಗುಂಡಿಗಳನ್ನು ಪರಿಶೀಲಿಸಿದರು

'ನಿರ್ವಹಣೆ ವ್ಯವಸ್ಥೆ ಸರಿಯಾಗಿಲ್ಲ'

'ರಸ್ತೆಗಳ ನಿರ್ವಹಣೆ ವ್ಯವಸ್ಥೆ ಸರಿಯಾಗಿಲ್ಲ. ಹೀಗಾಗಿ, ಒಂದೇ ಬಾರಿಗೆ ರಸ್ತೆಗಳಲ್ಲಿ ಗುಂಡಿ ಹಾಗೂ ಇತರೆ ಸಮಸ್ಯೆಗಳು ಬರುತ್ತಿವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ರಸ್ತೆಗಳನ್ನು ಉತ್ತಮವಾಗಿ ನಿರ್ವಹಿಸಬೇಕು. ಆದರೆ ಆ ರೀತಿಯ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಇನ್ನು ಮುಂದೆ ಹೀಗಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಇನ್ನೆರಡು ತಿಂಗಳಲ್ಲಿ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.

ದಕ್ಷಿಣ ವಲಯ: 210 ಗುಂಡಿ ದುರಸ್ತಿ ಬಾಕಿ ವಲಯ ಆಯುಕ್ತೆ ವಿನೋತ್ ಪ್ರಿಯಾ

ಬಿಬಿಎಂಪಿ ದಕ್ಷಿಣ ವಲಯದಲ್ಲಿ ರಸ್ತೆ ಗುಂಡಿಗಳ ಬಗ್ಗೆ ಏಪ್ರಿಲ್‌ನಿಂದ ಈವರೆಗೆ 1,188 ದೂರುಗಳು ಬಂದಿದ್ದು, 978 ಗುಂಡಿಗಳನ್ನು ದುರಸ್ತಿ ಮಾಡಲಾಗಿದೆ. ಇನ್ನುಳಿದ 210 ಗುಂಡಿಗಳನ್ನು ಶೀಘ್ರವೇ ಮುಚ್ಚಲಾಗುತ್ತದೆ ಎಂದು ವಲಯ ಆಯುಕ್ತರಾದ ವಿನೋತ್ ಪ್ರಿಯಾ ತಿಳಿಸಿದರು.

ರಸ್ತೆ ಗುಂಡಿ ದುರಸ್ತಿ ಕಾಮಗಾರಿಗಳನ್ನು ಮಂಗಳವಾರ ಪರಿಶೀಲನೆ ನಡೆಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ರಸ್ತೆ ಗುಂಡಿ ಗಮನ' ತಂತ್ರಾಂಶದಲ್ಲಿ ಏಪ್ರಿಲ್ 2024 ರಿಂದ 438 ದೂರುಗಳು ಬಂದಿದ್ದು, ಈಗಾಗಲೇ 379 ಗುಂಡಿಗಳನ್ನು ಮುಚ್ಚಲಾಗಿದೆ. ಉಳಿದ 59 ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಲಾಗುವುದು. 'ಇಶ್ಯೂ ತಂತ್ರಾಂಶ'ದಲ್ಲಿ 750 ದೂರುಗಳ ಪೈಕಿ 599 ದೂರುಗಳನ್ನು ಬಗೆಹರಿಸಲಾಗಿದೆ. ಸಹಾಯ 2.0ಯಲ್ಲಿ ಬಂದಿರುವ ಎಲ್ಲ ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ನಾಗರಿಕರಿಂದ ಬರುವ ದೂರುಗಳು ಮಾತ್ರವಲ್ಲದೆ ಎಂಜಿನಿಯರ್‌ಗಳು ಕೂಡ ರಸ್ತೆ ಗುಂಡಿಗಳನ್ನು ಗುರುತಿಸಿ, ಮುಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ದಕ್ಷಿಣ ವಲಯ ವ್ಯಾಪ್ತಿಯ ರಾಜಕಾಲುವೆಯಲ್ಲಿ ಹೂಳೆತ್ತುವ, ಕಟ್ಟಡ ಭಗ್ನಾವಶೇಷಗಳ ತೆರವು, ಮುರಿದಿರುವ ಸ್ಲ್ಯಾಬ್‌ಗಳ ತೆರವು, ಕಸ ಸುರಿಯುವ ಸ್ಥಳ, ನೀರು ನಿಲ್ಲುವ ಸ್ಥಳ, ರಸ್ತೆ ಗುಂಡಿ ಸೇರಿದಂತೆ ಇನ್ನಿತರೆ ಕೆಲಸ-ಕಾರ್ಯಗಳ ಬಗ್ಗೆ ಗಮನಹರಿಸುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ 'ಇಶ್ಯೂ ತಂತ್ರಾಂಶ' ಸಿದ್ದಪಡಿಸಿಕೊಂಡಿದ್ದು, ಅದರ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದರು.

ಡಾಂಬರೀಕರಣ: ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆ ಹಾಗೂ ವಾರ್ಡ್ ರಸ್ತೆಗಳು ಸೇರಿದಂತೆ ಒಟ್ಟು 1,746 ಕಿ.ಮೀ ಉದ್ದದ ರಸ್ತೆಯಿದೆ. ಸಂಪೂರ್ಣ ಹಾಳಾಗಿದ್ದ 75.30 ಕಿ.ಮೀ ಉದ್ದದ ರಸ್ತೆಯಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ವಿನೋತ್ ಪ್ರಿಯಾ ತಿಳಿಸಿದರು.

ಸುದ್ದಿ 2 ನಿಮಿಷ

ಪರಶುರಾಮ ಪ್ರತಿಮೆ ನಿರ್ಮಾಣ ಪ್ರಕರಣ: ಕಾಯ್ದಿರಿಸಿದ ಆದೇಶ

ಬೆಂಗಳೂರು: 'ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಉಮಿಕಲ್ ಬೆಟ್ಟದ ಮೇಲೆ ಪರಶುರಾಮನ ಕಂಚಿನ ಪ್ರತಿಮೆ ನಿರ್ಮಾಣ ಕಾಮಗಾರಿಯಲ್ಲಿ ಅಕ್ರಮ ಎಸಗಿದ್ದಾರೆ' ಎಂದು ಆರೋಪಿಸಿ ಶಿಲ್ಪ ಕಲಾವಿದ ಹಾಗೂ 'ಕ್ರಿಷ್ ಆರ್ಟ್ ವರ್ಲ್ಡ್' ಮುಖ್ಯಸ್ಥ ಕೃಷ್ಣ ನಾಯಕ್ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆಯನ್ನು ಪೂರೈಸಿದ ಹೈಕೋರ್ಟ್, ಈ ಸಂಬಂಧದ ಆದೇಶ ಕಾಯ್ದಿರಿಸಿದೆ.

'ನನ್ನ ವಿರುದ್ಧ ಕಾರ್ಕಳ ಟೌನ್ ಪೊಲೀಸರು ದಾಖಲಿಸಿರುವ ಎಫ್ಐಆರ್ ಹಾಗೂ ಕಾರ್ಕಳ ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಬೆಂಗಳೂರಿನ ವಿಶ್ವೇಶ್ವರಯ್ಯ ಲೇ ಔಟ್ ನಿವಾಸಿಯಾದ ಕೃಷ್ಣ ನಾಯಕ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪೂರ್ಣಗೊಳಿಸಿತು.

ಅಂತೆಯೇ, ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ಈ ಮೊದಲು ನೀಡಿದ್ದ ಮಧ್ಯಂತರ ತಡೆ ಆದೇಶವನ್ನು ವಿಸ್ತರಿಸಿತು. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ರಾಜ್ಯ ಪ್ರಾಸಿಕ್ಯೂಷನ್ ಪರ ಬಿ.ಎನ್. ಜಗದೀಶ್, ದೂರುದಾರರ ಪರ ವಿ.ಕೆ.ಶ್ರೀಕಾಂತ್ ಹಾಗೂ ನಿರ್ಮಿತಿ ಕೇಂದ್ರದ ಪರ ದಿನೇಶ್ ಹೆಗ್ಡೆ ಉಳೆಪಾಡಿ ವಾದ ಮಂಡಿಸಿದರು.



ಬ್ರಿಗೇಡ್ ಮೆಡೋಸ್: ಸೇಂಟ್ ಜಾನ್ಸ್ ಆಸ್ಪತ್ರೆ ಆರಂಭ

ಬೆಂಗಳೂರು: ಕನಕಪುರ ರಸ್ತೆಯ ಬ್ರಿಗೇಡ್ ಮೆಡೋಸ್ ಅಪಾರ್ಟ್‌ಮೆಂಟ್‌ನಲ್ಲಿ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ 108 ಹಾಸಿಗೆಗಳ ಅತ್ಯಾಧುನಿಕ ಆಸ್ಪತ್ರೆ ಆರಂಭಗೊಂಡಿದೆ.

ಸೇಂಟ್ ಜಾನ್ಸ್ ನ್ಯಾಷನಲ್ ಅಕಾಡೆಮಿ ಆಫ್ ಹೆಲ್ತ್ ಸೈನ್ಸಸ್, ಬ್ರಿಗೇಡ್ ಫೌಂಡೇಶನ್ ಸಹಯೋಗದಲ್ಲಿ ಸ್ಥಾಪಿಸಿರುವ ಆಸ್ಪತ್ರೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಅತ್ಯುತ್ತಮ ನುರಿತ ವೈದ್ಯರು, ರೋಗ ಪತ್ತೆ ಹಚ್ಚುವ ಆಧುನಿಕ ಯಂತ್ರೋಪಕರಣಗಳನ್ನು ಒಳಗೊಂಡಿರುವ ಆಸ್ಪತ್ರೆಯಲ್ಲಿ ಜನರಿಗೆ ಕೈಗೆಟಕುವ ದರದಲ್ಲಿ ಅತ್ಯುತ್ತಮ ಆರೋಗ್ಯ ಸೇವೆ ಲಭಿಸಲಿದೆ' ಎಂದರು.

ಸೇಂಟ್ ಜಾನ್ಸ್ ನಿರ್ದೇಶಕ ಆರ್. ಜೇಸುದಾಸ್, 'ಕಡಿಮೆ ವೆಚ್ಚದಲ್ಲಿ ಆರೋಗ್ಯ ಸೇವೆ ಒದಗಿಸಲು ಸಂಸ್ಥೆ ಬದ್ಧವಾಗಿದೆ. ಲಾಭಕ್ಕಿಂತ ಸೇವೆಯ ಧ್ಯೇಯದ ಆಧಾರದಲ್ಲಿ ಆರೋಗ್ಯ ಸೇವೆ ಒದಗಿಸುತ್ತಿದ್ದೇವೆ. ಇಂತಹ ಜನಪರ ಕಾರ್ಯಕ್ಕೆ ಬ್ರಿಗೇಡ್ ಸಂಸ್ಥೆ ಕೈಜೋಡಿಸಿರುವುದು ಹೆಮ್ಮೆಯ ಸಂಗತಿ' ಎಂದು ಹೇಳಿದರು.

ಬ್ರಿಗೇಡ್ ಫೌಂಡೇಷನ್ ಕಾರ್ಯನಿರ್ವಾಹಕ ಅಧ್ಯಕ್ಷ ಎಂ.ಆರ್. ಜೈಶಂಕರ್, 'ಕೋವಿಡ್ ಸಮಯದಲ್ಲಿ 10 ಹಾಸಿಗೆಯ ಆಸ್ಪತ್ರೆ ತೆರೆಯುವ ಮೂಲಕ ಎಂಟು ಸಾವಿರ ಜನರ ಸಂಕಷ್ಟಕ್ಕೆ ಸ್ಪಂದಿಸಲಾಗಿತ್ತು. ಈಗ ಅದೇ ಜಾಗದಲ್ಲಿ 108 ಹಾಸಿಗೆಗಳ ಆಸ್ಪತ್ರೆ ತಲೆ ಎತ್ತಿದೆ' ಎಂದರು. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಶಾಸಕ ಎಸ್.ಟಿ. ಸೋಮಶೇಖರ್ ಉಪಸ್ಥಿತರಿದ್ದರು.

ಗಣೇಶ ವಿಸರ್ಜನೆ: ಸಂಚಾರ ನಿಷೇಧ

ಬೆಂಗಳೂರು: ನಗರದ ಕೆ.ಜಿ.ಹಳ್ಳಿ, ಪುಲಿಕೇಶಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸೆ.11 ರಂದು ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನೆ ನಡೆಯುವ ಕಾರಣ ಟ್ಯಾನರಿ ರಸ್ತೆ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ. ಮಧ್ಯಾಹ್ನ 12.30 ರಿಂದ ರಾತ್ರಿ 1 ರ ವರೆಗೆ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿರ್ಬಂಧ:

- ನಾಗವಾರ ಮುಖ್ಯರಸ್ತೆ, ಟ್ಯಾನರಿ ರಸ್ತೆ, ಡೇವಿಸ್ ರೋಡ್ ಮುಖ್ಯರಸ್ತೆ
- ನೇತಾಜಿ ಜಂಕ್ಷನ್‌ನಿಂದ ಪಾಟರಿ ಸರ್ಕಲ್ ಮೂಲಕ ಟ್ಯಾನರಿ ರಸ್ತೆಯತ್ತ
- ಕ್ಲಾರ್ಕ್ ರಸ್ತೆ ಮೂಲಕ ಪಾಟರಿ ಜಂಕ್ಷನ್ ಕಡೆಗೆ ಹೋಗುವ ಮಾರ್ಗ
- ರೋಜರ್ಸ್ ರಸ್ತೆ, ಆರ್ಮ್‌ಸ್ಟ್ರಾಂಗ್ ರಸ್ತೆ ಹಾಗೂ ಹಾಲ್ ರಸ್ತೆ ಕಡೆಯಿಂದ ಪಾಟರಿ ರಸ್ತೆ ಕಡೆ ಹೋಗುವ ಮಾರ್ಗ
- ಮಾಸ್ಕ್ ಜಂಕ್ಷನ್‌ನಿಂದ ಕ್ಲಾರೆನ್ಸ್ ಬ್ರಿಡ್ಜ್ ಮೂಲಕ ಪಾಟರಿ ರಸ್ತೆ ಕಡೆಗೆ
- ಲಾಜರ್ ರಸ್ತೆ ಮತ್ತು ಎಂ.ಎಂ.ರಸ್ತೆ ಜಂಕ್ಷನ್‌ನಿಂದ ಸಿಂಧಿ ಕಾಲೊನಿ ಜಂಕ್ಷನ್, ಬುದ್ಧ ವಿಹಾರ ರಸ್ತೆ
- ಸಿಂಧಿ ಕಾಲೊನಿ ಜಂಕ್ಷನ್‌ನಿಂದ ವಾರ್ ಮೆಮೋರಿಯಲ್ ಜಂಕ್ಷನ್ ನತ್ತ ದ್ವಿಮುಖ ಸಂಚಾರ ಬದಲಾವಣೆ
- ಸಿಂಧಿ ಕಾಲೊನಿ ಜಂಕ್ಷನ್ ಕಡೆಗೆ ಏಕಮುಖ ಸಂಚಾರಕ್ಕೆ ಅವಕಾಶ

ಬಿಬಿಎಂಪಿ ಅಧಿಕಾರಿಗಳಿಗೆ 'ಲೋಕಾ' ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ವಾಯುನೆಲೆ ವ್ಯಾಪ್ತಿಯಲ್ಲಿ ಈಚೆಗೆ ಬೀದಿ ನಾಯಿಗಳ ದಾಳಿಯಿಂದ ವೃದ್ಧೆಯೊಬ್ಬರು ಮೃತಪಟ್ಟ ಸಂಬಂಧ ಲೋಕಾಯುಕ್ತ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದೆ. ಕರ್ತವ್ಯ ಲೋಪ ಸಂಬಂಧ ಬಿಬಿಎಂಪಿಯ ಎಂಟು ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದೆ.

'ಇದೇ ಆಗಸ್ಟ್ 29ರಂದು ವಾಯುನೆಲೆ ಕ್ಯಾಂಪಸ್‌ನ ಸಾರ್ವಜನಿಕ ರಸ್ತೆಯಲ್ಲಿ ಬೆಳಿಗ್ಗೆ 6.30ರ ವೇಳೆಗೆ ವಾಯುವಿಹಾರಕ್ಕೆ ತೆರಳಿದ್ದ ನಿವೃತ್ತ ಶಿಕ್ಷಕಿ ರಾಜದುಲಾರಿ ಸಿನ್ಹಾ (76) ಅವರ ಮೇಲೆ ಹಲವು ಬೀದಿ ನಾಯಿಗಳು ದಾಳಿ ನಡೆಸಿದ್ದವು. ಆಸ್ಪತ್ರೆಗೆ ಸಾಗಿಸುವ ಮುನ್ನವೇ ಅವರು ಮೃತಪಟ್ಟಿದ್ದರು. ಈ ಸಂಬಂಧ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಹೇಳಿದ್ದಾರೆ.

ಬೀದಿ ನಾಯಿಗಳ ಸಂತಾನ ಮತ್ತು ಹಾವಳಿ ನಿಯಂತ್ರಣ ಸಂಬಂಧ ಬಿಬಿಎಂಪಿ ಅಧಿಕಾರಿಗಳಿಂದ ಲೋಪವಾಗಿದೆ. ಅಲ್ಲದೇ ಶಿಕ್ಷಕಿ ಮೃತಪಟ್ಟ ಪ್ರಕರಣದ ಸಂಬಂಧ ಈವರೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ವಿವರಿಸಿ ಎಂದು ಬಿಬಿಎಂಪಿಯ ಮುಖ್ಯ ಆಯುಕ್ತ, ಯಲಹಂಕ ವಲಯ ಆಯುಕ್ತ, ಯಲಹಂಕ ವಲಯ ಜಂಟಿ ಆಯುಕ್ತ ಸೇರಿ ಎಂಟು ಅಧಿಕಾರಿಗಳಿಗೆ ಲೋಕಾಯುಕ್ತ ನೋಟಿಸ್ ನೀಡಿದೆ.

ಪಿಡಿಒಗಳಿಗೆ ನೋಟಿಸ್: ಕರ್ತವ್ಯ ಲೋಪ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆ ದಾಸನಪುರ, ಅಡಕಮಾರನಹಳ್ಳಿ ಗ್ರಾಮ ಪಂಚಾಯತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಲೋಕಾಯುಕ್ತ ನೋಟಿಸ್ ಜಾರಿ ಮಾಡಿದೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಈಚೆಗೆ ಭೇಟಿ ನೀಡಿದ್ದ ವೇಳೆ ಎರಡೂ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ನಗದು ವಹಿ ನಿರ್ವಹಣೆ ಮಾಡದೇ ಇರುವುದು ಪತ್ತೆಯಾಗಿತ್ತು. ಜತೆಗೆ ನಮೂದು ಮಾಡದೇ ಇದ್ದ ಹಣ ಪತ್ತೆಯಾಗಿತ್ತು. ಸುಮಾರು ₹16.50 ಕೋಟಿ ತೆರಿಗೆ ಸಂಗ್ರಹ ಮಾಡದೇ ಇರುವುದು ದಾಖಲೆಗಳ ಪರಿಶೀಲನೆ ವೇಳೆ ಪತ್ತೆಯಾಗಿತ್ತು.

ಈ ಸಂಬಂಧ ವಿವರ ನೀಡುವಂತೆ ಪಿಡಿಒ ಮತ್ತು ಇತರ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದ್ದು, ಅಕ್ಟೋಬರ್ 15ರ ಒಳಗೆ ವಿವರ ಸಲ್ಲಿಸುವಂತೆ ಸೂಚಿಸಲಾಗಿದೆ.

1.32 ಲಕ್ಷ ಗಣೇಶ ಮೂರ್ತಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಮವಾರದಂದು (ಸೆಪ್ಟಂಬರ್ 9) 1.32 ಲಕ್ಷ ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗಿದೆ.

ಮೊಬೈಲ್ ಟ್ಯಾಂಕರ್ ಹಾಗೂ ಕೆರೆ ಅಂಗಳದ ಶಾಶ್ವತ/ ತಾತ್ಕಾಲಿಕ ಕಲ್ಯಾಣಿಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸಲಾಗಿದೆ.

ದಕ್ಷಿಣ ವಲಯದಲ್ಲಿ 62,246, ಪೂರ್ವದಲ್ಲಿ 29,586, ಪಶ್ಚಿಮದಲ್ಲಿ 15,516, ಯಲಹಂಕದಲ್ಲಿ 8,732, ಆರ್.ಆರ್.ನಗರದಲ್ಲಿ 6,716, ಮಹದೇವಪುರದಲ್ಲಿ 4,899, ಬೊಮ್ಮನಹಳ್ಳಿಯಲ್ಲಿ 3,790 ಹಾಗೂ ದಾಸರಹಳ್ಳಿ ವಲಯದಲ್ಲಿ 668 ಮೂರ್ತಿಗಳು ವಿಸರ್ಜನೆಯಾಗಿವೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಮತ್ತಷ್ಟು ಗ್ರಾಹಕ ಸ್ನೇಹಿಯಾದ ನೂತನ ಆ್ಯಪ್

ಹೊಸ ರೂಪದಲ್ಲಿ 'ಇವಿ ಮಿತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕ್ ವಾಹನ(ಇವಿ) ಬಳಕೆದಾರರಿಗೆ ಚಾರ್ಜಿಂಗ್ ಕೇಂದ್ರಗಳ ಮಾಹಿತಿ, ಹಣ ಪಾವತಿ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸುತ್ತಿರುವ ಬೆಸ್ಕಾಂನ 'ಇವಿ ಮಿತ್ರ' ಆ್ಯಪ್ ಈಗ ಹೊಸ ರೂಪದಲ್ಲಿ ಗ್ರಾಹಕರಿಗೆ ಲಭ್ಯವಾಗುತ್ತಿದೆ.

ಹಳೆಯ 'ಇವಿ ಮಿತ್ರ' ಆ್ಯಪ್‌ನಲ್ಲಿ ಕೆಲವೊಂದು ಸಮಸ್ಯೆಗಳಿರುವ ಕುರಿತು ಕೆಲ ಗ್ರಾಹಕರು ಬೆಸ್ಕಾಂ ಗಮನಕ್ಕೆ ತಂದಿದ್ದರು. ಇದಕ್ಕೆ ಸ್ಪಂದಿಸಿದ ಇಲಾಖೆ, ಆ್ಯಪ್ ತಂತ್ರಾಂಶದಲ್ಲಿ ಒಂದಷ್ಟು ಸುಧಾರಣೆಗಳನ್ನು ಮಾಡಿದೆ.

ಆ್ಯಂಡ್ರಾಯ್ಡ್ ಮತ್ತು ಐಒಎಸ್ ಎರಡು ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ಲಭ್ಯವಿರುವ ಹೊಸ 'ಇವಿ ಮಿತ್ರ' ಆ್ಯಪ್, ಬಳಕೆದಾರರ ಪ್ರೊಫೈಲ್ ನಿರ್ವಹಣೆ, ಚಾರ್ಜಿಂಗ್ ಸ್ಟೇಷನ್‌ಗಳ ವೀಕ್ಷಣೆಯೊಂದಿಗೆ ಮಾಹಿತಿ, ಚಾರ್ಜಿಂಗ್ ಪ್ರಕ್ರಿಯೆ, ಬುಕ್ಕಿಂಗ್ ವಿವರ, ಚಾರ್ಜಿಂಗ್ ಸ್ಟೇಷನ್‌ಗಳಲ್ಲಿರುವ ಸೌಕರ್ಯಗಳು ಮತ್ತು ಚಾರ್ಜಿಂಗ್ ಕಾಯ್ದಿರಿಸುವ ಸೌಲಭ್ಯ ಹೊಂದಿದೆ.

ಗ್ರಾಹಕರು ಹಳೆಯ 'ಇವಿ ಮಿತ್ರ' ಆ್ಯಪ್ ಡಿಲೀಟ್ ಮಾಡಿ, https://onelink.to/evmithra ಲಿಂಕ್ ಮೂಲಕ ಹೊಸ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ವ್ಯಾಲೆಟ್‌ನಲ್ಲಿ ಹಣ ಉಳಿದಿದ್ದರೂ ಚಿಂತಿಸಬೇಕಿಲ್ಲ. ಹೊಸ ಆ್ಯಪ್‌ಗೆ ಆ ಹಣ ವರ್ಗಾವಣೆಯಾಗುತ್ತದೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಕನ್ನಡ, ಹಿಂದಿ, ಇಂಗ್ಲಿಷ್ ಹಾಗೂ ಪ್ರಾದೇಶಿಕ ಭಾಷೆಗಳು ಸೇರಿದಂತೆ 11 ಭಾಷೆಗಳಲ್ಲಿ ಇವಿ ಚಾರ್ಜಿಂಗ್ ಮಾಹಿತಿ ಲಭ್ಯವಿದ್ದು, ಹಣ ಪಾವತಿಗೆ ಹಲವು ಆಯ್ಕೆಗಳೂ ಇವೆ. ರಿಟೇಲ್ ಬಳಕೆದಾರರ ಶುಲ್ಕದ ವಿವರ, ಬಿಲ್ಲಿಂಗ್, ಪ್ರೊಫೈಲ್ ಇರುತ್ತದೆ.

ಆ್ಯಪ್ ಬಳಕೆ ಹೇಗೆ?: ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ನಂತರ ನಿಮ್ಮ ಫೋನ್ ನಂಬರ್ ನಮೂದಿಸಿ, ಲಾಗಿನ್ ಆಗಿ. ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ಸಂಖ್ಯೆ ದಾಖಲಿಸಿದ ನಂತರ, ಲಾಗಿನ್ ಖಚಿತವಾಗುತ್ತದೆ. ಖಾಸಗಿ ಹಾಗೂ ವಾಣಿಜ್ಯ ಬಳಕೆದಾರರು ಈ ಒಂದೇ ಆ್ಯಪ್ ಮೂಲಕ ಚಾರ್ಜಿಂಗ್ ಸೌಲಭ್ಯ ಪಡೆಯಬಹುದು. ಮ್ಯಾಪ್ ಮೂಲಕ ಚಾರ್ಜಿಂಗ್ ಕೇಂದ್ರಗಳ ಮಾಹಿತಿ ಪಡೆಯಬಹುದು.



'ಇವಿ ಮಿತ್ರ' ಆ್ಯಪ್

> 'ದೇಶದಲ್ಲೇ ಅತಿ ಹೆಚ್ಚು ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಿರುವ ಕರ್ನಾಟಕ ಇದೀಗ ಆ್ಯಪ್ ಅಭಿವೃದ್ಧಿಪಡಿಸಿದ್ದು, ಇಂಧನ ಕ್ಷೇತ್ರದ ಸುಧಾರಣೆಗೆ ನಾಂದಿಯಾಗಲಿದೆ
> **ಕೆ.ಜೆ. ಜಾರ್ಜ್,** ಇಂಧನ ಸಚಿವ

ಸುಲಭ ಪಾವತಿ, ಮರು ಪಾವತಿ

ರಿಟೇಲ್ ಬಳಕೆದಾರರು ಆ್ಯಪ್‌ನಲ್ಲಿ ಲಭ್ಯವಿರುವ ವಾಲೆಟ್‌ಗೆ ಹಣ ಭರ್ತಿ ಮಾಡಿ ಶುಲ್ಕ ಪಾವತಿಸಬಹುದು. ಯುಪಿಐ ಮತ್ತು ಬಿಲ್ ಡೆಸ್ಕ್ ಮೂಲಕವೂ ಶುಲ್ಕ ಪಾವತಿಗೆ ಅವಕಾಶವಿದೆ. ಒಂದೊಮ್ಮೆ ತಾಂತ್ರಿಕ ಅಡಚಣೆಯಿಂದಾಗಿ ಚಾರ್ಜಿಂಗ್ ಸ್ಥಗಿತಗೊಂಡರೆ, ಬಳಕೆದಾರರಿಗೆ ಹಣ ಮರುಪಾವತಿಯಾಗಲಿದೆ.

ಹೊಸ ರೂಪದ ಈ 'ಇವಿ ಮಿತ್ರ' ಆ್ಯಪ್‌ನಲ್ಲಿ ವಾಣಿಜ್ಯ ಬಳಕೆದಾರಿಗೂ ವಿಶೇಷ ಸೌಲಭ್ಯ ಇದ್ದು, ತಮ್ಮ ವಾಹನಗಳ ಚಾಲಕರ ಚಲನೆ/ಚಾರ್ಜಿಂಗ್ ವಿವರದ ಬಗ್ಗೆ ನಿಗಾವಹಿಸಬಹುದು. ಸ್ಪೆಷಲ್ ಆ್ಯಕ್ಸಿಸ್ ಕೋಡ್ ಅಲ್ಲದೇ ವಿಶೇಷ ಸೌಲಭ್ಯಗಳನ್ನು ಪಡೆಯಬಹುದು.

ವಾಟ್ಸ್‌ಆ್ಯಪ್ ಬೆಂಬಲ: ಯಾವುದೇ ಚಾರ್ಜಿಂಗ್ ಅಪ್ಲಿಕೇಶನ್ ಇಲ್ಲದೆಯೂ ಇವಿ ವಾಹನಗಳನ್ನು ಚಾರ್ಜ್ ಮಾಡಲು ಬೆಸ್ಕಾಂ 'ಇವಿ ಮಿತ್ರ ಬಾಟ್'- ವಾಟ್ಸ್ ಆ್ಯಪ್ ನೆರವು ಪಡೆಯಬಹುದು. ಲಿಂಕ್ ಮೂಲಕ ಶುಲ್ಕ ಪಾವತಿಸಬಹುದಾಗಿದೆ.

ಬ್ರಿಟನ್‌ಗೆ ಕರ್ನಾಟಕದ 30 ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪದವಿ ವಿದ್ಯಾರ್ಥಿಗಳಿಗೆ ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ ಕಲಿಯುವ ಅವಕಾಶ ಒದಗಿಸುವುದೂ ಸೇರಿದಂತೆ ನಾಲ್ಕು ಅಂಶಗಳನ್ನು ಅನುಷ್ಠಾನಗೊಳಿಸಲು ಬ್ರಿಟಿಷ್ ಕೌನ್ಸಿಲ್ ಜೊತೆ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮಂಗಳವಾರ ಒಪ್ಪಂದ ಮಾಡಿಕೊಂಡಿತು.

ಮೊದಲ ಹಂತದಲ್ಲಿ 30 ವಿದ್ಯಾರ್ಥಿಗಳು ನ.9ರಿಂದ 22ರವರೆಗೆ ಪೂರ್ವ ಲಂಡನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ನಗರ ವಿಶ್ವವಿದ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಕಲಬುರಗಿ, ರಾಯಚೂರು, ತುಮಕೂರು ವಿಶ್ವವಿದ್ಯಾಲಯಗಳಿಂದ ತಲಾ ಐವರು ವಿದ್ಯಾರ್ಥಿಗಳು ಮತ್ತು ತಲಾ ಒಬ್ಬರು ಅಧ್ಯಾಪಕರಿಗೆ ಅವಕಾಶ ಲಭಿಸಿದೆ.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷಾ ಕೌಶಲ ತರಬೇತಿ, ಅಧ್ಯಾಪಕರು, ಅಧಿಕಾರಿಗಳಿಗೆ ಸಾಮರ್ಥ್ಯ ವೃದ್ಧಿ ತರಬೇತಿ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಒಪ್ಪಂದದ ಇತರೆ ಅಂಶಗಳು.

ಒಪ್ಪಂದದ ನಂತರ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, 'ರಾಜ್ಯದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ, ಅಧ್ಯಾಪಕರ ಭಾಷಾ ಪ್ರಾವೀಣ್ಯತೆ ವೃದ್ಧಿ, ಉದ್ಯೋಗ ಆಧಾರಿತ ಶಿಕ್ಷಣ ದೊರಕಿಸಲು ಬ್ರಿಟಿಷ್ ಕೌನ್ಸಿಲ್ ಸಹಕಾರ ನೀಡುತ್ತಿದೆ' ಎಂದರು.

'16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ 5,795 ವಿದ್ಯಾರ್ಥಿಗಳಿಗೆ ಮೊದಲ ಹಂತದಲ್ಲಿ ಇಂಗ್ಲಿಷ್ ಭಾಷಾ ಕೌಶಲ ತರಬೇತಿ ನೀಡಲಾಗುತ್ತದೆ. ವಿದ್ಯಾರ್ಥಿಗಳ ಇಂಗ್ಲಿಷ್ ಭಾಷೆ ಮತ್ತು ಸಂವಹನ ಕೌಶಲ ಉತ್ತಮಪಡಿಸಲು ಇಂತಹ ಕಾರ್ಯಕ್ರಮ ರೂಪಿಸಲಾಗಿದೆ. ಮೈಕ್ರೋಸಾಫ್ಟ್ ಇಂಡಿಯಾ ಸಹಭಾಗಿತ್ವ ನೀಡಿದೆ' ಎಂದು ಹೇಳಿದರು.

'ವಿದೇಶಿ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟಕ್ಕೆ ಪೂರಕವಾಗಿ ಕರ್ನಾಟಕದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಸಜ್ಜುಗೊಳಿಸಲು ಬ್ರಿಟಿಷ್ ಕೌನ್ಸಿಲ್ ಕಾರ್ಯಾಗಾರ ಆಯೋಜಿಸುತ್ತಿದ್ದು, 28 ವಿಶ್ವವಿದ್ಯಾಲಯಗಳ 56 ಪ್ರಾಧ್ಯಾಪಕರು ಭಾಗವಹಿಸುತ್ತಿದ್ದಾರೆ' ಎಂದು ಹೇಳಿದರು.

ಕರ್ನಾಟಕ ಮತ್ತು ಕೇರಳದ ಬ್ರಿಟಿಷ್ ಡೆಪ್ಯೂಟಿ ಹೈಕಮಿಷನರ್ ಚಂದ್ರು ಅಯ್ಯರ್, ಇಂಡಿಯಾ ಬ್ರಿಟಿಷ್ ಕೌನ್ಸಿಲ್ ನಿರ್ದೇಶಕಿ ಅಲಿಸನ್ ಬ್ಯಾರೆಟ್, ದಕ್ಷಿಣ ಭಾರತ ನಿರ್ದೇಶಕಿ ಜನಕ ಪುಷ್ಪನಾಥನ್, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಎಸ್. ನಿರಂಜನ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ, ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ, ತುಮಕೂರು ವಿಶ್ವವಿದ್ಯಾಲಯದ ಕುಲಪತಿ ವೆಂಕಟೇಶ್ವರಲು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ರಾಮಕೃಷ್ಣ ಹೆಗಡೆ ನೆನಪಿನ ವಿಚಾರಸಂಕಿರಣ: ಉದ್ಘಾಟನೆ: ಬಿ.ಆರ್. ಪಾಟೀಲ, ಅತಿಥಿಗಳು: ನಾಗಮೋಹನದಾಸ್, ಪ್ರಿಯಾಂಕ್ ಖರ್ಗೆ, ನಾಸೀರ್ ಹುಸೇನ್, ಸಿದ್ದನಗೌಡ ಪಾಟೀಲ, ಪ್ರಕಾಶ್, ಆಯೋಜನೆ: ಸಮಾಜವಾದಿ ಅಧ್ಯಯನ ಕೇಂದ್ರ ಬೆಂಗಳೂರು, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10ಕ್ಕೆ ಸುದರ್ಶನ ಹೋಮ, ಸಂಜೆ 7.30ಕ್ಕೆ ಮಹಾಭಾರತ: ಕಾರ್ತಿಕ್, ರಾಘವೇಂದ್ರ, ಶಿವು, ಚಂದ್ರಪ್ರಭ, ಮಾನಸ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, 5ನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ-2024: ಅತಿಥಿ: ಸಿದ್ದರಾಮಯ್ಯ, ಅಧ್ಯಕ್ಷತೆ: ಈಶ್ವರ್ ಬಿ. ಖಂಡ್ರೆ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10.30

ಸ್ವಾವಲಂಬಿ ಸಾರಥಿ ಯೋಜನೆಯಡಿ ವಾಹನಗಳು ಮತ್ತು ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸಾಲ ಸಹಾಯಧನ ವಿತರಣೆ ಸಮಾರಂಭ: ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಸ್ಥಳ: ಹಜ್ ಭವನ, ಹೆಗಡೆನಗರ, ಬೆಳಿಗ್ಗೆ 10.30

ಕಲಾಕೃತಿಗಳ ಪ್ರದರ್ಶನ: ಕಲಾವಿದ: ಅಮಿತಾಭ್ ಆಶೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11

'ಗೌರವ ಫೆಲೋಶಿಪ್' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಸ್.ಎಂ. ಜಯಕರ್, ಪ್ರಶಸ್ತಿ ಸ್ವೀಕರಿಸುವವರು: ವಾಸುದೇವ ಕಲ್ಕುಂಟೆ ಆತ್ರೆ, ಎಂ.ಆರ್. ದೊರೆಸ್ವಾಮಿ, ಎಸ್. ರುದ್ರೇಗೌಡ, ಉಪಸ್ಥಿತಿ: ಅಶೋಕ್ ಹಂಜಗಿ, ಅಧ್ಯಕ್ಷತೆ: ಕೆ. ಸಿದ್ದಪ್ಪ, ಆಯೋಜನೆ: ಕರ್ನಾಟಕ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್, ಬೆಂಗಳೂರು ವಿಶ್ವವಿದ್ಯಾಲಯ ವಿಜ್ಞಾನ ವೇದಿಕೆ, ಸ್ಥಳ: ಡಾ.ಕೆ. ವೆಂಕಟಗಿರಿಗೌಡ ಸ್ಮಾರಕ ಭವನ, ಜ್ಞಾನ ಭಾರತಿ ಆವರಣ, ಮಧ್ಯಾಹ್ನ 2.30

ಮಾಸದ ಮಾತು 'ಸ್ಥಳೀಯರಿಗೆ ಉದ್ಯೋಗ' ಉಪನ್ಯಾಸ: ಟಿ. ತಿಮ್ಮೇಶ್, ಅತಿಥಿ: ಎಚ್. ಲಿಂಗರಾಜ, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಎಚ್‌ಎಎಲ್, ವಿಮಾನಪುರ, ಮಧ್ಯಾಹ್ನ 3.30

'ಭಾವಗೀತೆಗಳ ಬಿಡುಗಡೆ, ಗೀತಗಾಯನ, ಗೀತನೃತ್ಯ ಕಾರ್ಯಕ್ರಮ: ಭಾವಗೀತೆಗಳ ರಚನೆ: ಕಾ.ವೆಂ. ಶ್ರೀನಿವಾಸಮೂರ್ತಿ ಸಂಗೀತ ನಿರ್ದೇಶನ: ಪ್ರಸನ್ನ-ಹರೀಶ್, ಆಯೋಜನೆ: ವಿಜಯ ಮ್ಯೂಸಿಕ್ ಸ್ಕೂಲ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಬೆಂ.ವಿ.ವಿ ಘಟಿಕೋತ್ಸವದಲ್ಲಿ ಯುಜಿಸಿ ಉಪಾಧ್ಯಕ್ಷ, ಶಿಕ್ಷಣ ಸಚಿವರ ವಾದ–ಪ್ರತಿವಾದ

‘ಎನ್‌ಇಪಿಯಿಂದ ಒಳಿತೆಷ್ಟು–ಕೆಡುಕೆಷ್ಟು’

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಒಳಿತು–ಕೆಡಕುಗಳ ಕುರಿತ ವಾದ–ಪ್ರತಿವಾದಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವ ಸಾಕ್ಷಿಯಾಯಿತು. ಯುಜಿಸಿ ಉಪಾಧ್ಯಕ್ಷ ದಿಲೀಪ್ ಕುಮಾರ್ ಶ್ರೀವಾಸ್ತವ ಅವರು ಎನ್‌ಇಪಿಯನ್ನು ಹೊಗಳಿ ಮಾತನಾಡಿದರು. ಅವರ ಹೊಗಳಿಕೆಯನ್ನು ಅಲ್ಲಗಳೆಯುತ್ತಲೇ, ರಾಜ್ಯ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ಎನ್‌ಇಪಿಯನ್ನು ಕೇಂದ್ರ ಸರ್ಕಾರವು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.



ಸಂಗೀತ ನಿರ್ದೇಶಕ–ಗಾಯಕ ಗುರುಕಿರಣ್ ಮತ್ತು ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಮಾಜಿ ಆಯುಕ್ತ ಕೆ.ಎಸ್‌.ರಾಜಣ್ಣ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಕುಲಪತಿ ಎಸ್‌.ಎಂ.ಜಯಕರ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಯುಜಿಸಿ ಉಪಾಧ್ಯಕ್ಷ ಪ್ರೊ.ದೀಪಕ್ ಕುಮಾರ್ ಶ್ರೀವಾಸ್ತವ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಶಿಕ್ಷಣದ ಗುಣಮಟ್ಟ ಸುಧಾರಣೆ’

ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿ–2020 (ಎನ್‌ಇಪಿ–2020) ದೇಶದ ಶಿಕ್ಷಣ ಕ್ಷೇತ್ರದಲ್ಲಿ ಅಭೂತಪೂರ್ವ ಬದಲಾವಣೆಗಳನ್ನು ತಂದಿದೆ. ಬಹು ಪ್ರವೇಶ ಮತ್ತು ಬಹು ನಿರ್ಗಮನ (ಮಲ್ಟಿಪಲ್ ಎಂಟ್ರಿ–ಮಲ್ಟಿಪಲ್ ಎಕ್ಸಿಟ್) ವ್ಯವಸ್ಥೆಯು ವಿದ್ಯಾರ್ಥಿಗಳ ಶಿಕ್ಷಣದ ಆಯ್ಕೆಗಳನ್ನು ಹೆಚ್ಚಿಸಿವೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ಅಧ್ಯಯನ ಮಾಡಬಹುದಾಗಿದೆ. ಒಂದೇ ಅವಧಿಯಲ್ಲಿ ಹಲವು ವಿಷಯಗಳಲ್ಲಿ ಪದವಿ ಪಡೆಯಬಹುದಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಹಾಗೂ ಒತ್ತಡಗಳ ಕಾರಣದಿಂದ ಉನ್ನತ ಶಿಕ್ಷಣವನ್ನು ವಿದ್ಯಾರ್ಥಿಗಳು ಅರ್ಧದಲ್ಲೇ ಬಿಡುವವರ ಸಂಖ್ಯೆ ಭಾರತದಲ್ಲಿ ಅತ್ಯಧಿಕ ಪ್ರಮಾಣದಲ್ಲಿದೆ. ಶೈಕ್ಷಣಿಕ ವರ್ಷದಲ್ಲೇ ಕೋರ್ಸ್‌ಗಳನ್ನು, ವಿಷಯಗಳನ್ನು ಬದಲಿಸಲು ಅವಕಾಶವಿರುವ ಕಾರಣ ಹೀಗೆ ಶಿಕ್ಷಣವನ್ನು ಅರ್ಧದಲ್ಲೇ ಬಿಡುವುದನ್ನು ತಡೆಯುವಲ್ಲಿ ಎನ್‌ಇಪಿ ಮಹತ್ವದ ಪಾತ್ರ ವಹಿಸುತ್ತಿದೆ.

ಪ್ರೊ.ದೀಪಕ್ ಕುಮಾರ್ ಶ್ರೀವಾಸ್ತವ,
ಉಪಾಧ್ಯಕ್ಷ, ಯುಜಿಸಿ

‘ಲಾಭವಾಗಿದ್ದು ಖಾಸಗಿ ವಿಶ್ವವಿದ್ಯಾಲಯಗಳಿಗಷ್ಟೇ’

ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ, ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು, ಮಾನವಿಕ ಅಧ್ಯಯನಗಳು ಒಂದೇ ಕ್ಯಾಂಪಸ್‌ನಲ್ಲಿ ಲಭ್ಯವಿವೆ. ನೂತನ ಶಿಕ್ಷಣ ನೀತಿಯಿಂದ ನಿಜಕ್ಕೂ ಲಾಭವಾಗಿದ್ದು ಖಾಸಗಿ ವಿ.ವಿಗಳಿಗೆ ಮಾತ್ರ. ರಾಜ್ಯದ ಸರ್ಕಾರಿ ವಿದ್ಯಾಲಯಗಳಲ್ಲಿ ಈ ರೀತಿಯ ಸ್ಥಿತಿ ಇಲ್ಲ. ವೈದ್ಯಕೀಯ, ಕೃಷಿ, ವಿಜ್ಞಾನಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯಗಳಿವೆ. ಹೀಗಾಗಿ ರಾಜ್ಯದಲ್ಲಿ ಎನ್‌ಇಪಿಯ ಬಹುಶಿಸ್ತೀಯ ಕೋರ್ಸ್‌ಗಳು ಯಶಸ್ವಿಯಾಗಲಿಲ್ಲ.

ಲಕ್ಷಾಂತರ ಡೊನೇಷನ್ ನೀಡಿ ಖಾಸಗಿ ವಿ.ವಿ.ಗಳಿಗೆ ಹೋಗಲು ಸಾಧ್ಯವಿಲ್ಲದೇ ಇದ್ದ ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ನಮ್ಮ ಸರ್ಕಾರವು, ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ರದ್ದುಪಡಿಸಿತು. ಅಸಮಾನತೆಗೆ ಅವಕಾಶ ಮಾಡಿಕೊಡುವ ಎನ್‌ಇಪಿಯನ್ನು ದೇಶದಾದ್ಯಂತ ಕೇಂದ್ರ ಸರ್ಕಾರವೇ ರದ್ದುಪಡಿಸಬೇಕು.

ಡಾ.ಎಂ.ಸಿ.ಸುಧಾಕರ್,
ರಾಜ್ಯ ಉನ್ನತ ಶಿಕ್ಷಣ ಸಚಿವ

ಮೊದಲ ತಲೆಮಾರಿನ ಓದುಗಳಿಗೆ 6 ಚಿನ್ನದ ಪದಕ

ಒಂದೆಕರೆ ಜಮೀನಿದ್ದರೂ ನೀರಿಲ್ಲದ ಕಾರಣ, ಗೇಣಿ ಪದ್ಧತಿಯಲ್ಲಿ ಮತ್ತೊಬ್ಬರ ಹೊಲದಲ್ಲಿ ಬೆವರಿಳಿಸುವ ಅಪ್ಪ. ಆ ಹೊಲದಿಂದ ತಂದ ಮೇವು ಹಾಕಿ ಹಸುಗಳನ್ನು ಸಲಹುವ ತಾಯಿ. ಹಸುಗಳ ಕೊಡುವ ಹಾಲೇ ಜೀವನಾಧಾರ. ತಮ್ಮ ಹೆಸರನ್ನೂ ಬರೆಯಲು ಬರದ ಅಪ್ಪ–ಅಮ್ಮನ ಹೆಮ್ಮೆಯ ಮಗಳಿಗೆ ಆರು ಚಿನ್ನದ ಪದಕ ಮತ್ತು ಒಂದು ನಗದು ಬಹುಮಾನದ ಗೌರವ.

ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ವಿಶಾಲಾಕ್ಷಿ ವೈ.ಬಿ. ಅವರದ್ದು ರಾಮನಗರದ ಕೂಟುಗಲ್ಲು ಹೋಬಳಿಯ ಎರೇಹಳ್ಳಿ. ಅಕ್ಷರವೇ ಗೊತ್ತಿಲ್ಲದ ಕುಟುಂಬದಲ್ಲಿ ಶಾಲೆ, ಕಾಲೇಜು, ವಿಶ್ವವಿದ್ಯಾಲಯದ ಮೆಟ್ಟಿಲು ಏರಿದ, ಚಿನ್ನದ ಪದಕವನ್ನೂ ಪಡೆದ ಮೊದಲ ತಲೆಮಾರು ವಿಶಾಲಾಕ್ಷಿಯದ್ದೇ.

ಸಂಭ್ರಮದ ಕ್ಷಣ: ಇಬ್ಬರಿಗೆ ಒಂಬತ್ತು, ಇನ್ನಿಬ್ಬರಿಗೆ ಆರು, ಮತ್ತೂ ಹಲವರಿಗೆ ನಾಲ್ಕು– ಮೂರು–ಎರಡು–ಒಂದು ಚಿನ್ನದ ಪದಕಗಳು. ತಮ್ಮ ಹೆಸರು ಕೂಗಿದೊಡನೆ ವೇದಿಕೆ ಏರಿ ಚಿನ್ನದ ಪದಕಗಳಿದ್ದ ಫಲಕಗಳನ್ನು ಪಡೆದು ವಿದ್ಯಾರ್ಥಿಗಳು



ವಿಶಾಲಾಕ್ಷಿ ವೈ.ಬಿ.

ಪುಳಕಿತರಾದರೆ, ವೇದಿಕೆ ಕೆಳಗಿದ್ದ ಪೋಷಕರ ಕಣ್ಣಾಲಿಗಳು ತುಂಬಿದ್ದವು.

ಇಂತಹ ನೂರಾರು ಸಂಭ್ರಮದ ಕ್ಷಣಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವ ಸಾಕ್ಷಿಯಾಯಿತು. ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಘಟಿಕೋತ್ಸವದಲ್ಲಿ ಪದವಿ, ಸ್ನಾತಕ ಪದವಿ ಸೇರಿ ವಿವಿಧ ವಿಭಾಗಗಳ 158 ವಿದ್ಯಾರ್ಥಿಗಳಿಗೆ ಒಟ್ಟು 308 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

‘ಎತ್ತಿನಹೊಳೆ ಎರಡನೇ ಹಂತದಲ್ಲಿ ನೆಲಮಂಗಲಕ್ಕೆ ನೀರು’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಎತ್ತಿನಹೊಳೆ ಯೋಜನೆಯ ಮೊದಲನೇ ಹಂತ ಅನುಷ್ಠಾನಗೊಂಡಿದ್ದು, ಎರಡನೇ ಹಂತದಲ್ಲಿ ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲಕ್ಕೂ ನೀರು ಬರಲಿದೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.

ತಾಲ್ಲೂಕಿನ ಬಾಣವಾಡಿ, ಪಾಲನಹಳ್ಳಿ ಗ್ರಾಮಗಳಲ್ಲಿ ₹1 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಣವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೈಲನಹಳ್ಳಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಶೀಘ್ರದಲ್ಲಿ ಸ್ಥಾಪಿಸಲಾಗುವುದು ಎಂದರು. ಕಾಮಗಾರಿಗಳಿಗೆ ಗ್ರಾಮಸ್ಥರಿಂದಲೇ ಗುದ್ದಲಿ ಪೂಜೆ ಮಾಡಿಸಿದರು. ಪಾಲನಹಳ್ಳಿಯಲ್ಲಿ ಸ್ತ್ರೀಶಕ್ತಿ ಭವನ ನಿರ್ಮಾಣಕ್ಕೆ ₹ 50 ಲಕ್ಷ ಅನುದಾನ ನೀಡುವುದಾಗಿ ಭರವಸೆ ನೀಡಿದರು. ಗ್ರಾಮಗಳ ಪ್ರದಕ್ಷಿಣೆ ಮಾಡಿದ ಶಾಸಕ ಎನ್.ಶ್ರೀನಿವಾಸ್ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವ ಭರವಸೆ ನೀಡಿದರು.

ಭೌತ ವಿಜ್ಞಾನ ಲೇಖಕ ಪಾಲ್ ಜಿ. ಹ್ಯೂಯಿಟ್ ಅಭಿಮತ

ಅರಿವು ವಿಸ್ತರಿಸುವ ಗ್ರಂಥಗಳ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಗ್ರಂಥಗಳನ್ನು ನಿರಂತರವಾಗಿ ಅಧ್ಯಯನ ನಡೆಸುವ ಶಿಕ್ಷಕರು ವಿದ್ಯಾರ್ಥಿಗಳ ಅರಿವಿನ ವಿಸ್ತಾರವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಭವಿಷ್ಯದ ಸಮಾಜಕ್ಕೆ ಕೊಡುಗೆ ನೀಡುತ್ತಾರೆ ಎಂದು ಭೌತ ವಿಜ್ಞಾನ ಲೇಖಕ ಪಾಲ್ ಜಿ. ಹ್ಯೂಯಿಟ್ ಹೇಳಿದರು.

ಇನ್ಫೊಸಿಸ್ ಸೈನ್ಸ್ ಫೌಂಡೇಷನ್, ಪಿಯರ್ಸನ್ ಇಂಡಿಯಾ ಸೋಮವಾರ ‘ಭೌತವಿಜ್ಞಾನ ಕಲಿಕೆಯ ಅನುಭವವನ್ನು ಉತ್ಕೃಷ್ಟಗೊಳಿಸುವ’ ಕುರಿತು ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ವರ್ಚುಯಲ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು.

ಪಿಯರ್ಸನ್ ಇಂಡಿಯಾ ಪ್ರಕಟಿಸಿದ ಹ್ಯೂಯಿಟ್ ಅವರ ‘ಪರಿಕಲ್ಪನಾ ಭೌತಶಾಸ್ತ್ರ’ ಕೃತಿಯ 13ನೇ ಆವೃತ್ತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಇನ್ಫೊಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ, ‘ಭಾರತದಲ್ಲಿ ವಿಜ್ಞಾನ, ತಂತ್ರಜ್ಞಾನ ಎಂಜಿನಿಯರಿಂಗ್ ಮತ್ತು ಗಣಿತ (ಎಸ್‌ಟಿಇಎಂ) ಶಿಕ್ಷಣಕ್ಕೆ ಆದ್ಯತೆ ಹೆಚ್ಚುತ್ತಿದ್ದು, ಹೊಸ ಎತ್ತರ ತಲುಪುತ್ತಿದೆ. ವಿಕಸಿತ ಭಾರತದ ದೂರ ದೃಷ್ಟಿಗೆ ಪೂರಕವಾಗಿ ಯುವ ಪೀಳಿಗೆ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು’ ಎಂದರು.

‘ನಿತ್ಯದ ಬದುಕಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವಲ್ಲಿ ಭೌತವಿಜ್ಞಾನ ಪ್ರಯೋಜನಕಾರಿಯಾಗಿದೆ. ಭೌತಶಾಸ್ತ್ರದ ತತ್ವಗಳನ್ನು ಕರಗತಮಾಡಿಕೊಂಡು ವಿಷಯದ ಮೇಲೆ ಪ್ರಭುತ್ವ ಸಾಧಿಸಲು ಹ್ಯೂಯಿಟ್ ಅವರ ಪರಿಕಲ್ಪನಾ ಭೌತಶಾಸ್ತ್ರ ಆವೃತ್ತಿಗಳು ಸಹಕಾರಿಯಾಗಿವೆ. ವಿದ್ಯಾರ್ಥಿ ಕೇಂದ್ರಿತವಾದ ಇಂತಹ ಪುಸ್ತಕಗಳು ಭಾರತದ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲಿವೆ ಎಂದು’ ಆಶಿಸಿದರು.

ಪಿಯರ್‌ಸನ್ ಇಂಡಿಯಾ ಮುಖ್ಯಸ್ಥ ವಿನಯ್ ಸ್ವಾಮಿ ಉಪಸ್ಥಿತರಿದ್ದರು.

‘ಕೋಚಿಂಗ್ ಕೇಂದ್ರಗಳ ಭ್ರಮೆ ಕಳಚಬೇಕು’



‘ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳೇ ಸಾಧನೆ ಮಾಡುತ್ತಾರೆ ಎಂಬ ವಾದವನ್ನು ಎಂದಿಗೂ ಒಪ್ಪುವುದಿಲ್ಲ. ನುರಿತ ತಜ್ಞರ ಮಾರ್ಗದರ್ಶನ ಪಡೆಯುವ ಯಾವುದೇ ವಿದ್ಯಾರ್ಥಿ ಮನೆಯಲ್ಲೇ ಕುಳಿತು ಯಶಸ್ಸು ಗಳಿಸಬಹುದು’ ಎಂದು ನಾರಾಯಣ ಮೂರ್ತಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ವಿದ್ಯಾರ್ಥಿಗಳು ಮತ್ತು ಪೋಷಕರು ಕೋಚಿಂಗ್ ಕೇಂದ್ರಗಳ ಭ್ರಮೆಗೆ ಸಿಲುಕಿದ್ದಾರೆ. ಭ್ರಮೆ ಕಳಚಿ ನಿರಂತರ ಅಧ್ಯಯನ, ಗ್ರಹಿಕೆ, ವಿಶ್ಲೇಷಣಾ ಮನೋಭಾವ ರೂಢಿಸಿಕೊಂಡರೆ ಸಾಧನೆ ಸಾಧ್ಯ. ಶಾಲಾ ತರಗತಿಗಳನ್ನೂ ವಿದ್ಯಾರ್ಥಿಗಳು ಕಡೆಗಣಿಸಬಾರದು. ಶಿಕ್ಷಕರೊಂದಿಗಿನ ನೇರ ಸಂವಾದ ಹಲವು ಗೊಂದಲ, ಸಂದೇಹಗಳನ್ನು ನಿವಾರಿಸಲು ಸಹಕಾರಿಯಾಗುತ್ತದೆ ಎಂದರು.

ಡೆಂಗಿಗೆ ಔಷಧ, ವಿಜ್ಞಾನಕ್ಕೆ ಸವಾಲು: ವಿಜ್ಞಾನ ಎಷ್ಟೇ ಮುಂದುವರಿದರೂ ಡೆಂಗಿ, ಚಿಕುನ್‌ಗುನ್ಯಾದಂತಹ ಕಾಯಿಲೆಗಳಿಗೆ ನಿರ್ದಿಷ್ಟ ಔಷಧ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಪದವಿ ಪೂರೈಸಿದ ತಕ್ಷಣವೇ ಕೆಲಸ ಹುಡುಕುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಕೆಲಸ ಪಡೆಯುವ ಮೊದಲು ಆಳ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳುವ ಪ್ರವೃತ್ತಿ ಹೆಚ್ಚಬೇಕು ಎಂದು ಕಿವಿಮಾತು ಹೇಳಿದರು.

ಕೇಂದ್ರದ ಪತ್ರಕ್ಕೆ ಎಚ್‌.ಕೆ.ಪಾಟೀಲ ಆಕ್ರೋಶ

‘ಭದ್ರಾ ಮೇಲ್ದಂಡೆ: ರಾಜ್ಯಕ್ಕೆ ಕೇಂದ್ರದ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರಾ ಮೇಲ್ದಂಡೆ ಯೋಜನೆಗೆ ತನ್ನ ಪಾಲಿನ ₹5,300 ಕೋಟಿ ಬಿಡುಗಡೆ ಮಾಡುವ ಬದಲು ಹೊಸ ಷರತ್ತುಗಳನ್ನು ವಿಧಿಸುವ ಮೂಲಕ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಘೋರ ಅನ್ಯಾಯ ಮಾಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಜಲಶಕ್ತಿ ಕಾರ್ಯದರ್ಶಿಯವರು ಇದೇ 5ರಂದು ಬರೆದಿರುವ ಪತ್ರ ಕರ್ನಾಟಕಕ್ಕೆ ಆಘಾತ ತಂದಿದೆ ಎಂದೂ ಹೇಳಿದರು.

‘ಭದ್ರಾ ಯೋಜನೆಗೆ ಸಂಬಂಧಿಸಿದಂತೆ ಸಚಿವಾಲಯಕ್ಕೆ ಹಣಕಾಸಿನ ನವೀಕೃತ ಮಾಹಿತಿ ಸಲ್ಲಿಸಬೇಕು. ಈವರೆಗೆ ಮಾಡಿದ ಖರ್ಚು–ವೆಚ್ಚ, ಬಾಕಿ ವೆಚ್ಚ ಮತ್ತು ಅದರ ಆಧಾರದ ಮೇಲೆ ಕೇಂದ್ರದಿಂದ ಪಡೆಯಬೇಕಾದ ನೆರವು ಎಷ್ಟು ಎಂಬ ವಿವರಗಳನ್ನೂ ನೀಡಬೇಕು. ಅಲ್ಲದೇ, ಯೋಜನೆಯ ಭೌಗೋಳಿಕ ಹಂಚಿಕೆ, ಆದ್ಯತೆ ಮತ್ತು ಹಣಕಾಸು ಲಭ್ಯತೆಯ ಆಧಾರದ ಅನ್ವಯ ಹೊಸ ಯೋಜನೆಗಳನ್ನು ಸೇರಿಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಕೇಂದ್ರ ಜಲಸಂಪನ್ಮೂಲ ಕಾರ್ಯದರ್ಶಿ ದೇಬಶ್ರೀ ಮುಖರ್ಜಿ ರಾಜ್ಯಕ್ಕೆ ಪತ್ರ ಬರೆದಿದ್ದಾರೆ’ ಎಂದು ಪಾಟೀಲ ಹೇಳಿದರು.



ಅನುದಾನ ಬಿಡುಗಡೆ ಮಾಡದಿದ್ದರೆ ಕೇಂದ್ರದ ಕ್ರಮ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯ ಪಡೆಯಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ

ಎಚ್‌.ಕೆ.ಪಾಟೀಲ,
ಕಾನೂನು ಮತ್ತು ಸಂಸದೀಯ ಸಚಿವ

‘ಹೀಗೆ ಪತ್ರ ಬರೆಯುವ ಈ ಮೂಲಕ ಕೇಂದ್ರ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆ ಕುರಿತಾಗಿ ಕರ್ನಾಟಕಕ್ಕೆ ನೀಡಿದ್ದ ಬದ್ಧತೆಯಿಂದ ನುಣುಚಿಕೊಂಡಿದೆ. ಇದರ ಅರ್ಥ ₹5,300 ಕೋಟಿ ಅನುದಾನವನ್ನು ನೀಡುವುದಕ್ಕೆ ಹಿಂದೇಟು ಹಾಕುತ್ತಿದೆ. ಬಯಲುಸೀಮೆ ಜನರಿಗೆ ನೀರು ಕೊಡುತ್ತೇವೆ ಎಂದು ಹೇಳಿದ ಕೇಂದ್ರ ಸರ್ಕಾರ ಆ ಭಾಗದ ಜನರ ನಿರೀಕ್ಷೆಗಳಿಗೆ ತಣ್ಣೀರು ಎರಚಿದೆ’ ಎಂದರು.

‘ಕೇಂದ್ರ ಸರ್ಕಾರದ ನಿಯಮಗಳು ಮತ್ತು ಷರತ್ತುಗಳಂತೆ ಎಲ್ಲಾ ಹಂತಗಳಲ್ಲೂ ಈ ಯೋಜನೆಗೆ ಅನುಮೋದನೆ ಸಿಕ್ಕಿದೆ. ಅದರ ಆಧಾರದಲ್ಲೇ, ಮುಂಗಡ ಪತ್ರದಲ್ಲಿ ಘೋಷಣೆಯಾಗಿರುವ ಯೋಜನೆಗೆ ಹೊಸ ಷರತ್ತುಗಳ ಮೂಲಕ ನಿರಾಕರಿಸುತ್ತಿರುವುದು ಒಕ್ಕೂಟ ವ್ಯವಸ್ಥೆಯ ಉನ್ನತ ಸಂಪ್ರದಾಯಗಳಿಗೆ ಮತ್ತು ನಿಯಮಗಳಿಗೆ ತದ್ವಿರುದ್ಧ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸರ್ಕಾರಗಳು ಯಾವ ಪಕ್ಷದ್ದೇ ಆಗಿರಲಿ, ಪಕ್ಷಪಾತರಹಿತವಾಗಿ ಜನಹಿತ ಕಾಪಾಡುವ ಮೌಲ್ಯಗಳಿಗೆ ಕೇಂದ್ರದ ಬಿಜೆಪಿ ಸರ್ಕಾರ ತಿಲಾಂಜಲಿ ಇಟ್ಟಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿತ ಮೊತ್ತವನ್ನು ಕೋಟಿ ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

‘ಈ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಈವರೆಗೆ ₹9,713.28 ಕೋಟಿ ಖರ್ಚು ಮಾಡಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಶಕ್ತಿ ಮೀರಿ ಶ್ರಮ ಹಾಕಲಿದೆ. ಈ ಬೆಳವಣಿಗೆ ಕುರಿತು ಸಂಸದರ ಜತೆ ಚರ್ಚಿಸುತ್ತೇವೆ. ಮುಂದಿನ ಸಚಿವ ಸಂಪುಟದಲ್ಲೂ ಮುಂದಿನ ನಡೆ ಬಗ್ಗೆ ಚರ್ಚೆ ನಡೆಸುತ್ತೇವೆ’ ಎಂದರು.

ಬಿಜೆಪಿ ಅವಧಿಯಲ್ಲಿಯೇ ಮಹದಾಯಿ ಜಲ ವಿವಾದ ಕುರಿತು ನ್ಯಾಯಮಂಡಳಿ ರಚಿಸುವ ಕೋರಿಕೆ ಸಲ್ಲಿಸಲಾಗಿತ್ತು. ಅಗತ್ಯ ಇಲ್ಲದಿದ್ದರೂ ಕಾಂಗ್ರೆಸ್‌ನವರು ನ್ಯಾಯಮಂಡಳಿ ರಚಿಸಿದರು ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ. ಇದು ಅವರ ನಿರ್ಲಕ್ಷ್ಯ ಧೋರಣೆಯನ್ನು ಸೂಚಿಸುತ್ತದೆ ಎಂದು ಸಚಿವರು ಕಿಡಿಕಾರಿದರು.

ನಾಳೆಯಿಂದ ನಿರ್ಮಾಣ ಅಂತರರಾಷ್ಟ್ರೀಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್‌ಸ್ಟ್ರಕ್ಟ್ ವತಿಯಿಂದ ಇದೇ 12 ಮತ್ತು 13 ರಂದು ಕನಕಪುರ ರಸ್ತೆಯಲ್ಲಿರುವ ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ‘ನಿರ್ಮಾಣ–2024’ ಅಂತರರಾಷ್ಟ್ರೀಯ ಸಮ್ಮೇಳನ’ ನಡೆಯಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮ್ಮೇಳನ ಅಧ್ಯಕ್ಷ ಸಿ.ಆರ್. ಪಾರ್ಥಸಾರಥಿ, ‘ಭಾರತ, ರಸ್ತೆ ಮತ್ತು ಹೆದ್ದಾರಿ, ರೈಲು, ಜಲಮಾರ್ಗಗಳು, ಜಲವಿದ್ಯುತ್ ಸ್ಥಾವರಗಳು ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಈ ಹಂತದಲ್ಲಿ ಡಿಜಿಟಲೀಕರಣದ ಜೊತೆಗೆ ತಾಂತ್ರಿಕತೆಯೂ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನಿರ್ಮಾಣ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ’ ಎಂದು ಹೇಳಿದರು.

‘ಮೂಲಸೌಕರ್ಯ ಅಭಿವೃದ್ಧಿಯ ವಲಯ ಮತ್ತು ನಿರ್ಮಾಣ ಸಲಕರಣೆ ಉದ್ಯಮದಿಂದ ಪ್ರತಿನಿಧಿಗಳಿಗೆ ಮತ್ತು ಸಿವಿಲ್ ಎಂಜಿನಿಯರಿಂಗ್ ವೃತ್ತಿಪರರಿಗೆ ಜ್ಞಾನ ಒದಗಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ’ ಎಂದರು. ‘ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಧ್ಯಕ್ಷ ಟಿ.ಜಿ.ಸೀತಾರಾಮ್ ಅವರು ಸಮ್ಮೇಳನದಲ್ಲಿ ಮುಖ್ಯ ಭಾಷಣ ಮಾಡಲಿದ್ದಾರೆ’ ಎಂದರು. ಸುದ್ದಿಗೋಷ್ಠಿಯಲ್ಲಿ ಇನ್‌ಸ್ಟ್ರಕ್ಟ್‌ನ ಅಧ್ಯಕ್ಷ ಎ.ಆರ್. ಶೇಷಾದ್ರಿ, ಸಂಘಟನಾ ಸಮಿತಿ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ್ ಬಿ.ವಿ. ಉಪಸ್ಥಿತರಿದ್ದರು.

ನಟ ಧ್ರುವ ಸರ್ಜಾ ಮ್ಯಾನೇಜರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಮ್ ತರಬೇತುದಾರ ಪ್ರಶಾಂತ್ ಪೂಜಾರಿ ಮೇಲಿನ ಹಲ್ಲೆ ಪ್ರಕರಣದಲ್ಲಿ ನಟ ಧ್ರುವಸರ್ಜಾ ಮ್ಯಾನೇಜರ್ ಅಶ್ವಿನ್ ಸೇರಿ ನಾಲ್ವರನ್ನು ಬಂಧಿಸಲಾಗಿದೆ.

ನಟ ಧ್ರುವ ಸರ್ಜಾಗೆ ಆಪ್ತರಾಗಬೇಕು ಎಂಬ ಉದ್ದೇಶದಿಂದ ವೈಯಕ್ತಿಕ ಕಾರಣಕ್ಕೆ ಪ್ರಶಾಂತ ಪೂಜಾರಿ ಮೇಲೆ ಹಲ್ಲೆ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ಮ್ಯಾನೇಜರ್ ಅಶ್ವಿನ್, ಚಾಲಕ ನಾಗೇಂದ್ರ, ಹರ್ಷ ಮತ್ತು ಸುಬ್ಬು ಅವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

‘ಪ್ರಶಾಂತ್ ಪೂಜಾರಿ ಅವರು ಧ್ರುವ ಸರ್ಜಾಗೆ ಆಪ್ತರಾಗಿದ್ದರು. ಇಬ್ಬರ ನಡುವಿನ ಆಪ್ತತೆಯನ್ನು ನಾಗೇಂದ್ರ ಹಾಗೂ ಅಶ್ವಿನ್‌ಗೆ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ ಮೇ 26ರ ರಾತ್ರಿ ಬೈಕ್‌ನಲ್ಲಿ ಬಂದ ಹರ್ಷ ಮತ್ತು ಸುಭಾಷ್, ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದ ಪ್ರಶಾಂತ್ ಮೇಲೆ ಬೇಸ್‌ಬಾಲ್ ಬ್ಯಾಟ್, ಮಚ್ಚಿನಿಂದ ಹಲ್ಲೆ ಮಾಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಳಿಕ ಈ ಬಗ್ಗೆ ಪ್ರಶಾಂತ್ ದೂರು ನೀಡಿದ್ದರು. ಹಲ್ಲೆ ಮಾಡಿಸಿದ್ದು ಧ್ರುವ ಸರ್ಜಾ ಬಳಿ ಕೆಲಸ ಮಾಡಿಕೊಂಡಿದ್ದ ನಾಗೇಂದ್ರ ಎಂಬುದಾಗಿ ಹಾಗೂ ನಾಗೇಂದ್ರಗೆ ಬೆಂಬಲ ನೀಡಿದ್ದು ಅಶ್ವಿನ್ ಎಂಬ ಆರೋಪ ಕೇಳಿ ಬಂದಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ತಿಂಗಳಲ್ಲಿ 36 ಪ್ರಕರಣ, 42 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ದಂದೆಗೆ ಕಡಿವಾಣ ಹಾಕಲು ನಿರ್ಧರಿಸಿರುವ ಪೊಲೀಸರು, ಆಗಸ್ಟ್ ತಿಂಗಳಲ್ಲಿ ನಡೆಸಿ ಕಾರ್ಯಾಚರಣೆಯಲ್ಲಿ 36 ಪ್ರಕರಣ ದಾಖಲಿಸಿಕೊಂಡು, ಭಾರೀ ಪ್ರಮಾಣದ ಹೆರಾಯಿನ್, ಗಾಂಜಾ ವಶಕ್ಕೆ ಪಡಿಸಿಕೊಳ್ಳಲಾಗಿದೆ. ಇಬ್ಬರು ವಿದೇಶಿ ಪ್ರಜೆಗಳು ಸೇರಿ 42 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಆರೋಪಿಗಳಿಂದ 37 ಕೆ.ಜಿ ಗಾಂಜಾ, 600 ಗ್ರಾಂ ಅಫೀಮು, 84 ಗ್ರಾಂ ಹೆರಾಯಿನ್, 324 ಎಂಡಿಎಂಎ, 100 ಟೈಡಲ್ ಮಾತ್ರೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಕಾನೂನು ಬಾಹಿರವಾಗಿ ನಡೆಯುತ್ತಿರುವ ಜೂಜು ಕೇಂದ್ರಗಳ ಮೇಲೂ ದಾಳಿ ನಡೆಸಿದ್ದು, ವಿವಿಧ ಪ್ರಕರಣಗಳಲ್ಲಿ 353 ಮಂದಿಯನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಈ ಪೈಕಿ 2 ಮಟ್ಕಾ ದಂಧೆ ಪ್ರಕರಣ, 17 ಜೂಜು ಪ್ರಕರಣ, 2 ಕ್ರಿಕೆಟ್ ಬೆಟ್ಟಿಂಗ್ ಪ್ರಕರಣ, 13 ಇತರ ಬೆಟ್ಟಿಂಗ್ ಪ್ರಕರಣ, 9 ಅಬಕಾರಿ ಪ್ರಕರಣ, ಅಕ್ರಮ ಸಾಗಾಟಕ್ಕೆ ಸಂಬಂಧಿಸಿದಂತೆ 6 ಪ್ರಕರಣಗಳು, ಶಸ್ತ್ರಾಸ್ತ್ರ ತಡೆ ಕಾಯ್ದೆ ಅಡಿಯಲ್ಲಿ 7, ಕಾಪಿರೈಟ್ ಕಾಯ್ದೆ ಅಡಿ 15 ಸೇರಿದಂತೆ ಒಟ್ಟು 211 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ವಿವರಿಸಿದರು.

ವಂಚನೆ: ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಖಾತೆಯ ಪಾಸ್‌ವರ್ಡ್ ಬದಲಾಯಿಸಿ ಕೋಟ್ಯಂತರ ರೂಪಾಯಿ ಹಣ ವಂಚಿಸಿದ್ದ ಆರೋಪಿಯನ್ನು ಸಿಐಡಿ ಸೈಬರ್ ಅಪರಾಧ ವಿಭಾಗದ ಅಧಿಕಾರಿಗಳು ಬಂಧಿಸಿದ್ದಾರೆ.

ಸೈಫರ್ ಟೆಕ್ನಾಲಜೀಸ್ ಪ್ರೈವೇಟ್ ಕಂಪನಿಯ ಮುಖ್ಯಕಾರ್ಯನಿರ್ವಾಹಣಾಧಿಕಾರಿ (ಸಿಇಒ) ಅಖಿಲ್ ಗುಪ್ತಾ ಅವರು ನೀಡಿದ ದೂರಿನ ಮೇರೆಗೆ ಹರಿಯಾಣದ ಶುಭಾಂಗ್ ಜೈನ್ (26) ಎಂಬುವರನ್ನು ಮುಂಬೈನಲ್ಲಿ ಬಂಧಿಸಿ, ಎರಡು ಮೊಬೈಲ್ ಹಾಗೂ ಎರಡು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

‘ನಗರದ ಸೈಫರ್ ಟೆಕ್ನಾಲಜೀಸ್ ಕಂಪನಿಯಲ್ಲಿ ಕ್ರಿಪ್ಟೊ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಿ ಶುಭಾಂಗ್ ಕೆಲಸ ಮಾಡುತ್ತಿದ್ದರು. ಮುಖ್ಯಸ್ಥರ ಗಮನಕ್ಕೆ ತರದೆ ಕಂಪನಿಯ ವ್ಯವಹಾರಕ್ಕೆ ಬಳಸುತ್ತಿದ್ದ ಕ್ರಿಪ್ಟೊ ಪಾಸ್‌ವರ್ಡ್ ಅನ್ನು ಬದಲಿಸಿದ್ದರು. ಬಳಿಕ ಖಾತೆಯಲ್ಲಿದ್ದ ಕ್ರಿಪ್ಟೊ ಕರೆನ್ಸಿಯನ್ನು ರೂಪಾಯಿಗೆ ಪರಿವರ್ತಿಸಿ, ಕಂಪನಿಗೆ ಸುಮಾರು ₹ 56 ಕೋಟಿ ವಂಚಿಸಿದ ಬಗ್ಗೆ ದೂರು ನೀಡಲಾಗಿತ್ತು. ಸುಬ್ರಹ್ಮಣ್ಯ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಹೆಚ್ಚಿನ ತನಿಖೆಗಾಗಿ ಸಿಐಡಿ ಘಟಕಕ್ಕೆ ವರ್ಗಾಯಿಸಲಾಗಿತ್ತು’ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.



ಶುಭಾಂಗ್ ಜೈನ್

‘ಆರೋಪಿಯು ತಮಿಳುನಾಡಿನ ವೆಲ್ಲೂರು ಇನ್‌ಸ್ಟಿಟ್ಯೂಟ್‌ನಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮುಗಿಸಿ, 2021ರಲ್ಲಿ ಕೆಲಸಕ್ಕೆ ಸೇರಿದ್ದ. ಕುಟುಂಬಸ್ಥರು ಹಾಗೂ ಸ್ನೇಹಿತರ ಖಾತೆಗೆ ಹಣವನ್ನು ವರ್ಗಾಯಿಸಿದ್ದರು. ಅಲ್ಲದೇ ಕೆಲ ಸ್ನೇಹಿತರಿಗೆ ಲಕ್ಷಾಂತರ ರೂಪಾಯಿ ಸಾಲ ನೀಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದಿದ್ದಾರೆ.‘ಕಂಪನಿ ಯಲ್ಲಿ ಕೆಲಸ ಮಾಡುವಾಗ ನಗರದ ಎಚ್‌ಎಸ್‌ ಆರ್ ಲೇಔಟ್‌ನಲ್ಲಿ ಉಳಿದುಕೊಂಡಿದ್ದ ಶುಭಾಂಗ್, ಕೆಲಸ ತೊರೆದ ಬಳಿಕ ಅಹಮದಾಬಾದ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಬಂಧನ ಭೀತಿಯಿಂದ ಅಹಮದಾಬಾದ್‌ನಿಂದ ಮುಂಬೈಗೆ ತೆರಳಿದ್ದರು’ ಎಂದು ತಿಳಿಸಿದ್ದಾರೆ.

‘ಆರೋಪಿ ಬ್ಯಾಂಕ್ ಖಾತೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕ್ರಿಪ್ಟೊ ವಾಲೆಟ್‌ನಿಂದ ಯಾರಿಗೆ ಎಷ್ಟು ಹಣ ನೀಡಿದ್ದರು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಅಲ್ಲದೇ ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ವಿದೇಶಿ ಪೆಡ್ಲರ್ ಸೇರಿ ಏಳು ಮಂದಿ ಬಂಧನ, ತೂಕದ ಯಂತ್ರ, 13 ಮೊಬೈಲ್ ಜಪ್ತಿ

₹5 ಕೋಟಿ ಅಧಿಕ ಮೌಲ್ಯದ ಮಾದಕ ವಸ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ಹಾಗೂ ಮಾದಕ ದ್ರವ್ಯ ನಿಗ್ರಹ ದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನಗರದ ವಿವಿಧೆಡೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಮಹಿಳಾ ವಿದೇಶಿ ಪೆಡ್ಲರ್ ಸೇರಿ ಏಳು ಮಂದಿಯನ್ನು ಬಂಧಿಸಿದ್ದಾರೆ.



ಲಕ್ಷ್ಮಣ ನಾಯಕ್

ಕರೀಂ ಬೇಗ್, ತಾರೀಕ್ ಅಜೀಜ್, ಇಕ್ರಂ, ಕೆನ್ಯಾದ ರೋಜ್, ನೆಲಮಂಗಲದ ಅಭಿಷೇಕ್ ಗೌಡ, ಶೀಜಿನ್ ಹಾಗೂ ರೌವನಕ್ ಗುಪ್ತಾ ಎಂಬುವರನ್ನು ಬಂಧಿಸಿ, ₹ 5 ಕೋಟಿಗೂ ಅಧಿಕ ಮೌಲ್ಯದ ಗಾಂಜಾ, ಹೆರಾಯಿನ್, ಎಂಡಿಎಂಎ ಕ್ರಿಸ್ಟಲ್ ಮತ್ತು ಹೈಡ್ರೊ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಕೃತ್ಯಕ್ಕೆ ಬಳಸಿದ್ದ ಒಂದು ದ್ವಿಚಕ್ರ ವಾಹನ ಹಾಗೂ 13 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬ್ಯುಸಿನೆಸ್ ವೀಸಾ, ವಿದ್ಯಾರ್ಥಿ ವೀಸಾ, ವೈದ್ಯಕೀಯ ತುರ್ತು ವೀಸಾ ಮೇಲೆ ವಿದೇಶದಿಂದ ಬಂದಿರುವ ಕೆಲವರು ಮಾದಕ ವಸ್ತು ಮಾರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ವಿವೇಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ರೋಸ್ ಗಾರ್ಡನ್ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಡ್ರಗ್ ಪೆಡ್ಲರ್ ಕರೀಂ ಬೇಗ್ ಎಂಬುವವರನ್ನು ಬಂಧಿಸಲಾಯಿತು. ಆತನಿಂದ ₹ 10 ಲಕ್ಷ ಮೌಲ್ಯದ 10 ಕೆ.ಜಿ. ಗಾಂಜಾ, ಎಲೆಕ್ಟ್ರಾನಿಕ್ ತೂಕದ ಯಂತ್ರ, ಮೊಬೈಲ್ ವಶಕ್ಕೆ ಪಡೆಯಲಾಗಿದೆ.

ಯಶವಂತಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜೆ.ಪಿ.ಪಾರ್ಕ್ ಬಳಿಯ ಎಸ್.ಬಿ.ಎಂ ಕಾಲೊನಿಯಲ್ಲಿ ಮಣಿಪುರದ ಡ್ರಗ್ ಪೆಡ್ಲರ್ ವಶಕ್ಕೆ ಪಡೆದು, ₹75 ಲಕ್ಷ ಮೌಲ್ಯದ 84 ಗ್ರಾಂ ಹೆರಾಯಿನ್, ತೂಕದ ಯಂತ್ರವನ್ನು ಜಪ್ತಿ ಮಾಡಲಾಗಿದೆ. ಆರೋಪಿಗೆ ಗಾಂಜಾ ಪೂರೈಕೆ ಮಾಡಿದ್ದ ಸ್ನೇಹಿತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬ್ಯುಸಿನೆಸ್ ವೀಸಾದಲ್ಲಿ ಭಾರತಕ್ಕೆ: ವಿದ್ಯಾರಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ಎಂಟನೇ ಮುಖ್ಯ ರಸ್ತೆಯಲ್ಲಿರುವ ಮನೆಯಲ್ಲಿ ಕೆನ್ಯಾದ ಡ್ರಗ್ ಪೆಡ್ಲರ್ ರೋಜಾ ಎಂಬುವವರನ್ನು ಬಂಧಿಸಿ, ₹10 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ 2019ರಲ್ಲಿ ಬ್ಯುಸಿನೆಸ್ ವೀಸಾ ಮೇಲೆ ಭಾರತಕ್ಕೆ ಬಂದಿದ್ದರು. ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿಸಿಕೊಂಡಿದ್ದ ಕಾರಣ 2023ರಲ್ಲಿ ಕೆ.ಜಿ. ನಗರ ಪೊಲೀಸ್ ಠಾಣೆಯಲ್ಲಿ ಇವರ ವಿರುದ್ಧ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿತ್ತು. ಜಾಮೀನಿನ ಮೇಲೆ ಹೊರ ಬಂದು ಮತ್ತೆ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದಾರೆ ಎಂದು ಹೇಳಿದರು.


ಎಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ನೆಲಮಂಗಲ ನಿವಾಸಿ ಅಭಿಷೇಕ್ ಗೌಡ ಎಂಬಾತ ಅಂಚೆ ಮೂಲಕ ಬೆಲ್ಜಿಯಂನಿಂದ ₹ 1 .50 ಕೋಟಿ ಮೌಲ್ಯದ ಎಲ್‌ಎಸ್‌ಡಿ ಸ್ಟ್ರಿಪ್ಸ್ ತರಿಸಿ ಕೊಂಡಿದ್ದರು. ಬೆಲ್ಜಿಯಂನಲ್ಲಿರುವ ಸ್ನೇಹಿತ ಇದನ್ನು ಕಳುಹಿಸಿರುವುದಾಗಿ ಆರೋಪಿ ತಿಳಿಸಿದ್ದು, ಇವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಮಂಗಮ್ಮನ ಪಾಳ್ಯದಲ್ಲಿ ಹೈಡ್ರೊ ಗಾಂಜಾ ಮಾರಾಟ ಮಾಡುತ್ತಿದ್ದ ಕೇರಳದ ಡ್ರಗ್ ಪೆಡ್ಲರ್ ಶೀಜಿನ್ ಎಂಬಾತನನ್ನು ಬಂಧಿಸಿ, ₹1.50 ಗ್ರಾಂ ಮೌಲ್ಯದ ಮಾದಕವಸ್ತು ವಶ ಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೆ.ಬಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡುತ್ತಿದ್ದ ಮಹೇಶ್ವರಿ ನಗರದ ಲಕ್ಷ್ಮಣ ನಾಯಕ್ ಎಂಬುವವರನ್ನು ಬಂಧಿಸಿ, ₹ 3 ಲಕ್ಷ ಮೌಲ್ಯದ 2 ಕೆ.ಜಿ. 300 ಗ್ರಾಂ ಗಾಂಜಾ, ದ್ವಿಚಕ್ರ ವಾಹನ, ಮೊಬೈಲ್ ಫೋನ್, ₹ 8,500 ನಗದು ವಶಕ್ಕೆ ಪಡೆಯಲಾಗಿದೆ. ಈತ ಒಡಿಶಾದಿಂದ ಕಡಿಮೆ ಬೆಲೆಗೆ ಗಾಂಜಾವನ್ನು ತಂದು, ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡಿ ಹಣ ಸಂಪಾದಿಸುತ್ತಿರುವುದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೇಕರಿ ಪದಾರ್ಥ ಬಾಕ್ಸ್‌ಗಳಲ್ಲಿ ಮಾದಕ ವಸ್ತು

ಥಾಯ್ಲೆಂಡ್‌ನಿಂದ ಮಾದಕ ವಸ್ತುಗಳನ್ನು ಬೆಂಗಳೂರಿಗೆ ತರಿಸಿಕೊಂಡು ಕಾಲೇಜು ವಿದ್ಯಾರ್ಥಿಗಳು ಮತ್ತು ಪರಿಚಿತರಿಗೆ ಪೂರೈಸುತ್ತಿದ್ದ ಆರೋಪಿ ತವನೀಶ್ ಎಂಬುವವರನ್ನು ಬಂಧಿಸಿ, ₹ 1.22 ಕೋಟಿ ಮೌಲ್ಯದ 2 ಕೆ.ಜಿ 770 ಗ್ರಾಂ ಹೈಡ್ರೊ ಗಾಂಜಾವನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.




ಬೇಕರಿ ಪದಾರ್ಥದ ಬಾಕ್ಸ್‌ನಲ್ಲಿ ಮಾದಕ ವಸ್ತು ಆಮದು

‘ನಗರದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಆರೋಪಿ, ಡಿ.ಜೆ ಪಾರ್ಟಿಗಳಲ್ಲಿ ಭಾಗಿಯಾಗಲು ಹಿಮಾಚಲ ಪ್ರದೇಶಕ್ಕೆ ತೆರಳುತ್ತಿದ್ದ. ಅದೇ ಸಮಯದಲ್ಲಿ ಆರೋಪಿಗೆ ಕೇರಳದ ಸೈಜು ಎಂಬಾತನ ಪರಿಚಯವಾಗಿತ್ತು. ಸೈಜು ಮೂಲಕ ಥಾಯ್ಲೆಂಡ್‌ನಿಂದ ಹೈಡ್ರೊ ಗಾಂಜಾವನ್ನು ತರಿಸಿಕೊಳ್ಳುತ್ತಿದ್ದರು. ಗಾಂಜಾವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಪ್ಯಾಕ್ ಮಾಡಿ, ಬೇಕರಿ ಪದಾರ್ಥಗಳ ಬಾಕ್ಸ್‌ಗಳಲ್ಲಿ ತುಂಬಿ, ಅವುಗಳನ್ನು ಬಿಸ್ಕೆಟ್, ಚಾಕೊಲೇಟ್ ಎಂದು ಬಿಂಬಿಸಿ ಸೈಜು ಮೂಲಕ ಬೆಂಗಳೂರಿಗೆ ತರಿಸಿಕೊಳ್ಳುತ್ತಿದ್ದರು. ಬಳಿಕ ಅವುಗಳನ್ನು ಕಾಲೇಜು ವಿದ್ಯಾರ್ಥಿಗಳು ಮತ್ತು ಪರಿಚಿತರಿಗೆ ಬಂಧಿತ ಆರೋಪಿ ಮಾರಾಟ ಮಾಡುತ್ತಿದ್ದರು. ಇವರ ವಿರುದ್ಧ ನಗರದ ಠಾಣೆಗಳಲ್ಲಿ ನಾಲ್ಕು ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಹೋದರಿ ಮದುವೆಗಾಗಿ ಗಾಂಜಾ ಮಾರಾಟ

ರೈಲಿನ ಮೂಲಕ ಒಡಿಶಾದಿಂದ ಮಾದಕ ವಸ್ತುಗಳನ್ನು ತಂದು ನಗರದಲ್ಲಿ ಮಾರಾಟ ಮಾಡಲು ಯತ್ನಿಸಿದ್ದ ಆರೋಪಿಯನ್ನು ಬಾಣಸವಾಡಿ ಠಾಣಾ ಪೊಲೀಸರು ಬಂಧಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬದ್ರುದ್ದೀನ್ ಬಂಧಿತ ಆರೋಪಿ. ಇವರಿಂದ ₹1 ಲಕ್ಷ ಮೌಲ್ಯದ 5 ಕೆ.ಜಿ 20 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಬದ್ರುದ್ದೀನ್‌ಗೆ ಕುಟುಂಬ ನಿರ್ವಹಣೆ ಕಷ್ಟವಾಗಿತ್ತು. ಸಹೋದರಿಯ ಮದುವೆ ಮಾಡುವ ಜವಾಬ್ದಾರಿ ಸಹ ಇತ್ತು. ಮಾದಕ ವಸ್ತುಗಳನ್ನು ಮಾರಾಟ ಮಾಡಿ, ಹೆಚ್ಚು ಆದಾಯ ಗಳಿಸಬಹುದು ಎಂದುಕೊಂಡು ಸರಬರಾಜುದಾರರ ನಂಬರ್ ಪಡೆದು ಒಡಿಶಾಗೆ ತೆರಳಿದ್ದರು. ಸೆ.2ರಂದು ಬೆಂಗಳೂರಿನ ರೈಲು ನಿಲ್ದಾಣಕ್ಕೆ ಬಂದಿಳಿದ ಆರೋಪಿಯನ್ನು ಗಾಂಜಾ ಸಮೇತ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.



ವಿದ್ಯುತ್‌ಚಾಲಿತ ವಾಹನಗಳು ವರವೋ? ಶಾಪವೋ?



ಇ.ಎಸ್. ಸುಧೀಂದ್ರ ಪ್ರಸಾದ್

ಜಗತ್ತಿನಲ್ಲಿ ಒಟ್ಟು ಉತ್ಪಾದನೆಯಾಗುತ್ತಿರುವ ಇಂಗಾಲದ ಡೈಆಕ್ಸೈಡ್ ಪ್ರಮಾಣದಲ್ಲಿ ಶೇ 75ರಷ್ಟು ಪ್ರಮಾಣ ಏಷ್ಯಾದ ಆರ್ಥಿಕ ಪ್ರದೇಶಗಳ ರಸ್ತೆ ಸಾರಿಗೆಯ ಕೊಡುಗೆಯಾಗಿದೆ. ಏಷ್ಯಾದಿಂದ ಹೊರಸೂಸುವ ಒಟ್ಟು 79.5 ಕೋಟಿ ಟನ್ ಇಂಗಾಲದ ಡೈಆಕ್ಸೈಡ್‌ನಲ್ಲಿ ಭಾರತದ ಪ್ರಮಾಣ 29.1 ಕೋಟಿ ಟನ್. ಇದಕ್ಕೆ ಪೂರಕವಾಗಿ ವಿದ್ಯುತ್ ಚಾಲಿತ ವಾಹನಗಳ ಮಾರುಕಟ್ಟೆಯೂ ವಿಸ್ತರಿಸುತ್ತಿದೆ. ಇದಕ್ಕೆ ನೀಡುತ್ತಿರುವ ಕಾರಣ, ಇಂಧನದ ಬೆಲೆಯಲ್ಲಿ ಭಾರಿ ಏರಿಕೆ ಮತ್ತು ಸಾಂಪ್ರದಾಯಿಕ ದಹನಕಾರಿ ಎಂಜಿನ್‌ಗಳು ಹಸಿರುಮನೆ ಪರಿಣಾಮಕ್ಕೆ ದೊಡ್ಡ ಕೊಡುಗೆ ನೀಡುತ್ತಿವೆ ಎಂಬ ವಾದವೂ ಒಳಗೊಂಡಿದೆ. ಬ್ಯಾಟರಿ ಉತ್ಪಾದನೆಯು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದು ಈಗ ಬಹುಚರ್ಚಿತ ವಿಷಯವಾಗಿದೆ. ಹಾಗಿದ್ದರೆ EVಗಳು ಪರಿಸರಕ್ಕೆ ಪೂರಕವೇ?

ವಿದ್ಯುತ್‌ಚಾಲಿತ ವಾಹನಗಳಲ್ಲಿ ಹಲವು ಬಗೆ. ಬ್ಯಾಟರಿ ವಾಹನಗಳು (ಇವಿ) , ಹೈಬ್ರೀಡ್ ಎಲೆಕ್ಟ್ರಿಕ್ ಹಾಗೂ ಇಂಧನಕೋಶ ಎಲೆಕ್ಟ್ರಿಕ್ ವಾಹನ (ಬಿಇವಿ) ಎಂಬುವು ಇವೆ. ಇಂಥ ವಾಹನಗಳಿಗೆ ಇತ್ತೀಚೆಗೆ ಭಾರತದಲ್ಲಿ ಭಾರೀ ಬೇಡಿಕೆ ಉಂಟಾಗಿದೆ.

ಪರಿಸರಮಾಲಿನ್ಯವನ್ನು ಕಡಿಮೆ ಮಾಡಬೇಕು ಎಂಬುದು ನಿರ್ವಿವಾದ. ಆದರೆ ಬ್ಯಾಟರಿ ಬಳಕೆಯು ಸುಸ್ಥಿರ ಎಂಬ ಅಂಶ ಮಾತ್ರ ಚರ್ಚಿತ ವಿಷಯ. ಒಂದು ವಿದ್ಯುತ್‌ಚಾಲಿತ ವಾಹನವನ್ನು ಪರಿಗಣಿಸಿದರೆ ಅದರಲ್ಲಿ ಎರಡು ರೀತಿಯ ಪರಿಸರಕ್ಕೆ ಹೊರೆಯಾಗುವ ಪ್ರಮುಖ ಅಂಶಗಳಿವೆ. ಇಂಧನ ದಹಿಸುವ ಎಂಜಿನ್‌ಗೂ ಹಾಗೂ ವಿದ್ಯುತ್‌ಚಾಲಿತ ವಾಹನಗಳಿಗೂ ಹೋಲಿಸುವುದೇ ಆದರೆ, ಅದರ ತಯಾರಿಕೆಯನ್ನು ಗಮನಿಸಿ, ಅಂಕಿ–ಅಂಶಗಳನ್ನು ಪರಿಗಣಿಸಬೇಕೇ ಹೊರತು, ಅಂತಿಮ ಉತ್ಪನ್ನವನ್ನಲ್ಲ. ಇದನ್ನು ಇನ್ನೂ ಸರಳವಾಗಿ ಹೇಳಬೇಕೆಂದರೆ, ವಾಹನದ ಚಾಸೀಸ್ ನಿರ್ಮಾಣವಾಗುವುದು ಅಲುಮಿನಿಯಂ ಹಾಗೂ ಸ್ಟೀಲ್ ಬಳಕೆಯಿಂದ. ಇದು ಕಂಬಶ್ಚನ್ ಹಾಗೂ ಬ್ಯಾಟರಿ ಚಾಲಿತ ವಾಹನ ಎರಡಕ್ಕೂ ಸಾಮಾನ್ಯ. ಆದರೆ, ಬ್ಯಾಟರಿ ತಯಾರಿಕೆಯಿಂದ ಪರಿಸರದ ಮೇಲಾಗುವ ಬದಲಾವಣೆ ಇವೆಲ್ಲದಕ್ಕೂ ಮೀರಿದ್ದು.

ಪರಿಸರದ ಮೇಲೆ ಪರಿಣಾಮಗಳು

ಬ್ಯಾಟರಿಗಳನ್ನು ಲೀಥಿಯಂ, ಕೊಬಾಲ್ಟ್ ಹಾಗೂ ನಿಕ್ಕಲ್‌ನಿಂದ ತಯಾರಿಸಲಾಗುತ್ತದೆ. ಆದರೆ ಭಾರತದಲ್ಲಿ ಲೀಥಿಯಂ ನಿಕ್ಷೇಪಗಳು ವಿರಳಾತಿವಿರಳ. ಹೀಗಾಗಿ ಲೀಥಿಯಂ ಅಯಾನ್ ಅನ್ನು ಚೀನಾದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ರಾಸಾಯನಿಕ ಗಣಿಗಾರಿಕೆಯೂ ದುಬಾರಿ. ಪರಿಸರಕ್ಕೆ ಮಾರಕವೂ ಹೌದು. ಅಷ್ಟು ಮಾತ್ರವಲ್ಲ, ಇವುಗಳ ಗಣಿಗಾರಿಕೆ ಸಂದರ್ಭದಲ್ಲೂ ಹಾನಿಕಾರಕ ರಾಸಾಯನಿಕಗಳು ವಾತಾವರಣಕ್ಕೆ ಬಿಡುಗಡೆಗೊಳ್ಳುತ್ತವೆ. ಇದಕ್ಕೆ ಉದಾಹರಣೆ ಎಂಬಂತೆ, 2016ರಲ್ಲಿ ಟಿಬೆಟ್‌ನ ಲಿಖಿ ನದಿಯಲ್ಲಿ ಸಾವಿರಾರು ಮೀನುಗಳು ಸತ್ತು ತೇಲುತ್ತಿದ್ದವು. ಆಗ ಅಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರು ಗಾಂಝಿರ್‌ಝೂ ರೊಂಗಾ ಲೀಥಿಯಂ ಗಣಿಗಾರಿಕಾ ಕಂಪನಿಯ ಅವೈಜ್ಞಾನಿಕ ಗಣಿಗಾರಿಕೆ ವಿರುದ್ಧ ಸಿಡಿದೆದ್ದಿರು. ಈ ಗಣಿಕೆಗಾರಿಕೆಯಿಂದ ಹಾನಿಕಾರಕ ರಾಸಾಯನಿಕ ಬಿಡುಗಡೆಯಾಗುತ್ತಿದೆ, ಸುತ್ತಲಿನ ಪರಿಸರವೂ ನಾಶವಾಗುತ್ತಿದೆ ಎಂದು ಆರೋಪಿಸಿದ್ದರು. ಈ ಗಣಿಕೆಗಾರಿಕೆಗೆ ಲಿಖಿ ನದಿ ಮಾತ್ರವಲ್ಲ, ಜಿನ್ ನದಿಯೂ ಮಲಿನಗೊಂಡಿತ್ತು.

ಬ್ಯಾಟರಿಗಳ ಉತ್ಪಾದನೆಗೂ ಹೆಚ್ಚಿನ ವಿದ್ಯುತ್ ಬೇಕು. ಹೀಗಾಗಿ ವಿದ್ಯುತ್ ಚಾಲಿತ ವಾಹನಗಳಿಂದ ಇಂಗಾಲ ಹೊರಸೂಸುವಿಕೆ ಪ್ರಕ್ರಿಯೆ ಹೆಚ್ಚೇ ಹೊರತು, ಕಡಿಮೆಯಂತೂ ಅಲ್ಲ. ‘ಇವಿ’ ಹಾಗೂ ‘ಕಂಬಶ್ಚನ್ ಎಂಜಿನ್’ – ಎರಡನ್ನೂ ಹೋಲಿಸಿದರೆ, ವಾತಾವರಣಕ್ಕೆ ಇಂಗಾಲಯದ ಹೊರಸೂಸುವಿಕೆಯು, ‘ಇವಿ’ ವಾಹನಗಳ ತಯಾರಿಕೆಯಿಂದಲೇ ಹೆಚ್ಚು. ಹಾಗೆಯೇ ಒಂದು ಟನ್ ಲೀಥಿಯಂ (100 ಕಾರುಗಳಿಗೆ ಅಗತ್ಯ) ಉತ್ಪಾದಿಸಲು ಎರಡು ದಶಲಕ್ಷ ಟನ್ ನೀರು ಬೇಕು. ಹೀಗಾಗಿ ಇವಿ ಕಾರುಗಳ ಬ್ಯಾಟರಿ ತಯಾರಿಕೆ ಪ್ರಕ್ರಿಯೆಗೆ ಅತಿ ಹೆಚ್ಚು ನೀರು ಬೇಕು. ಇದರಿಂದಾಗಿಯೇ ದಕ್ಷಿಣ ಅಮೆರಿಕಾದ ಲೀಥಿಯಂ ತ್ರಿಭುಜ ಎಂದೇ ಕರೆಯಲಾಗುವ ಚಿಲಿ, ಅರ್ಜೆಂಟಿನಾ ಹಾಗೂ ಬೊಲಿವಿಯಾದಲ್ಲಿ ಅತಿ ಹೆಚ್ಚು ಲೀಥಿಯಂ ಸಿಗುತ್ತಿದೆಯಾದರೂ, ಹೆಚ್ಚಿನ ಪ್ರಮಾಣದ ನೀರೂ ಖರ್ಚಾಗುತ್ತಿದೆ. ಇದರಿಂದ ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಅಲ್ಲಿನ ಜನ ಈ ಲೀಥಿಯಂ ಗಣಿಗಾರಿಕೆ ವಿರುದ್ಧ ತೀವ್ರವಾಗಿ ಧ್ವನಿ ಎತ್ತಲಾರಂಭಿಸಿದ್ದಾರೆ. ನಿಕ್ಕಲ್ ಹಾಗೂ ಕೊಬಾಲ್ಟ್‌ಗಳನ್ನು ಪಡೆಯಲೂ ಇಷ್ಟೇ ಪ್ರಮಾಣದಲ್ಲಿ ಪರಿಸರ ನಾಶವಾಗುತ್ತದೆ.

ಈ ನಾಶ ಕೇವಲ ‘ಇವಿ’ಗಳಿಂದಲೇ ಎಂದೇನೂ ಇಲ್ಲ, ಈ ರಾಸಾಯನಿಕಗಳನ್ನು ಬಳಸುವ ಯಾವುದೇ ಬ್ಯಾಟರಿ ತಯಾರಿಕೆಯಲ್ಲೂ ಪರಿಸರ ನಾಶ ಇದ್ದೇ ಇದೆ. ಮರುಬಳಕೆಯ ಬ್ಯಾಟರಿಗಳು ಒಂದಷ್ಟು ರಿಯಾಯಿತಿ ನೀಡುತ್ತವೆಯಾದರೂ, ಅವುಗಳೂ ಪರಿಸರಕ್ಕೆ ಮಾರಕ ಎಂಬ ಅಂಶವನ್ನು ನಾವು ಪರಿಗಣಿಸಲೇಬೇಕು. ಆದರೆ ಇಡೀ ಜಗತ್ತಿನಲ್ಲಿ ಹೀಗೆ ಮರುಬಳಕೆಯಾಗುತ್ತಿರುವ ಬ್ಯಾಟರಿಗಳ ಪ್ರಮಾಣ ಶೇ 5 ಮಾತ್ರ. ಇಷ್ಟು ಸಣ್ಣ ಪ್ರಮಾಣಕ್ಕೆ ಕಾರಣ, ಈ ಪ್ರಕ್ರಿಯೆ ದುಬಾರಿ. ಹೀಗಾಗಿ ಬಹಳಷ್ಟು ಬ್ಯಾಟರಿಗಳನ್ನು ಬಿಸಾಡಲಾಗುತ್ತಿದೆ. ಅದು ಪ್ರಕೃತಿಗೆ ಇನ್ನಷ್ಟು ಮಾರಕವಾಗಿ ಪರಿಣಮಿಸಿದೆ.

ಬ್ಯಾಟರಿಗಳ ತಯಾರಿಕೆಯಿಂದಷ್ಟೆ ಅಲ್ಲ, ಬ್ಯಾಟರಿಗಳ ಬಳಕೆಯೂ ಪರಿಸರದ ವಿನಾಶಕ್ಕೆ ಕಾರಣವಾಗುತ್ತದೆ. ಅದರಲ್ಲೂ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮುಖ್ಯ ಇಂಧನಮೂಲವೇ ವಿದ್ಯುಚ್ಛಕ್ತಿ. ಹೀಗೆ ಬ್ಯಾಟರಿಚಾಲಿತ ವಾಹನಗಳನ್ನು ಚಾರ್ಜ್ ಮಾಡುವುದೂ ಪರಿಸರಕ್ಕೆ ಪರೋಕ್ಷವಾಗಿ ಮಾರಕವಾಗಿದೆ. 2021ರಲ್ಲಿ ಇಂಧನ ಇಲಾಖೆಯ ಮಾಹಿತಿ ಅನ್ವಯ, ಭಾರತವು ಉಷ್ಣ ವಿದ್ಯುತ್ ಘಟಕಗಳ ಮೂಲಕ ಪಡೆಯುತ್ತಿರುವ ವಿದ್ಯುತ್ ಪ್ರಮಾಣ ಶೇ 61ರಷ್ಟು. ಇಲ್ಲಿ ಮುಖ್ಯವಾಗಿ ದಹನಕ್ರಿಯೆಗೆ ಬಳಸುವುದು ಕಲ್ಲಿದ್ದಲ್ಲು. ಇದರಿಂದ ಆಗುವ ಪರಿಸರ ಮಾಲಿನ್ಯದ ಪ್ರಮಾಣವೂ ಹೆಚ್ಚು. ಇದರೊಂದಿಗೆ ಕಲ್ಲಿದ್ದಲ್ಲು ಸಾಗಾಣಿಕೆಗೆ ಬಳಸುವ ಡೀಸೆಲ್ ಕೂಡ ಮಾಲಿನ್ಯಕ್ಕೆ ಮತ್ತೊಂದು ಕೊಡುಗೆ. ಸದ್ಯ ಭಾರತವು ಕಲ್ಲಿದ್ದಲ್ಲು ರಫ್ತು ಮಾಡುವ ಜಗತ್ತಿನ 2ನೇ ಅತಿ ದೊಡ್ಡ ರಾಷ್ಟ್ರ. ಕಲ್ಲಿದ್ದಲ್ಲು ಗಣಿಕಗಾರಿಕೆಯಿಂದ ಹೆಚ್ಚಿನ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ, ಅರಣ್ಯನಾಶ, ಜಲಚರಗಳ ನಾಶ ಇಂಥ ಇನ್ನೂ ಅನೇಕ ಪರಿಸರಕ್ಕೆ ಮಾರಕವಾದ ಅಂಶಗಳು ಸೇರಿವೆ.

ಭಾರತದಲ್ಲಿ ‘ಇವಿ’ಗಳ ಉತ್ತೇಜನ ಎರಡು ರೀತಿಯಲ್ಲಿ ನಡೆಯುತ್ತಿದೆ. ಗ್ರಾಹಕರ ಬೇಡಿಕೆಯನ್ನು ಈಡೇರಿಸುವುದು ಹಾಗೂ ತಯಾರಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದು. ಇದಕ್ಕಾಗಿ 2020ರಲ್ಲಿ ಭಾರತ ಸರ್ಕಾರವು ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್ ಯೋಜನೆಯನ್ನು ಜಾರಿಗೆ ತಂದಿತು. ಆ ಮೂಲಕ ಬೆಲೆ ತಗ್ಗಿಸುವ ಮೂಲಕ ಬ್ಯಾಟರಿ ಚಾಲಿತ ವಾಹನಗಳನ್ನು ಹೊಂದುವವರ ಸಂಖ್ಯೆ ಹೆಚ್ಚಿಸುವುದು, ತೆರಿಗೆ ತಗ್ಗಿಸುವುದು ಹಾಗೂ ಚಾರ್ಜಿಂಗ್ ಕೇಂದ್ರಗಳನ್ನು ಗಣನೀಯವಾಗಿ ಹೆಚ್ಚಳ ಮಾಡುವುದು ಸೇರಿತ್ತು. ಇದರೊಂದಿಗೆ ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವ ಹಾಗೂ ಸ್ಥಳೀಯ ತಯಾರಕರನ್ನು ಉತ್ತೇಜಿಸುವ ಉದ್ದೇಶವೂ ಹೊಂದಲಾಗಿತ್ತು. ಇದಕ್ಕಾಗಿ ಸ್ಥಳೀಯ ತಯಾರಕರಿಗೆ ತೆರಿಗೆ ರಿಯಾಯಿತಿಯ ಕೊಡುಗೆಯನ್ನೂ ನೀಡಲಾಗಿತ್ತು. ಆದರೆ ಇವೆಲ್ಲವೂ ಲೀಥಿಯಂ ಲಭ್ಯತೆಯನ್ನು ಅವಲಂಬಿಸಿದೆ ಎಂಬುದು ವಾಸ್ತವ.

ಬ್ಯಾಟರಿಚಾಲಿತ ವಾಹನಗಳು ಪರಿಸರಸ್ನೇಹಿ ಎಂಬುದು ನಿಜವಾದರೂ ಅವುಗಳ ತಯಾರಿಕೆಯಲ್ಲಿ ಅದಕ್ಕಿಂತಲೂ ಹೆಚ್ಚಿನ ಪರಿಸರ ನಾಶ ಆಗುತ್ತಿದೆ ಎಂಬುದರ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ.

ಬೆಳಕಿನಿಂದಲೂ ಅನಿಲ ಉತ್ಪಾದನೆ!

ನೇಸರ ಕಾಡನಕುಪ್ಪೆ

ಜರ್ಮನಿಯ ಬಾನ್ ವಿಶ್ವವಿದ್ಯಾಲಯ ಹಾಗೂ ಕೈಸರ್‌ಸ್ಲಾಟರ್ನ್–ಲಾಂಡೌ ವಿಶ್ವವಿದ್ಯಾಲಯದ ಆನ್ವಯಿಕ ಭೌತವಿಜ್ಞಾನಿಗಳು ಬೆಳಕಿನಿಂದ ವಿಶೇಷ ಬಗೆಯ ಅನಿಲವೊಂದನ್ನು ತಯಾರಿಸಿದ್ದಾರೆ. ಇದುವರೆಗೆ ಬೆಳಕಿನಿಂದ ಅನಿಲವೊಂದನ್ನು ಉತ್ಪಾದಿಸಲು ಸಾಧ್ಯವಾಗಿರುವುದು ಇದೇ ಮೊದಲು ಎಂದು ವ್ಯಾಖ್ಯಾನಿಲಾಗಿದೆ.

ವಿಶ್ವಪ್ರಸಿದ್ಧ ‘ನೇಚರ್ ಫಿಸಿಕ್ಸ್’ ನಿಯತಕಾಲಿಕೆಯಲ್ಲಿ ವಿಜ್ಞಾನಿಗಳಾದ ಫ್ರ್ಯಾಂಕ್ ವೇವಿಂಗರ್, ಜಾರ್ಜ್ ವಾನ್ ಫ್ರೇಮನ್ ಹಾಗೂ ಜೂಲಿಯನ್ ಶ್ಕಲ್ಸ್ ತಮ್ಮ ಸಿದ್ಧಾಂತವನ್ನು ಪ್ರಕಟಿಸಿದ್ದು, ಕ್ವಾಂಟಮ್ ವಿಜ್ಞಾನದ ಪರಿಣಾಮಗಳನ್ನು ಅರಿತುಕೊಳ್ಳುವಲ್ಲಿ ಈ ಅನಿಲವು ಮಹತ್ವದ ಪಾತ್ರವನ್ನು ವಹಿಸಲಿದೆ ಎಂದು ವಿಶ್ಲೇಷಿಸಿದ್ದಾರೆ.

ಏನಿದು ಬೆಳಕಿನ ಅನಿಲ?

ಕೇಳಲು ಕೊಂಚ ವಿಚಿತ್ರ ಎನ್ನಬಹುದಾದ ಸಂಗತಿಯಿದು. ಏಕೆಂದರೆ ಬೆಳಕಿಗೆ ಭೌತಿಕವಾದ ಆಕಾರ ಇರುವುದಿಲ್ಲ. ಅಗಲ, ಉದ್ದ ಹಾಗೂ ಆಳವಿರುವ 3–ಡಿ ಭೌತಿಕ ಸ್ವರೂಪ ಬೆಳಕಿಗೆ ಇರುವುದಿಲ್ಲವಾದರೂ ಈ ಮೂರೂ ಆಯಾಮಗಳನ್ನು ತಲುಪಬಲ್ಲ ಶಕ್ತಿ ಬೆಳಕಿಗೆ ಇದೆ. ಹಾಗಾಗಿ, ಭೌತವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಅವರ ಸಾಪೇಕ್ಷತಾ ಸಿದ್ಧಾಂತದಲ್ಲಿ ಬೆಳಕು ಶಕ್ತಿಯ ಪಾತ್ರವನ್ನು ತುಂಬಿ ಮಹತ್ತರವಾದ ಸ್ಥಾನವನ್ನು ವಹಿಸಿದೆ. ಇನ್ನು ಕ್ವಾಂಟಮ್ ವಿಜ್ಞಾನವು ಧಾತು ಹಾಗೂ ಶಕ್ತಿಯ ಅಧ್ಯಯನವಾಗಿರುವ ಕಾರಣ, ಅನ್ಯಗ್ರಹ, ಪ್ರಪಂಚಗಳನ್ನು ಅನ್ವೇಷಿಸುವಲ್ಲಿ, ಬಳಿಕ ವಿಶ್ಲೇಷಿಸುವಲ್ಲಿ ಬೆಳಕು ಮಹತ್ವದ ಪಾತ್ರವನ್ನು ವಹಿಸುತ್ತದೆ.

ಜರ್ಮನಿಯ ಬಾನ್ ವಿಶ್ವವಿದ್ಯಾಲಯ ಹಾಗೂ ಕೈಸರ್‌ಸ್ಲಾಟರ್ನ್–ಲಾಂಡೌ ವಿಶ್ವವಿದ್ಯಾಲಯದ ಆನ್ವಯಿಕ ಭೌತವಿಜ್ಞಾನಿಗಳು ಬೆಳಕಿಗೆ ಭೌತಿಕ ಆಕಾರವನ್ನು ನೀಡುವ ಪ್ರಯತ್ನವನ್ನು ಮಾಡಿದ್ದು, ತಮ್ಮ ಉತ್ಪನ್ನಕ್ಕೆ ಒಂದು ಆಯಾಮದ ಅನಿಲ ಎಂದು ಹೆಸರಿಟ್ಟಿದ್ದಾರೆ. ಈ ಬೆಳಕಿನ ಅನಿಲವನ್ನು ಈ ಪ್ರಾತ್ಯಕ್ಷಿಕೆಯ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಹುದು. ನೀವು ಒಂದು ಈಜುಕೊಳದ ಪಕ್ಕ ನಿಂತಿದ್ದೀರ ಎಂದುಕೊಳ್ಳಿ. ಒಂದು ಪೈಪ್ ಮೂಲಕ ನೀರನ್ನು ಚಿಮ್ಮಿಸಿ ಈಜುಕೊಳದ ಒಳಕ್ಕೆ ಹಾಯಿಸುತ್ತೀರ ಎಂದುಕೊಳ್ಳಿ. ಆಗ ಈಜು ಕೊಳದಲ್ಲಿ ಪೈಪ್‌ನಿಂದ ನೀರು ಬೀಳುವ ಜಾಗದಲ್ಲಿ ಅಲೆಗಳು ಸೃಷ್ಟಿಯಾಗುತ್ತವೆ. ಈಜುಕೊಳದ ಗಾತ್ರದ ಆಧಾರದ ಮೇಲೆ ಈ ಅಲೆಗಳ ಗಾತ್ರವು ಕಿರಿದು ಅಥವಾ ಹಿರಿದಾಗಿರುತ್ತದೆ. ಈ ಪ್ರಕ್ರಿಯೆಯನ್ನು ನೀರಿನ ಬದಲು ಬೆಳಕಿಗೆ ಅನ್ವಯಿಸಿ ವಿಜ್ಞಾನಿಗಳು ಬೆಳಕಿನ ಅನಿಲ ಉತ್ಪಾದಿಸಿದ್ದಾರೆ.

ಒಂದು ಆಯುತಾಕಾರದ ಡಬ್ಬಿ ಅಥವಾ ಕೊಠಡಿಯೊಳಗೆ ಬೆಳಕಿನ ಕಿರಣವನ್ನು ನೀರವಾಗಿ ಬಿಡುತ್ತಾರೆ. ಡಬ್ಬಿ ಅಥವಾ ಕೊಠಡಿಯ ಗಾತ್ರದ ಆಧಾರದ ಮೇಲೆ ಬೆಳಕು ತಾಗುವ ಜಾಗದಲ್ಲಿ ಬೆಳಕಿನ ಅಲೆಗಳು ಏಳುತ್ತವೆ. ಈ ಅಲೆಗಳಿಗೆ ಒಮ್ಮುಖವಾದ ದಿಕ್ಕಿರುತ್ತದೆ. ಏಕೆಂದರೆ ಬೆಳಕು ಯಾವಾಗಲೂ ನೇರರೇಖೆಯಲ್ಲಿ ಚಲಿಸುತ್ತದೆ. ವಿಜ್ಞಾನಿಗಳು ಈ ಅಲೆಗಳ ಸ್ವರೂಪದ ಬೆಳಕನ್ನು ಶೇಖರಿಸಿ ಇರಿಸಿಕೊಳ್ಳಲು ಯಶಸ್ವಿಯಾಗಿದ್ದು, ಅದನ್ನು ಬೇಕಾದಾಗ ಬಳಸಿಕೊಳ್ಳಲೂ ಯಶಸ್ವಿಯಾಗಿದ್ದಾರೆ. ಹಾಗಾಗಿ, ಇದನ್ನು ಬೆಳಕಿನ ಅನಿಲ ಎಂದು ಕರೆದಿದ್ದಾರೆ.

ಬಳಕೆ ಎಲ್ಲಿ? ಹೇಗೆ?

ಈ ಬೆಳಕಿನ ಅನಿಲವನ್ನು ಭೌತವಿಜ್ಞಾನ ಕ್ಷೇತ್ರದಲ್ಲಿ ಬಳಸಿಕೊಳ್ಳಬಹುದಾಗಿದೆ. ಅದರಲ್ಲೂ ‘ಇನ್‌ಫ್ರಾರೆಡ್’ ದೂರದರ್ಶಕಗಳಲ್ಲಿ ಈ ‘ಬೆಳಕು–ಅನಿಲ’ವನ್ನು ಬಳಸಿಕೊಂಡಿದ್ದಾರೆ. ಈ ಅನಿಲವನ್ನು ಈ ದೂರದರ್ಶಕಗಳಿಂದ ಗಮನಿಸಬಹುದು. ಕೆಲವೊಮ್ಮೆ ಈ ಅನಿಲಗಳನ್ನು ಒಮ್ಮುಖವಾಗಿ ಕಳುಹಿಸಲೂಬಹುದು. ಅನಿಲವು ಚಲಿಸುವ ದಿಕ್ಕನ್ನು ಗಮನಿಸುವುದು ಹಾಗೂ ದಾಖಲಿಸುವುದು ಸಾಧ್ಯವಿದೆ. ಆದ್ದರಿಂದ ವಿವಿಧ ಬಗೆಯ ಆಕಾಶಕಾಯಗಳನ್ನು, ಅವುಗಳ ನಿಖರವಾದ ವಿಳಾಸ, ಆಳ, ಅಗಲ, ಗಾತ್ರಗಳನ್ನು ಲೆಕ್ಕ ಹಾಕಲು ಇದು ಸಹಾಯ ಮಾಡುತ್ತದೆ.

ಬಾಹ್ಯಾಕಾಶ ಅಧ್ಯಯನ ಮಾತ್ರವೇ ಅಲ್ಲದೇ ಸಮುದ್ರಗಳ ಅಧ್ಯಯನವೂ ಇದರಿಂದ ಸಾಧ್ಯವಾಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಅಂದರೆ, ಸಮುದ್ರದ ನಿಖರವಾದ ಆಳ ಪತ್ತೆ ಹಚ್ಚಲು, ಸುನಾಮಿಯಂತಹ ಅಲೆಗಳನ್ನು ಅಧ್ಯಯನ ಮಾಡುವುದು, ಪತ್ತೆ ಹಚ್ಚುವುದು – ಹೀಗೆ ಮಾರುತಗಳ ವರ್ತಮಾನವನ್ನು ನೀಡಿ ಅನಾಹುತಗಳನ್ನು ತಪ್ಪಿಸಲೂ ಈ ಸಂಶೋಧನೆಯು ಪ್ರಮುಖ ಪಾತ್ರ ವಹಿಸಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಇಂಗ್ಲಿಷ್

Second Language ENGLISH
POEM
Quality of Mercy

About Author : William Shakespeare

William Shakespeare was born on April 23, 1564, in Stratford-on-Avon. He was regarded as the foremost dramatist of his time. His sonnets were composed between 1593 and 1601. The Sonnets of Shakespeare, consists of 154 sonnets, all written in the form of three quatrains and a couplet that is now recognized as Shakespearean. The sonnets fall into two groups: sonnets 1-126, addressed to a beloved friend, a handsome and noble young man, and sonnets 127-512, to a malignant but fascinating "Dark Lady", whom the poet loves inspite of himself. Nearly all of Shakespeare's sonnets examine the inevitable decay of time, and the immortalization of beauty and love in poetry.

In his and plays, Shakespeare invited thousands of words. His impressive expansion of the English language, according to the Oxford English Dictionary, includes such words as : birthplace. Blood sucking, courtship, dewdrop, downstairs, radiance, schoolboy, still born, watchdog ,etc.

Shakespeare wrote more than 30 plays. These are usually divided into four categories: histories, comedies, tragedies, and romances. His earliest plays were primarily comedies and histories such as Henry VI and The Comedy Of Errors, but in 1596, Shakespeare wrote a romantic book called " Romeo and Juliet", his second tragedy, and over the next dozen years he would return to the form, writing the plays for which he is now best known: Julius Caesar, Hamlet, Othello, King Lear, Macbeth and Antony and Cleopatra.

In his final year, Shakespeare turned to the romantic with Cymbeline, A Winter's Tale, and The Tempest.

Understand the poem

1. Mercy is compared with something in the first two lines of the poem. What is it? How is this comparison apt? Justify your answer.

Ans: The quality of mercy is compared with gentle drop of rain from heaven. It does not hurt. The comparison is apt as the showing mercy does not hurt the giver or taker instead it gives blessings of gentle peace to both.

2.The speaker says that mercy is twice blessed. What does she mean by this?

Ans: Mercy gently blesses both the giver and the receiver. Hence the speaker says mercy is twice blessed.

3.'Sceptre shows the force of temporal power'. In contrast, what or whose quality does mercy stand for?

Ans: Sceptre is a decorated rod or baton carried as symbol of authority or power by King or Queen. Sceptre creates fear of king in hearts of people. Sceptre is symbolic of early power. In contrast mercy is above the influence of earthly power of King or Queen; it is enthroned in the hearts of kings and it is an attribute to God himself. When king's justice is tempered by mercy, he will looks like that of God.

4. Some traits or qualities are mentioned below. Classify them into two categories of temporal power and divine (Godly) ,ïattributes: Revenge, Tyranny, Cruelty, miserliness, hatred, tit for tat attitude, Love, Sympathy, Mercy, Compassion

Temporal	Divine

Ans:

Temporal	Divine
Revenge, Tyranny, Cruelty, miserliness, hatred, tit for tat attitude	Love, Sympathy, Mercy, Compassion

Read and appreciate

Work in pairs and answer the following questions.

1.Read the first two lines. Explain simile (comparison) briefly.

Ans: The gentle quality of mercy has been compared to rain which drops gently to ground. Rain does not hurt mother earth but it enriches it. Similarly mercy never hurts anyone but blesses both the giver and the receiver. Hence mercy, 'it droppeth as the gentle rain from heaven'.

2.How do you interpret the speaker's interpretation of mercy as twice blessed?

Ans: The poet calls mercy as twice blessed because it blesses both the giver and the receiver. This interpretation is excellent as it uplifts both the giver and the receiver.

***3.*The speaker compares the power of the king with the power of mercy, saying that mercy is the mightiest of the mightiest. How does she justify this?**

(Contd)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

64. Write a brief note on the Inducible Operon System (Lactose Operon).

Ans:- (……Contd)

galactoside into the bacterium. β-galactosidase brings about hydrolysis of lactose or galactoside to form glucose and galactose. Galactoside acetylase is a transcetylase which can transfer acetyl group to β-galactosidase.


65. Explain the mechanism of DNA replication in detail.

Ans:- Mechanism of DNA Replication - it is a complex multistep process that requires a number of enzymes, protein factors ad ions.

1) origin of Replication - Replication begins at a particular region of DNA which has a particular nucleotide sequence called **autonomic replicating sequence** or ARS. It is called origin of replication or *Ori*. Prokaryotes have a single origin of replication while eukaryotes have several of them, e.g., 3500 in *Drosophila*. DNA of prokaryotes functions as a single replicating unit called **replicon**. DNA of eukaryotes possesses a number of replicons or replicating units. The use of vector for recombinant DNA procedures is meant for providing origin of replication. Replication proceeds on both sides from the *Ori*. This is called **bidirectional replication.** Unidirectional replication is rare.


2) Activation of Deoxyribonucleotides. There are four types of deoxyribonucleotides – *d*AMP, *d*GMP, *d*TMP and *d*CP. With the help of energy, phosphate and an enzyme phosphorylase, the nucleotides are changed into triphosphate state.

$$\begin{matrix} dAMP \\ dGMP \\ dCMP \\ dTMP \end{matrix} + 2H_3PO_4 \xrightarrow[\text{Energy}]{\text{Phosphorylase}} \begin{matrix} dATP \\ dGTP \\ dCTP \\ dTTP \end{matrix}$$



Semiconservative nature of DNA replication

3) Initiation. Origin of replication is recognized by origin recognition complex. It attracts enzymes. Enzyme **helicase** unwinds the DNA helix and unzips the two strands of DNA by breaking hydrogen bonds. The separated strands become stabilized in this condition with the help of **single strand binding proteins** or SSBPs. Unwinding creates tension which is released by cutting and releasing enzymes **topoisomerases** I and II. Topoisomerase II of prokaryotes is also called **gyrase.** It functions both as helicase and topoisomerase. Unzipping creates a Y – shaped configuration called **replication fork.**



Replication of DNA, continuous over one strand and discontinuous over the other strand

4) Priming - Replication fork exposes two different ends of the two DNA strands, 3' end 5' end. At the free 3' end of one strand and fork end of the second strand (with free 5' end) a small RNA is synthesized with the help of **DNA-dependent** enzyme RNA polymerase or primase. The synthesized RNA is called RNA primer. It is 4-12 nucleotides long. RNA primer functions as 5' end of the new strand (to be synthesized). It provides 3-OH group for joining of DNA nucleotides.

5) Base Pairing - The two separated DNA strands in the area of replication fork now function as templates. Their nitrogen bases attract complementary phosphorylated nucleotides, i.e., dATP opposite T, dTTP opposite A, dCTP opposite G, dGTP opposite C. Enzyme pyrophosphatase removes two phosphates from phosphorylated nucleotides and change them into monophosphate state. It releases energy which is used in building hydrogen bonds.

$$\begin{matrix} dATP \\ dGTP \\ dCTP \\ dTTP \end{matrix} \xrightarrow{\text{Pyrophosphatase}} \begin{matrix} dAMP + 2Pi + energy \\ dGMP + 2Pi + energy \\ dCMP + 2Pi + energy \\ dTMP + 2Pi + energy \end{matrix}$$

(Contd……)

350ಕ್ಕೂ ಹೆಚ್ಚು ನಿವೇಶನಗಳ ಹಂಚಿಕೆ • ಮುಡಾ ಜಮೀನು ಒತ್ತುವರಿ ಮಾಡಿ ಆಶ್ರಯ ಬಡಾವಣೆ ನಿರ್ಮಾಣ

18 ಅಧಿಕಾರಿಗಳಿಗೆ ಲೋಕಾಯುಕ್ತ ನೋಟಿಸ್

ಪ್ರಜಾವಾಣಿ ವಾರ್ತೆ

ಮೈಸೂರು: ತಾಲ್ಲೂಕಿನ ಹಿನಕಲ್ ಗ್ರಾಮದ ಸರ್ವೆ ಸಂಖ್ಯೆ 89ರಲ್ಲಿ ಮುಡಾಕ್ಕೆ ಸೇರಿದ 7 ಎಕರೆ 18 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ಬಡಾವಣೆ ನಿರ್ಮಿಸಿ 350ಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮುಡಾದ 18 ಹಾಲಿ ಹಾಗೂ ನಿವೃತ್ತ ಅಧಿಕಾರಿಗಳಿಗೆ ಲೋಕಾಯುಕ್ತ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಮುಡಾದ ಹಿಂದಿನ ಕಾರ್ಯದರ್ಶಿಗಳಾದ ಸವಿತಾ, ಕುಸುಮಾಕುಮಾರಿ, ವೆಂಕಟರಾಜು, ಶೇಖರ್, ವಿಶೇಷ ಭೂಸ್ವಾಧೀನ ಅಧಿಕಾರಿಗಳಾಗಿದ್ದ ಚಂದ್ರಮ್ಮ, ಹರ್ಷವರ್ಧನ್, ವಿಷ್ಣುವರ್ಧನ್ ಹಾಗೂ ವಿವಿಧ ದರ್ಜೆಯ ಅಧಿಕಾರಿಗಳಿಗೆ ಲೋಕಾಯುಕ್ತ ಪೊಲೀಸರು ಸೆ. 9ರಂದು ನೋಟಿಸ್ ನೀಡಿದ್ದಾರೆ. ಆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳ ತೆರವಿಗೆ ಕೈಗೊಂಡ ಕ್ರಮಗಳ ಮಾಹಿತಿ ಸಮೇತ, ನೋಟಿಸ್ ನೀಡಿದ ದಿನಾಂಕದಿಂದ ಮೂರು ದಿನಗಳ ಒಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಏನಿದು ಪ್ರಕರಣ?: ವಿಜಯ ನಗರ 2ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಮುಡಾ ಈ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿತ್ತು. ಆದರೆ, 1990–1992ರ ಅವಧಿಯಲ್ಲಿ ಅಂದಿನ ಹಿನಕಲ್ ಮಂಡಲ ಪಂಚಾಯಿತಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಅಧಿಕಾರಿಗಳು ಜೊತೆಗೂಡಿ ಅದೇ ಜಮೀನಿನಲ್ಲಿ ಆಶ್ರಯ ಬಡಾವಣೆ ನಿರ್ಮಿಸಿ ಬಡಜನರಿಗೆ ಹಂಚುವುದಾಗಿ ಹೇಳಿ 25x25 ಚ.ಅಡಿ ಅಳತೆಯ 350ಕ್ಕೂ ಹೆಚ್ಚು ನಿವೇಶನಗಳನ್ನು ನಿರ್ಮಿಸಿ ಹಂಚಿದ್ದರು. ಇದಕ್ಕೆ ಮುಡಾ ಅನುಮತಿ ಪಡೆದಿರಲಿಲ್ಲ.

‘ಮುಡಾದ ಅನುಮತಿ ಇಲ್ಲದೆಯೇ ಜಮೀನು ಅತಿಕ್ರಮಿಸಿ ಬಡಾವಣೆ ನಿರ್ಮಿಸಿ ಅಕ್ರಮ ಎಸಗಲಾಗಿದೆ. ಈ ನಿವೇಶನಗಳನ್ನು ಬಡವರಿಗೆ ನೀಡದೇ ಸರ್ಕಾರಿ ಸಿಬ್ಬಂದಿಯೂ ಸೇರಿದಂತೆ ಉಳ್ಳವರಿಗೆ ಮಾರಿಕೊಂಡು ಭ್ರಷ್ಟಾಚಾರ ಎಸಗಲಾಗಿದೆ. ಇದನ್ನು ಮುಡಾ ಅಧಿಕಾರಿಗಳ ಗಮನಕ್ಕೆ ತಂದರೂ ತೆರವಿಗೆ ಕ್ರಮ ಕೈಗೊಂಡಿಲ್ಲ. ಅವರೂ ಭ್ರಷ್ಟಾಚಾರಕ್ಕೆ ಕೈ ಜೋಡಿಸಿರುವ ಸಾಧ್ಯತೆ ಇದೆ’ ಎಂದು ಆರೋಪಿಸಿ ಮಾಹಿತಿಹಕ್ಕು ಕಾರ್ಯಕರ್ತ ಗಂಗರಾಜು 2017ರಲ್ಲಿ ಎಸಿಬಿಗೆ (ಭ್ರಷ್ಟಾಚಾರ ನಿಗ್ರಹ ದಳ) ದೂರು ನೀಡಿದ್ದರು. 2022ರಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದೀಗ ಈ ಪ್ರಕರಣವು ಲೋಕಾಯುಕ್ತಕ್ಕೆ ವರ್ಗಾವಣೆ ಆಗಿದೆ.

‘ಅಧಿಕಾರಿಗಳಿಗೆ ನೋಟಿಸ್ ನೀಡಿರುವ ಜೊತೆಗೆ ಮಂಡಲ ಪಂಚಾಯಿತಿಯಲ್ಲಿ ಅಂದು ಸದಸ್ಯರಾಗಿದ್ದವರ ಮೇಲೂ ಕಾನೂನು ಕ್ರಮ ಜರುಗಿಸಬೇಕು. ಹಿನಕಲ್ ಸುತ್ತಮುತ್ತ ₹250 ಕೋಟಿ ಮೌಲ್ಯದ ಸರ್ಕಾರಿ ಆಸ್ತಿ ಕಬಳಿಕೆ ಆಗಿದ್ದು, ಅತಿಕ್ರಮವನ್ನು ತೆರವುಗೊಳಿಸಬೇಕು’ ಎಂದು ದೂರುದಾರ ಗಂಗರಾಜು ಒತ್ತಾಯಿಸಿದರು.

ಮುಡಾ ಆಯುಕ್ತರ ನಿವಾಸದ ಡಿವಿಆರ್ ನಾಪತ್ತೆ?

ಮುಡಾ ಹಗರಣ

ಮೈಸೂರು: ಇಲ್ಲಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರ ಅಧಿಕೃತ ನಿವಾಸದಲ್ಲಿನ ಸಿಸಿಟಿವಿ ಕ್ಯಾಮೆರಾ ಹಾಗೂ ಅದರ ಡಿವಿಆರ್ ನಾಪತ್ತೆಯಾಗಿದೆ ಎನ್ನಲಾಗಿದ್ದು, ಸಾಕ್ಷ್ಯ ನಾಶದ ಶಂಕೆ ವ್ಯಕ್ತವಾಗಿದೆ.

‘ಆ ಮನೆಗೆ ಎಂಟು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಸದ್ಯ ಈ ಕ್ಯಾಮೆರಾಗಳು ಕಾಣಿಸುತ್ತಿಲ್ಲ. ಅವುಗಳಲ್ಲಿನ ದತ್ತಾಂಶವನ್ನು ಸಂಗ್ರಹಿಸುವ ಡಿವಿಆರ್ ಸದ್ಯ ಮನೆಯಿಂದ ಕಾಣೆಯಾಗಿದೆ. ವೈರ್‌ಗಳನ್ನು ಅಲ್ಲಲ್ಲಿ ಕತ್ತರಿಸಲಾಗಿದೆ. ಇದೀಗ ಮನೆಯ ನವೀಕರಣ ಕಾಮಗಾರಿಯೂ ನಡೆದಿದ್ದು, ವಸ್ತುಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ಪೀಠೋಪಕರಣಗಳನ್ನೂ ತೆರವುಗೊಳಿಸಲಾಗಿದೆ’ ಎಂದು ಹೇಳಲಾಗುತ್ತಿದೆ.

ಮುಡಾದ ಹಿಂದಿನ ಆಯುಕ್ತರಾದ ಡಿ.ಬಿ. ನಟೇಶ್ ಹಾಗೂ ಜಿ.ಟಿ. ದಿನೇಶ್‌ಕುಮಾರ್ ಇಲ್ಲಿಯೇ ವಾಸವಿದ್ದರು. ಸಾಕಷ್ಟು ಬಾರಿ ಮುಡಾ ಕಡತಗಳನ್ನು ಆಯುಕ್ತರ ನಿವಾಸಕ್ಕೆ ಕೊಂಡೊಯ್ದ ಉದಾಹರಣೆಗಳೂ ಇವೆ. ಆಯುಕ್ತರು ಹಾಗೂ ಆಪ್ತರ ಭೇಟಿಯ ಸ್ಥಳವೂ ಇದಾಗಿತ್ತು ಎನ್ನಲಾಗಿದೆ. ಇದೀಗ ಮುಡಾದಿಂದ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿರುವ ಕುರಿತು ತನಿಖೆ ನಡೆದಿರುವ ಹೊತ್ತಿನಲ್ಲೇ ಈ ದಾಖಲೆಗಳು ನಾಪತ್ತೆ ಆಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಎರಡು ದಿನದಲ್ಲಿ ವರದಿ: ‘ಸದ್ಯ ಆಯುಕ್ತರ ನಿವಾಸದಲ್ಲಿ ನವೀಕರಣ ಕಾಮಗಾರಿ ನಡೆದಿದೆ. ಅಲ್ಲಿದ್ದ ದಾಖಲೆಗಳು, ಸಾಮಗ್ರಿಗಳ ವಿವರ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇನ್ನೆರಡು ದಿನದಲ್ಲಿ ಅವರು ಸ್ಟಾಕ್ ಲಿಸ್ಟ್ ನೀಡಲಿದ್ದು, ಏನೇನು ಇದೆ, ಇಲ್ಲ ಎಂಬುದು ನಂತರವಷ್ಟೇ ತಿಳಿಯಲಿದೆ’ ಎಂದು ಮುಡಾದ ಆಯುಕ್ತ ಎ.ಎನ್. ರಘುನಂದನ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಆಯುಕ್ತರ ಅಧಿಕೃತ ನಿವಾಸವನ್ನು ಮುಡಾದ ಎಂಜಿನಿಯರಿಂಗ್ ವಿಭಾಗವು ನಿರ್ವಹಣೆ ಮಾಡುತ್ತಿದೆ. ಎಲ್ಲ ಮಾಹಿತಿಯೂ ಅವರ ಬಳಿ ಇರಲಿದೆ. ಅದನ್ನು ಪಡೆದು ಪರಿಶೀಲಿಸಲಾಗುವುದು’ ಎಂದು ತಿಳಿಸಿದರು.



ನಿವಾಸದಲ್ಲಿನ ಸಿಸಿಟಿವಿ ಕ್ಯಾಮೆರಾಗಳ ಸಂಪರ್ಕವನ್ನು ಕಡಿತಗೊಳಿಸಿರುವುದು

ವಿಜಯೇಂದ್ರ ಟ್ರಸ್ಟ್‌ಗೆ ಭೂಮಿ– ಆಯನೂರು ಆರೋಪ

ಪ್ರಜಾವಾಣಿ ವಾರ್ತೆ



ಮಂಜುನಾಥ್

ಶಿವಮೊಗ್ಗ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನಿರ್ದೇಶಕರಾಗಿರುವ ಟ್ರಸ್ಟ್‌ನಿಂದ ಆಸ್ಪತ್ರೆ ನಿರ್ಮಾಣಕ್ಕೆ ಸಂಸದ ಬಿ.ವೈ. ರಾಘವೇಂದ್ರ ಅವರ ಪತ್ನಿಯ ಸಹೋದರನ ಹೆಸರಿನ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನಪಡಿಸಿಕೊಟ್ಟಿದೆ’ ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಆರೋಪಿಸಿದರು.

‘ಇಲ್ಲಿನ ಹರಿಗೆ ಗ್ರಾಮದ ಬಳಿಯ ಕೈಗಾರಿಕಾ ಪ್ರದೇಶದಿಂದ 3 ಕಿ.ಮೀ ದೂರದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆಂದು 5.34 ಎಕರೆ ಭೂಮಿಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಟ್ಟಿದೆ. ವಿಶೇಷವೆಂದರೆ ಆ ಜಮೀನು ಬಿ.ವೈ. ರಾಘವೇಂದ್ರ ಅವರ ಪತ್ನಿಯ ಸಹೋದರ ಸಂಗಮೇಶ ಪರಪ್ಪ ಗದಗ ಅವರ ಹೆಸರಿನಲ್ಲಿತ್ತು. ಅದು ಈಗ ಬಿ.ವೈ. ವಿಜಯೇಂದ್ರ ಅವರ ಹೆಸರಿಗೆ ನೋಂದಣಿ ಆಗಿದೆ’ ಎಂದು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ದಾಖಲೆ ಬಿಡುಗಡೆ ಮಾಡಿದರು.

‘ಕೆಐಎಡಿಬಿ ಸ್ವಾಧೀನ ಪಡಿಸಿಕೊಂಡ ಜಮೀನಿನ ಅಕ್ಕಪಕ್ಕದಲ್ಲಿ ಯಡಿಯೂರಪ್ಪ ಕುಟುಂಬ ಜಮೀನು ಖರೀದಿ ಮಾಡಿದೆ. ಇದನ್ನೂ ಅದೇ ರೀತಿ ನೇರವಾಗಿ ಖರೀದಿಸಬಹುದಿತ್ತು. ಅದರ ಬದಲಿಗೆ ತಮ್ಮದೇ ಕುಟುಂಬದವರ ಹೆಸರಿನ ಭೂಮಿ ಕೆಐಎಡಿಬಿ ಮೂಲಕ ತಾವೇ ಸ್ವಾಧೀನಪಡಿಸಿಕೊಂಡಿದ್ದಾರೆ. ಇದು ದೇಶದಲ್ಲಿಯೇ ಮೊದಲು’ ಎಂದು ಆಯನೂರು ವ್ಯಂಗ್ಯವಾಡಿದರು.

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿಗೆ ಅವರ ಸಹೋದರ ಜಮೀನು ಕೊಟ್ಟದ್ದು ಹಗರಣ ಆಗುವುದಾದರೆ ಹರಿಗೆಯಲ್ಲಿ ಕೆಐಎಡಿಬಿಯಿಂದ ಭೂಮಿ ಸ್ವಾಧೀನವೂ ಹಗರಣವಲ್ಲವೇ?’ ಎಂದು ಅವರು ಪ್ರಶ್ನಿಸಿದರು.

‘ರೈತರ ಬೇಡಿಕೆ ಆದ್ಯತೆಯ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಕೃಷಿ ಪಂಪ್‌ಸೆಟ್‌ಗಳ ಸಕ್ರಮ ಯೋಜನೆ ಮರು ಜಾರಿ ಸೇರಿದಂತೆ ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಆದ್ಯತೆಯ ಮೇರೆಗೆ ಪರಿಹಾರ ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ರೈತ ಮುಖಂಡ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ತಮ್ಮನ್ನು ಭೇಟಿಯಾದ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳ ನಿಯೋಗದ ಜೊತೆ ಚರ್ಚೆ ನಡೆಸಿದ ನಂತರ ಅವರು, ಬೇಡಿಕೆ ಪರಿಶೀಲಿಸಿ, ಬಹುಮುಖ್ಯವಾದ ಸಮಸ್ಯೆಗಳಿಗೆ ತ್ವರಿತ ಪರಿಹಾರ ದೊರಕಿಸುವ ಭರವಸೆ ನೀಡಿದರು.

‘ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಜೋಡಣೆ ಮಾಡುತ್ತಿರುವ ಕಾರ್ಯವನ್ನು ತಕ್ಷಣ ಕೈಬಿಡಬೇಕು. ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ರದ್ದುಗೊಳಿಸಬೇಕು. ಕೃಷಿ ಸಾಲ ಮರುಪಾವತಿಸದ ರೈತರ ಜಮೀನು ವಶಪಡಿಸಿಕೊಳ್ಳುವ ಹಣ ಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ (ಸರ್ಫೇಸಿ) ಕಾಯ್ದೆರದ್ದುಪಡಿಸಬೇಕು’ ಎಂದು ಶಾಂತಕುಮಾರ್ ಒತ್ತಾಯಿಸಿದರು.

‘ಬರ, ಅತಿವೃಷ್ಟಿ, ಪ್ರವಾಹಕ್ಕೆ ಹಾನಿಯಾದ ಬೆಳೆಗಳಿಗೆ ವೈಜ್ಞಾನಿಕ ಮಾನದಂಡಗಳನ್ನು ಅನುಸರಿಸಿ ಪರಿಹಾರ ನೀಡಬೇಕು. ಖಾಸಗಿ ಫೈನಾನ್ಸ್ ಹಾಗೂ ಬ್ಯಾಂಕ್‌ಗಳು ಸಾಲ ವಸೂಲಿ ನೆಪದಲ್ಲಿ ರೈತರಿಗೆ ನೀಡುತ್ತಿರುವ ಕಿರುಕುಳಕ್ಕೆ ಕಡಿವಾಣ ಹಾಕಬೇಕು. ಜಿಂದಾಲ್ ಕಂಪನಿಗೆ ನೀಡಿರುವ 3,667 ಎಕರೆ ಜಮೀನು ಹಿಂಪಡೆಯಬೇಕು. ಕಳಸಾ–ಬಂಡೂರಿ ಯೋಜನೆ ಅನುಷ್ಠಾನಗೊಳಿಸಬೇಕು. ಕಬ್ಬಿನ ಮುಕ್ತ ಮತ್ತು ನ್ಯಾಯಸಮ್ಮತ (ಎಫ್‌ಆರ್‌ಪಿ) ದರಕ್ಕಿಂತ ಹೆಚ್ಚುವರಿ ದರ ನಿಗದಿಪಡಿಸಬೇಕು’ ಎಂಬ ವಿವಿಧ ಬೇಡಿಕೆಯನ್ನು ಮುಖ್ಯಮಂತ್ರಿ ಎದುರು ಮಂಡಿಸಿದರು.

ಮಹದಾಯಿ ನೀರು ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ವೀರೇಶ್ ಸೊಬರದಮಠ, ವಿವಿಧ ರೈತ ಸಂಘಟನೆಗಳ ಮುಖಂಡರಾದ ಬಲ್ಲೂರು ರವಿಕುಮಾರ್, ವೀರನಗೌಡ ಪಾಟೀಲ, ಕರಿಬಸಪ್ಪಗೌಡ, ಹತ್ತಳ್ಳಿ ದೇವರಾಜ್, ಮಂಜೇಶ್‌ಗೌಡ ನಿಯೋಗದಲ್ಲಿದ್ದರು.



ರಾಜ್ಯದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತ ಮುಖಂಡ ಕುರುಬೂರು ಶಾಂತಕುಮಾರ್ ಜೊತೆ ಮಂಗಳವಾರ ಚರ್ಚೆ ನಡೆಸಿದರು

ಬಿಜೆಪಿ ರಾಜ್ಯ ಕಚೇರಿಗೆ ಪೊಲೀಸ್ ಭದ್ರತೆ

ಕಚೇರಿ ಎದುರು ಲೋಹ ಶೋಧಕ ಅಳವಡಿಕೆ; ಬರುವ ಎಲ್ಲರಿಗೂ ಕಟ್ಟುನಿಟ್ಟಿನ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿಗೆ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿದ್ದು, ಲೋಹ ಶೋಧಕ (ಮೆಟಲ್ ಡಿಟೆಕ್ಟರ್) ಅಳವಡಿಸಿ, ಕಚೇರಿ ಎದುರು ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ.

ಮಲ್ಲೇಶ್ವರ ಪೊಲೀಸ್ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಬಿ.ಎಲ್. ಜಗದೀಶ್ ಅವರು ಮಂಗಳವಾರ ಭದ್ರತೆ ಪರಿಶೀಲನೆ ನಡೆಸಿದರು. ಕಚೇರಿಗೆ ಬರುವವರನ್ನು ತಪಾಸಣೆ ನಡೆಸಿ ಒಳಗೆ ಕಳುಹಿಸುವಂತೆ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬ್ರೂಕ್ ಫೀಲ್ಡ್‌ನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿದ್ದ ಶಂಕಿತ ಉಗ್ರರು ಬಿಜೆಪಿ ರಾಜ್ಯ ಘಟಕದ ಕಚೇರಿಯನ್ನೂ ಗುರಿಯಾಗಿಸಿಕೊಂಡಿದ್ದಾಗಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಿಜೆಪಿ ಕಚೇರಿಗೆ ಭದ್ರತೆ ಒದಗಿಸಿದ್ದಾರೆ.

‘ಪಕ್ಷದ ಸಭೆ, ಸಮಾರಂಭ ಹಾಗೂ ಗಣ್ಯರು ಭೇಟಿ ನೀಡಿದ ಸಂದರ್ಭದಲ್ಲಿ ಮಾತ್ರ ಕಚೇರಿಯಲ್ಲಿ ಮೆಟಲ್ ಡಿಟೆಕ್ಟರ್ ಅಳವಡಿಸಲಾಗುತ್ತಿತ್ತು. ಈಗ ಕಾಯಂ ಆಗಿ ಅಳವಡಿಸಿ, ಕಚೇರಿಗೆ ಬರುವವರನ್ನೆಲ್ಲ ತಪಾಸಣೆ ನಡೆಸಿ ಒಳಗೆ ಬಿಡಲಾಗುವುದು. ನಿಷೇಧಿತ ವಸ್ತುಗಳನ್ನು ಪ್ರವೇಶ ದ್ವಾರದಲ್ಲೇ ಪತ್ತೆ ಹಚ್ಚಲಾಗುತ್ತದೆ. ಇದಕ್ಕಾಗಿಯೇ ಒಬ್ಬರು ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಮೂವರು ಕಾನ್‌ಸ್ಟೆಬಲ್‌ಗಳನ್ನು ನಿಯೋಜಿಸಲಾಗಿದೆ. ಗಂಟೆಗೊಮ್ಮೆ ಠಾಣಾಧಿಕಾರಿ ಭೇಟಿ ನೀಡುತ್ತಾರೆ’ ಎಂದು ಪಿಎಸ್‌ಐ ಜಗದೀಶ್ ತಿಳಿಸಿದರು.

‘ಬಿಜೆಪಿ ಕಚೇರಿ ಮುಂಭಾಗ ಕೆಎಸ್‌ಆರ್‌ಪಿ ವಾಹನ (20 ಸಿಬ್ಬಂದಿ) ನಿಯೋಜಿಸಲಾಗಿದೆ. ಪಕ್ಷದ ವತಿಯಿಂದ ಆರು ಮಂದಿ ಖಾಸಗಿ ಭದ್ರತಾ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ. ಕಚೇರಿ ಸುತ್ತಲೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದ್ದು, ಅನುಮಾನಾಸ್ಪದ ವ್ಯಕ್ತಿಗಳನ್ನು ಕಂಡರೆ ತಕ್ಷಣ ಮಾಹಿತಿ ನೀಡುವಂತೆ ಸಿಬ್ಬಂದಿಗೆ ಸೂಚಿಸಲಾಗಿದೆ. ಕಚೇರಿಗೆ ಬರುವವರಲ್ಲಿ ಕಾರ್ಯಕರ್ತರು, ಮುಖಂಡರು ಯಾರು ಎಂಬುದನ್ನು ಗುರುತಿಸುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಕಚೇರಿಗೆ ಎಲ್ಲಾ ರೀತಿಯ ಭದ್ರತೆ ಒದಗಿಸಲಾಗಿದೆ’ ಎಂದು ಅವರು ಹೇಳಿದರು.

ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಉಗ್ರರಿಗೆ ಕಠಿಣ ಶಿಕ್ಷೆ ನೀಡಲು ಎನ್‌ಐಎಗೆ ಅಗತ್ಯ ಮಾಹಿತಿ ಒದಗಿಸಬೇಕು

ಬಸವರಾಜ ಬೊಮ್ಮಾಯಿ, ಸಂಸದ

ರಾಷ್ಟ್ರ ಭಕ್ತ ಸಂಘಟನೆಗಳ ಮೇಲೆ ದಾಳಿ ನಡೆಸುವುದು ಉಗ್ರ ಸಂಘಟನೆಗಳ ಯೋಜನೆ. ಕಾಂಗ್ರೆಸ್ ಆಡಳಿತದ ರಾಜ್ಯಗಳು ಉಗ್ರ ಚಟುವಟಿಕೆಗಳಿಗೆ ತಾಣವಾಗುತ್ತಿವೆ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಿಜೆಪಿ ಕಚೇರಿ ಬದಲು ರಾಮೇಶ್ವರಂ ಕೆಫೆಯಲ್ಲಿ ಸ್ಫೋಟ ನಡೆಸಿರುವುದು ಎನ್‌ಐಎ ತನಿಖೆಯಿಂದ ಗೊತ್ತಾಗಿದೆ. ಬೇಹುಗಾರಿಕೆ ವೈಫಲ್ಯಕ್ಕೆ ಸರ್ಕಾರವೇ ಹೊಣೆ

ಭಾಸ್ಕರರಾವ್, ಬಿಜೆಪಿ ಮುಖಂಡ

‘ಉಗ್ರರ ನಿಗ್ರಹಕ್ಕೆ ವಿಶೇಷ ಕಾರ್ಯಪಡೆ ರಚಿಸಿ’

ಬೆಂಗಳೂರು: ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳ ನಿಯಂತ್ರಣಕ್ಕಾಗಿ ತಕ್ಷಣವೇ ವಿಶೇಷ ಕಾರ್ಯಪಡೆ ರಚಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಭಯೋತ್ಪಾದಕರು ಬಿಜೆಪಿ ಕಚೇರಿಯಲ್ಲಿ ಬಾಂಬ್ ಸ್ಫೋಟಿಸುವ ಸಂಚು ಮಾಡಿದ್ದು ಬಯಲಿಗೆ ಬಂದಿದೆ. ಬೆಂಗಳೂರು ಐಟಿ–ಬಿಟಿ ರಾಜಧಾನಿಯಾಗಿದ್ದು, ಇಲ್ಲಿ ಭಯದ ವಾತಾವರಣ ಸೃಷ್ಟಿಸಿ ಆರ್ಥಿಕತೆ ನಾಶ ಮಾಡಬೇಕು ಎಂಬುದು ಭಯೋತ್ಪಾದಕರ ಯೋಜನೆ ಆಗಿರಬಹುದು’ ಎಂದು ಹೇಳಿದರು.

‘ಬಾಂಗ್ಲಾದೇಶದಿಂದ ಸಾಕಷ್ಟು ಜನ ಬರುತ್ತಿದ್ದಾರೆ. ಬರುವಾಗಲೇ ಅವರಿಗೆ ಆಧಾರ್ ಕಾರ್ಡ್ ಸಿಗುತ್ತಿದೆ. ಇದರಿಂದ ಭಯೋತ್ಪಾದನಾ ಚಟುವಟಿಕೆ ಹೆಚ್ಚುತ್ತಿದೆ. ರಾಜ್ಯಕ್ಕೆ ನುಸುಳುವ ಬಾಂಗ್ಲಾ ಪ್ರಜೆಗಳನ್ನು ಕೂಡಲೇ ಪತ್ತೆ ಮಾಡಿ ಅವರನ್ನು ಹೊರಕ್ಕೆ ಹಾಕುವ ಕೆಲಸವನ್ನು ಸರ್ಕಾರ ಮಾಡಬೇಕು. ಇಲ್ಲವಾದರೆ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಸ್ಥಿತಿಯೇ ರಾಜ್ಯಕ್ಕೆ ಬರಲಿದೆ. ನಮ್ಮ ರಾಜ್ಯದ ಜನರ ಬದುಕು ಭಯೋತ್ಪಾದಕರ ನಿಯಂತ್ರಣಕ್ಕೆ ಹೋಗಬಾರದು. ಸ್ಲೀಪರ್ ಸೆಲ್‌ಗಳನ್ನು ಪತ್ತೆ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಭಯೋತ್ಪಾದಕರಿಗೆ ಭಯವೇ ಇಲ್ಲ. ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟವಾದಾಗ, ಇದು ‘ವ್ಯಾಪಾರದ ವ್ಯಾಜ್ಯ’ ಎಂದು ಸಚಿವರೇ ಹೇಳಿಕೆ ನೀಡಿದ್ದರು. ಸರ್ಕಾರ ಇವರ ಬಗ್ಗೆ ಮೃದುಧೋರಣೆ ತಳೆದಿದೆ. ರಾಮೇಶ್ವರಂ ಕೆಫೆ ಬದಲಾಗಿ ಬಿಜೆಪಿ ಕಚೇರಿಯಲ್ಲಿ ಬಾಂಬ್ ಸ್ಫೋಟಿಸಬೇಕು ಎಂಬುದು ಅವರ ಮೂಲ ಯೋಜನೆ ಆಗಿತ್ತು. ಹಿಂದೂಗಳನ್ನು ಗುರಿಯಾಗಿಸಿ ದಾಳಿ ಮಾಡುವ ಯೋಜನೆ ಅವರದಾಗಿತ್ತು’ ಎಂದು ಅಶೋಕ ಹೇಳಿದರು.

ವಸೂಲಿ ಮಾಡಲು ಇಟ್ಟುಕೊಂಡಿದ್ದರೇ? ಪರಮೇಶ್ವರ

‘ಭಾಸ್ಕರ ರಾವ್ ಹೇಳಿಕೆಗೆ ಪ್ರತಿಕ್ರಿಯಿಸುವುದು ಅಷ್ಟು ಸಮಂಜಸವಲ್ಲ. ಅವರು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿದ್ದವರು. ಆಗ ಸಿಸಿಬಿ ಇತ್ತಲ್ಲವೇ? ಆಗ ಭಾಸ್ಕರ ರಾವ್ ವಸೂಲಿ ಮಾಡಲು ಇಟ್ಟುಕೊಂಡಿದ್ದರೇ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಕಿಡಿಕಾರಿದರು.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದೆ. ದೊಡ್ಡ ಮಟ್ಟದ ಪ್ರಕರಣಗಳಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡಿದ್ದೇವೆ. ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ತನಿಖೆಯಲ್ಲಿ ರಾಜ್ಯ ಪೊಲೀಸರು ಪ್ರಮುಖ ಪಾತ್ರ ವಹಿಸಿದ್ದಾರೆ. ಆರೋಪಿಯ ಸುಳಿವು ಪತ್ತೆ ಹಚ್ಚಿದ್ದು ರಾಜ್ಯ ಪೊಲೀಸರು. ಬಳಿಕ ತನಿಖೆಗೆ ಎನ್‌ಐಎ ಬಂದಿದೆ. ಅವರಿಗೆ ಪ್ರಾಥಮಿಕ ಮಾಹಿತಿಯನ್ನು ನೀಡಿದ್ದು ರಾಜ್ಯ ಪೊಲೀಸರು. ನಾವು ನೀಡಿದ ಮಾಹಿತಿ ಆಧರಿಸಿ ಮುಂದಿನ ತನಿಖೆ ಕೈಗೊಳ್ಳಲು ಎನ್‌ಐಎಗೆ ಸಹಾಯವಾಗಿದೆ’ ಎಂದರು.

ಬೇಲೇಕೇರಿ:ಅದಿರು ರಾಶಿಯ ಅಲ್ಪ ಭಾಗ ತೆರವಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಬೇಲೇಕೇರಿ ಬಂದರು ಪ್ರದೇಶದ ಸುತ್ತಮುತ್ತ ದಶಕದಿಂದ ದಾಸ್ತಾನು ಆಗಿರುವ ಕಬ್ಬಿಣದ ಅದಿರಿನ ಪೈಕಿ ಅಲ್ಪಪಾಲನ್ನು ತೆರವುಗೊಳಿಸಲು ಸಂಬಂಧಿಸಿದ ಕಂಪನಿಗಳಿಗೆ ಹೈಕೋರ್ಟ್ ಅನುಮತಿಸಿದೆ. ಇದರ ಹಿನ್ನೆಲೆಯಲ್ಲಿ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅದಿರು ರಾಶಿಯ ಜಂಟಿ ಮೌಲ್ಯಮಾಪನ ನಡೆದಿದೆ.

‘2009–10ರ ಅವಧಿಯಲ್ಲಿ ದಾಸ್ತಾನು ಮಾಡಲಾದ 2.72 ಲಕ್ಷ ಟನ್ ಅದಿರು ಇರಬಹುದಾದ 56 ರಾಶಿಗಳ ಪೈಕಿ, ಸದ್ಯ ಐದು ರಾಶಿಗಳ ತೆರವಿಗೆ ಷರತ್ತುಬದ್ಧ ಅನುಮತಿ ಸಿಕ್ಕಿದೆ. 30ರಿಂದ 35 ಸಾವಿರ ಟನ್ ಅದಿರು ರಾಶಿ ತೆರವು ಆಗಬಹುದು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ತೆರವುಗೊಳಿಸುವ ಅದಿರಿಗೆ ಸಂಬಂಧಿಸಿ ಸೂಕ್ತ ರಾಜಧನ ಪಾವತಿಸುವ ಜತೆಗೆ ಸೂಕ್ತ ಆರ್ಥಿಕ ಭದ್ರತೆ ಒದಗಿಸಬೇಕು. ಪರಿಸರಕ್ಕೆ ಹಾನಿ ಆಗದಂತೆ ಅದಿರು ವಿಲೇವಾರಿ ಮಾಡಬೇಕು ಎಂಬುದು ಸೇರಿ ಹಲವು ಷರತ್ತುಗಳನ್ನು ಕಂಪನಿಗಳಿಗೆ ವಿಧಿಸಲಾಗಿದೆ’ ಎಂದು ಅವರು ತಿಳಿಸಿದರು.

‘ರಾಜಮಹಲ್ ಸಿಲ್ಕ್, ವೇದಾಂತ, ಜೆಮ್‌ಟೆಕ್ ಮತ್ತು ಸೆಸಾ ಗೋವಾ ಕಂಪನಿಗಳಿಗೆ ಅದಿರು ತೆರವಿಗೆ ಅನುಮತಿ ಸಿಕ್ಕಿದೆ’ ಎಂದು ಅಂಕೋಲಾ ಎಸಿಎಫ್ ಕೆ.ಸಿ.ಜಯೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಜೆಪಿ ಅವಧಿಯ 26 ಹಗರಣ: ಪರಿಶೀಲನೆಗೆ ಸಚಿವರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆದಿದೆ ಎನ್ನಲಾದ ವಿವಿಧ ಹಗರಣಗಳ ತನಿಖೆಗಳ ಪ್ರಗತಿ ಪರಿಶೀಲಿಸಲು ಮತ್ತು ಸಮನ್ವಯಕ್ಕೆ ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷತೆಯಲ್ಲಿ ಸಚಿವರ ಸಮಿತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರಚಿಸಿದ್ದಾರೆ.

ಕಾನೂನು ಸಚಿವ ಎಚ್‌.ಕೆ. ಪಾಟೀಲ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಸಮಿತಿಯ ಸದಸ್ಯರು. ಎರಡು ತಿಂಗಳಲ್ಲಿ ಪರಿಶೀಲನೆ ಪೂರ್ಣಗೊಳಿಸಬೇಕು ಎಂದು ಸಮಿತಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ಮಂಗಳವಾರ ಮಾಹಿತಿ ನೀಡಿದ ಪರಮೇಶ್ವರ, ‘ಕಳೆದ ಸಚಿವ ಸಂಪುಟ ಸಭೆಯಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ’ ಎಂದು ತಿಳಿಸಿದರು.

‘ಬಿಜೆಪಿ ಆಡಳಿತದ ಅವಧಿಯಲ್ಲಿ ನಡೆದ ಎಲ್ಲ ಹಗರಣಗಳನ್ನು ಪರಿಶೀಲಿಸುತ್ತಿದ್ದೇವೆ. ಸಂಪೂರ್ಣ ವರದಿ ಬಂದ ಬಳಿಕ ಕ್ರಮ ತೆಗೆದುಕೊಳ್ಳುತ್ತೇವೆ. ಬಿಜೆಪಿಯವರ ವಿಚಾರದಲ್ಲಿ ನಾವು ಮೃದು ಧೋರಣೆ ಹೊಂದಿಲ್ಲ. ದ್ವೇಷದ ರಾಜಕಾರಣ ಮಾಡಬಾರದು ಎಂಬುದು ನಮ್ಮ ಉದ್ದೇಶ. ಬಿಜೆಪಿಯವರು ದ್ವೇಷದ ರಾಜಕಾರಣ ಮುಂದುವರಿಸಿದರೆ, ನಾವೂ ಅದನ್ನೇ ಮಾಡಬೇಕಾಗುತ್ತದೆ’ ಎಂದು ಹೇಳಿದರು.

‘ಸಮಿತಿ ಈಗಾಗಲೇ 26 ಹಗರಣಗಳ ಮಾಹಿತಿ ಸಂಗ್ರಹಿಸಲು ಆರಂಭಿಸಿದೆ. ತನಿಖಾ ಸಂಸ್ಥೆಗಳ ಜೊತೆಗೂ ಪರಮೇಶ್ವರ ಅವರು ಚರ್ಚಿಸಿದ್ದು, ಪ್ರತಿ ಹಗರಣದ ತನಿಖಾ ವರದಿ ಪಡೆಯಲಾಗುತ್ತಿದೆ’ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಪಿಎಸ್‌ಐ ಪರೀಕ್ಷೆ ಮುಂದೂಡಿಕೆ: ಚರ್ಚಿಸಿ ಕ್ರಮ

ಬೆಂಗಳೂರು: ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 402 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ 22ರಂದು ನಡೆಸಲು ಉದ್ದೇಶಿಸಿರುವ ಸ್ಪರ್ಧಾತ್ಮಕ ಪರೀಕ್ಷೆಯನ್ನು ಮುಂದೂಡುವ ಕುರಿತು ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

‘ಬಿಜೆಪಿ ಆಡಳಿತದ ಅವಧಿಯಲ್ಲಿ 545 ಪಿಎಸ್‌ಐ ಹುದ್ದೆಗಳ ಭರ್ತಿಗೆ ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದ ಕಾರಣ ನೇಮಕಾತಿ ನಡೆದಿಲ್ಲ. ಎಲ್ಲ ಗೊಂದಲಗಳ ನಡುವೆಯೂ ನ್ಯಾಯಾಲಯದಿಂದ ಅನುಮತಿ ಪಡೆದು ಮರು ಪರೀಕ್ಷೆ ನಡೆಸಲಾಗಿದೆ. ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಹಂತದಲ್ಲಿ ಕೆಲವರು ನ್ಯಾಯಾಲಯಕ್ಕೆ ಹೋಗಿರುವುದರಿಂದ ಅಂತಿಮ ಪಟ್ಟಿ ಪ್ರಕಟಿಸಲು ವಿಳಂಬವಾಗುತ್ತಿದೆ’ ಎಂದರು.

‘ಸಿ.ಎಂ ಕುರ್ಚಿ; ಅನಗತ್ಯ ಚರ್ಚೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದು ಗೊತ್ತಿದ್ದೂ, ಈ ಕುರಿತು ಅನಗತ್ಯ ಚರ್ಚೆ ನಡೆದಿದೆ. ಸಮಸ್ಯೆಗಳಿದ್ದರೆ ಹೈಕಮಾಂಡ್ ಗಮನಕ್ಕೆ ತರಲಿ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಕುರ್ಚಿ ವಿಷಯ ಚರ್ಚೆ ಆಗುವಂಥದ್ದೇ ಅಲ್ಲ. ಸಿದ್ದರಾಮಯ್ಯ ಗಟ್ಟಿಯಾಗಿದ್ದಾರೆ’ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ಅರ್ಹತೆ, ಜನಪ್ರಿಯತೆ ಆಧಾರದಲ್ಲಿ ಮುಖ್ಯಮಂತ್ರಿ ಸ್ಥಾನ ಸಿಗಲಿದೆ. ಒಬ್ಬ ಅನುಭವಿ, ದಕ್ಷ ಆಡಳಿತಗಾರ, ಜನಪ್ರಿಯ ನಾಯಕರಾಗಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ’ ಎಂದರು.

ಆಸೆ ತಪ್ಪೇನಲ್ಲ: ‘ಸಿ.ಎಂ ಸ್ಥಾನದ ಆಸೆ ಇರುವುದು ತಪ್ಪೇನಲ್ಲ. 30-40 ವರ್ಷಗಳಿಂದ ಕೆಲಸ ಮಾಡಿರುವ ಕೆಲ ನಾಯಕರು ಇಂತಹ ಆಸೆ ವ್ಯಕ್ತಪಡಿಸಿದ್ದಾರೆ’ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

‘ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ತೆಗೆಯಲು ಯಾರಿಂದಲೂ ಸಾಧ್ಯವಿಲ್ಲ. ಡಿ.ಕೆ. ಶಿವಕುಮಾರ್ ಅವರಿಗೂ ಸಿ.ಎಂ ಆಗುವ ಆಸೆ ಇದೆ. ಮುಂದಿನ ಅವಧಿಗೆ ಸರ್ಕಾರ ತಂದು ಅವರು ಮುಖ್ಯಮಂತ್ರಿ ಆಗುತ್ತಾರೆ. ಆ ತಾಕತ್ತು ಅವರಿಗಿದೆ’ ಎಂದರು.

‘ಸಚಿವರು ಇಲ್ಲಸಲ್ಲದ ವಿಚಾರಗಳ ಕುರಿತು ಚರ್ಚಿಸಿ ವಿರೋಧ ಪಕ್ಷಕ್ಕೆ ಆಹಾರ ಆಗಬಾರದು’ ಎಂದು ಕಾಂಗ್ರೆಸ್ ಶಾಸಕ ಡಾ.ಎಚ್.ಡಿ. ರಂಗನಾಥ್ ಹೇಳಿದರು.

ಸಚಿವರಿಗೆ ಎಚ್ಚರಿಕೆ ನೀಡಿ– ಹೈಕಮಾಂಡ್‌ಗೆ ಪತ್ರ

‘ಮುಖ್ಯಮಂತ್ರಿ ಹುದ್ದೆಯ ಕುರಿತು ಹೇಳಿಕೆಗಳನ್ನು ನೀಡದಂತೆ ಸಚಿವರಿಗೆ ಎಚ್ಚರಿಕೆ ನೀಡಬೇಕು’ ಎಂದು ಆಗ್ರಹಿಸಿ ಕಾಂಗ್ರೆಸ್ ಮಾಜಿ ಸಚಿವರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಕೆಪಿಸಿಸಿ ಪದಾಧಿಕಾರಿಗಳು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಪತ್ರ ಬರೆದಿದ್ದಾರೆ.

ಇಂತಹ ಹೇಳಿಕೆಗಳು ಪಕ್ಷದ ವರ್ಚಸ್ಸಿನ ಮೇಲೆ ಪರಿಣಾಮ ಬೀರುತ್ತಿದೆ. ಕಾರ್ಯಕರ್ತರು ಭ್ರಮನಿರಸನಗೊಳ್ಳುವಂತಾಗಿದೆ. ಹೀಗಾಗಿ, ಈ ರೀತಿಯ ಹೇಳಿಕೆಗಳನ್ನು ನೀಡದಂತೆ ತಕ್ಷಣ ಕಡಿವಾಣ ಹಾಕಬೇಕು’ ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಬಿ.ಎಲ್. ಶಂಕರ್, ವಿ.ಎಸ್. ಉಗ್ರಪ್ಪ, ಎಚ್.ಎಂ. ರೇವಣ್ಣ, ವಿ.ಆರ್. ಸುದರ್ಶನ್, ಎಲ್. ಹನುಮಂತಯ್ಯ, ಬಿ.ಎನ್. ಚಂದ್ರಪ್ಪ, ಪ್ರಕಾಶ್ ರಾಥೋಡ್, ಪಿ.ಆರ್. ರಮೇಶ್, ಸಿ.ಎಸ್. ದ್ವಾರಕನಾಥ್, ಎಚ್.ಎಸ್. ಚಂದ್ರಮೌಳಿ ಸೇರಿದಂತೆ 13 ಮಂದಿ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಸಿದ್ದರಾಮಯ್ಯ ಅಧಿಕಾರ ಸ್ವೀಕರಿಸಿದ ದಿನದಿಂದ ಕಾಂಗ್ರೆಸ್‌ನ ನಾಯಕರಲ್ಲೇ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಇದೆ. ಈ ಆಂತರಿಕ ಕಲಹ ಇನ್ನಷ್ಟು ಬಿರುಸಾಗಲಿದೆ.

ಜಗದೀಶ ಶೆಟ್ಟರ್, ಸಂಸದ

ಯುವ ಸಮೂಹಕ್ಕೆ ‘ನಿಪುಣ’ ಕೌಶಲದ ಬಲ

ಬೆಂಗಳೂರು: ‘ನಿಪುಣ’ ಕಾರ್ಯಕ್ರಮ ನಿರ್ದಿಷ್ಟವಾಗಿ ಕೃತಕ ಬುದ್ಧಿಮತ್ತೆ (ಎಐ) ಮತ್ತು ಕ್ಲೌಡ್ ಕಂಪ್ಯೂಟಿಂಗ್‌ನಂತಹ ಕ್ಷೇತ್ರಗಳ ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ನಿಖರ ಕೌಶಲದೊಂದಿಗೆ ಯುವ ಸಮೂಹವನ್ನು ಸಜ್ಜುಗೊಳಿಸುವ ಗುರಿ ಹೊಂದಿದೆ’ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಾಂಗ್ಸ್‌ಬರ್ಗ್ ಡಿಜಿಟಲ್‌ನ ಅಧ್ಯಕ್ಷ ಮತ್ತು ಸಿಇಒ ಶೇನ್ ಮೆಕ್‌ಆರ್ಡಲ್ ಹಾಗೂ ಕಾಂಗ್ಸ್‌ಬರ್ಗ್ ಡಿಜಿಟಲ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಕುಮಾರ್ ನೇತೃತ್ವದ ನಿಯೋಗ ಮಂಗಳವಾರ ತಮ್ಮನ್ನು ಭೇಟಿ ಮಾಡಿದಾಗ, ಕೈಗಾರಿಕಾ–ನಿರ್ದಿಷ್ಟ ಕೌಶಲ್ಯ ಅಭಿವೃದ್ಧಿಗಾಗಿ ಯೋಜಿಸಲಾಗಿರುವ ‘ನಿಪುಣ’ ಕಾರ್ಯಕ್ರಮ ಬಳಸಿಕೊಳ್ಳುವಂತೆಯೂ ಅವರು ಸಲಹೆ ನೀಡಿದರು.

‘ನಿಪುಣ ಸಾಮಾನ್ಯ ತರಬೇತಿ ಕಾರ್ಯಕ್ರಮವಲ್ಲ. ಈ ಕಾರ್ಯಕ್ರಮ ನಿರ್ದಿಷ್ಟ ಉದ್ಯಮದ ಅಗತ್ಯಗಳನ್ನು ಪರಿಹರಿಸಲು ವಿನ್ಯಾಸಗೊಳಿಸಲಾಗಿದೆ. ಉದ್ಯೋಗಿಗಳ ಬೇಡಿಕೆಗಳನ್ನು ಪೂರೈಸಲು ಕಾಂಗ್ಸ್‌ಬರ್ಗ್ ಡಿಜಿಟಲ್‌ನಂತಹ ಕಂಪನಿಗಳೊಂದಿಗೆ ಸಹಕರಿಸಲು ಸಿದ್ಧರಿದ್ದೇವೆ’ ಎಂದು ಪ್ರಿಯಾಂಕ್ ಹೇಳಿದರು.

ಗಿರೀಶ ಕಾಸರವಳ್ಳಿಗೆ ಜೀವಮಾನ ಸಾಧನೆ ಪ್ರಶಸ್ತಿ



ಗಿರೀಶ್ ಕಾಸರವಳ್ಳಿ

ಬೆಂಗಳೂರು: ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ಇತ್ತೀಚೆಗಷ್ಟೇ ಜಾಫ್ನ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಐದು ದಶಕ ಚಿತ್ರೋದ್ಯಮದಲ್ಲಿ ರಾಜಿ ಮಾಡಿಕೊಳ್ಳದೆ ತಮ್ಮ ನಿಲುವುಗೆ ಬದ್ಧವಾಗಿ ಸದಭಿರುಚಿಯ ಗಂಭೀರ ಚಿತ್ರಗಳನ್ನು ಮಾಡುತ್ತಾ ಬಂದಿದ್ದಾರೆ. ಅವರ ಚಿತ್ರಗಳು ಸಿನಿಮಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

‘ವೆನಿಸ್ ಚಿತ್ರೋತ್ಸವದಲ್ಲಿ ಪುನರುಜ್ಜೀವನ (ರೆಸ್ಟೋರೇಶನ್) ಪಡೆದ ನನ್ನ ಮೊದಲ ಚಿತ್ರ ‘ಘಟಶ್ರಾದ್ಧ’ ಪ್ರದರ್ಶನದಲ್ಲಿ ಸಿಕ್ಕ ಅಪಾರ ಮನ್ನಣೆ ಉತ್ತೇಜಕವಾಗಿತ್ತು. ಚಿತ್ರದ ಕಥಾವಸ್ತು, ಅದರ ದೃಶ್ಯ, ಸಂಗೀತ, ಚಿತ್ರದ ಲಯದ ಬಗ್ಗೆ ಅಪಾರ ಚರ್ಚೆಯಾಯಿತು’ ಎಂದು ನಿರ್ದೇಶಕ ಗಿರೀಶ ಕಾಸರವಳ್ಳಿ ತಿಳಿಸಿದ್ದಾರೆ.

ಚಿಂಚೋಳಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೇವೆ ಸ್ಥಗಿತಗೊಳಿಸಿ ಪ್ರತಿಭಟನೆ; ಇಬ್ಬರ ಬಂಧನ

ಸಿಎಚ್‌ಸಿ ಮುಖ್ಯ ವೈದ್ಯಾಧಿಕಾರಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದ ಇಬ್ಬರು ರೋಗಿಗಳು ತಾಲ್ಲೂಕಿನ ಕುಂಚಾವರಂ ಸಮುದಾಯ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ.ಬಾಲಾಜಿ ಪಾಟೀಲ ಮೇಲೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎದುರಿನಲ್ಲೇ ಮಂಗಳವಾರ ಹಲ್ಲೆ ನಡೆಸಿದ್ದಾರೆ.

ಹಲ್ಲೆ ನಡೆಸಿದ ರಾಜಸ್ಥಾನ ಮೂಲದ ಅರ್ಜುನ್ ಹಾಗೂ ಪವನ್ ಅವರನ್ನು ಬಂಧಿಸಲಾಗಿದೆ.

ಮೂತ್ರಪಿಂಡದಲ್ಲಿ ಕಲ್ಲು ಬೆಳೆದಿರುವುದರಿಂದ ನೋವಿನಿಂದ ಬಳಲುತ್ತಿದ್ದ ಅರ್ಜುನ್ ಹಾಗೂ ಪವನ್ ಅವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಾಗ ವೈದ್ಯಾಧಿಕಾರಿ ಇರಲಿಲ್ಲ. ವೈದ್ಯಾಧಿಕಾರಿ ತಮ್ಮ ವಸತಿ ಗೃಹದಲ್ಲಿ ಎಸ್‌ಐ ವೆಂಕಟೇಶ ಅವರಿಗೆ ಚಿಕಿತ್ಸೆ ನೀಡುತ್ತಿದ್ದರು. ಆಗ ಅಲ್ಲಿಗೆ ಬಂದ ಅರ್ಜುನ್ ಹಾಗೂ ಪವನ್ ಅವರು ಜೋರಾಗಿ ಬಾಗಿಲನ್ನು ಬಡಿದಿದ್ದಾರೆ. ‘ಬಾಗಿಲನ್ನೇಕೆ ಈ ರೀತಿ ಬಡಿಯುತ್ತೀರಿ, ಬೆಲ್ ಬಾರಿಸಿದ್ದರೆ ಸಾಕಾಗುತ್ತಿತ್ತು’ ಎಂದು ವೈದ್ಯಾಧಿಕಾರಿ ಆಕ್ಷೇಪಿಸಿದ್ದಾರೆ. ಈ ವೇಳೆ ವಾಗ್ವಾದ ನಡೆಸಿದ ಇಬ್ಬರು ರೋಗಿಗಳು, ವೈದ್ಯಾಧಿಕಾರಿ ಮೇಲೆ ಹಲ್ಲೆ ನಡೆಸಿದ್ದಾರೆ. ತಡೆಯಲು ಬಂದ ಎಸ್‌ಐ ವೆಂಕಟೇಶ ಅವರನ್ನೂ ತಳ್ಳಾಡಿದ್ದಾರೆ.

ಈ ಬಗ್ಗೆ ಕುಂಚಾವರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಬ್ಬಂದಿ ಪ್ರತಿಭಟನೆ: ವೈದ್ಯಾಧಿಕಾರಿ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಆಸ್ಪತ್ರೆಯ ಸಿಬ್ಬಂದಿ ಸೇವೆ ಸ್ಥಗಿತಗೊಳಿಸಿ ಪ್ರತಿಭಟಿಸಿದರು. ಆರೋಪಿಗಳನ್ನು ಬಂಧಿಸಿರುವುದು ಖಚಿತಗೊಂಡ ಬಳಿಕವೇ ಸಿಬ್ಬಂದಿ ಸೇವೆಗೆ ಮರಳಿದರು.

ಸುದ್ದಿ ತಿಳಿದು ಟಿಎಚ್‌ಒ ಡಾ.ಮಹಮದ್ ಗಫಾರ್, ತಾಲ್ಲೂಕು ಆಸ್ಪತ್ರೆಯ ಸಿಎಂಒ ಡಾ.ಸಂತೋಷ ಪಾಟೀಲ ಅವರು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದರು.



ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಸಮುದಾಯ ಆರೋಗ್ಯ ಕೇಂದ್ರಕ್ಕೆ ಟಿಎಚ್‌ಒ ಡಾ.ಮಹಮದ್ ಗಫಾರ್ ಭೇಟಿ ನೀಡಿ ವೈದ್ಯರ ಮೇಲೆ ನಡೆದ ಹಲ್ಲೆಯ ಕುರಿತು ಮಾಹಿತಿ ಪಡೆದರು

ವೈದ್ಯರ ಮೇಲೆ ಚಪ್ಪಲಿ ಎಸೆತ

ಒಂದನೇ ಪುಟದಿಂದ...

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೃಷ್ಣಮೂರ್ತಿ, ಉಪವಿಭಾಗಾಧಿಕಾರಿ ದಲ್ಜೀತ್‌ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅಶ್ವತ್ಥಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಮೋಹನ್‌ಕುಮಾರ್ ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರು.

ಪ್ರಕರಣ ದಾಖಲಾಗಿ ಆರೋಪಿಗಳನ್ನು ಬಂಧಿಸುವ ತನಕ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ವೈದ್ಯಕೀಯ ಸಿಬ್ಬಂದಿ ಪಟ್ಟು ಹಿಡಿದರು. ಎಲ್ಲರೂ ನಗರ ಠಾಣೆವರೆಗೆ ಮೆರವಣಿಗೆಯಲ್ಲಿ ಸಾಗಿ ದೂರು ಸಲ್ಲಿಸಿದರು. ಠಾಣೆ ಬಳಿ ಜಮಾಯಿಸಿದ ಬಜರಂಗದಳ ಮತ್ತು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಆರೋಪಿಗಳನ್ನು ಬಂಧಿಸಬೇಕೆಂದು ಒತ್ತಾಯಿಸಿದರು. ಎಫ್‌ಐಆರ್ ದಾಖಲಿಸಿಕೊಂಡ ಪೊಲೀಸರು, ತಸ್ಲಿಮಾ, ಇರ್ಫಾನ್ ಅವರನ್ನು ಬಂಧಿಸಿದ್ದಾರೆ.

ತಸ್ಲಿಮಾ ಅವರು ಮಹಿಳಾ ಠಾಣೆಗೆ ದೂರು ನೀಡಿದ್ದು, ಡಾ.ವೆಂಕಟೇಶ್ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಮಹಿಳಾ ಠಾಣೆ ಎದುರು ಮುಸ್ಲಿಂ ಮುಖಂಡರು ಜಮಾಯಿಸಿದ್ದರು. ಡಾ. ವೆಂಕಟೇಶ್ ವಿರುದ್ಧ ಪೊಲೀಸರು ಗುರುತರವಲ್ಲದ ಅಪರಾಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ವಾಚಾಳಿಯಿಂದ ಮೌನವಾಗಿ ಇರುವುದನ್ನು, ಅಸಹಿಷ್ಣು ವ್ಯಕ್ತಿಯಿಂದ ಸಹನೆಯನ್ನು, ನಿರ್ದಯಿಯಿಂದ ದಯಾಪರತೆಯನ್ನು ಕಲಿತೆ. ಅಷ್ಟಾದರೂ ಆ ಯಾವ ಗುರುವಿನ ಬಗ್ಗೆಯೂ ನನಗೆ ಕೃತಜ್ಞತೆಯೇ ಇಲ್ಲದಿರುವುದು ವಿಚಿತ್ರವಾದ ಸಂಗತಿ. **-ಖಲೀಲ್ ಗಿಬ್ರಾನ್**

ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ನಿವಾರಣೆಗೆ ತುರ್ತು ಕ್ರಮ ಅಗತ್ಯ

ಜಗತ್ತಿನಲ್ಲಿ ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸುತ್ತಿರುವ ದೇಶ ಎಂಬ ಕುಖ್ಯಾತಿಯನ್ನು ಈಗ ಭಾರತ ಪಡೆದುಕೊಂಡಿದೆ. ಈ ಹಿಂದೆ ಅಂತಹ ಕುಖ್ಯಾತಿಗೆ ಚೀನಾ ಒಳಗಾಗಿತ್ತು. ಸದ್ಯದ ಭವಿಷ್ಯದಲ್ಲಿ ಈ ಕುಖ್ಯಾತಿಯನ್ನು ನಮ್ಮ ದೇಶ ಕಳಚಿಕೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ಭಾರತದಲ್ಲಿ ಪ್ರತಿವರ್ಷ ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು ಸುಮಾರು 93 ಲಕ್ಷ ಟನ್. ಜಗತ್ತಿನಲ್ಲಿ ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯದ ಐದನೇ ಒಂದು ಭಾಗ ಇದು. ಲೀಡ್ಸ್ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನದಿಂದ ಈ ಮಾಹಿತಿ ತಿಳಿದುಬಂದಿದೆ. ಇತರ ಅಧ್ಯಯನಗಳ ಫಲಿತಾಂಶವೂ ಇದೇ ರೀತಿಯಲ್ಲಿ ಇದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು 2020–21ರಲ್ಲಿ ಸಿದ್ಧಪಡಿಸಿದ ವರದಿಯ ಪ್ರಕಾರ, ದೇಶದಲ್ಲಿ ಪ್ರತಿವರ್ಷ ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು 40 ಲಕ್ಷ ಟನ್. ತ್ಯಾಜ್ಯದ ಪ್ರಮಾಣವನ್ನು ಸರಿಯಾಗಿ ಅಂದಾಜಿಸುವುದು ಬಹಳ ಕಷ್ಟ. ಹೀಗಾಗಿ, ಸೃಷ್ಟಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವು ಈ ಅಂಕಿಗಳಿಗಿಂತಲೂ ಬಹಳ ಹೆಚ್ಚು ಆಗಿರಬಹುದು. ಗ್ರಾಮೀಣ ಪ್ರದೇಶದಲ್ಲಿ ಬೆಂಕಿಗೆ ಹಾಕಲಾದ, ಸಂಗ್ರಹಿಸಿಲ್ಲದ ಮತ್ತು ಮರುಬಳಕೆಯಾದ ಪ್ಲಾಸ್ಟಿಕ್ ಇದರಲ್ಲಿ ಸೇರಿಲ್ಲ ಎಂದು ಲೀಡ್ಸ್ ವರದಿ ಹೇಳಿದೆ. ದೇಶದಲ್ಲಿ ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಯಾಗುವ ನಗರ ದೆಹಲಿ.



ಪ್ಲಾಸ್ಟಿಕ್ ತ್ಯಾಜ್ಯ ಪ್ರತಿಯೊಬ್ಬರ ಮೇಲೂ ಪರಿಣಾಮ ಬೀರುವುದರಿಂದ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು ಮತ್ತು ಪ್ಲಾಸ್ಟಿಕ್ ತಯಾರಕರ ಹೊಣೆಗಾರಿಕೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು

ಪ್ಲಾಸ್ಟಿಕ್ ತ್ಯಾಜ್ಯವು ಅತಿಯಾಗಿದೆ ಎಂಬುದಾಗಲೀ ಅದರ ಬಗೆಗಿನ ಕಳವಳವಾಗಲೀ ಹೊಸದೇನೂ ಅಲ್ಲ. ಪ್ಲಾಸ್ಟಿಕ್ ತ್ಯಾಜ್ಯದ ಸಮಸ್ಯೆಯು ವರ್ಷ ಕಳೆದಂತೆ ಹೆಚ್ಚುತ್ತಲೇ ಇದೆ. ಈ ಹಿಂದೆ, ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸುತ್ತಿದ್ದ ಚೀನಾ ತನ್ನ ಈ ಸಮಸ್ಯೆಯನ್ನು ಅತ್ಯಂತ ದಕ್ಷವಾಗಿ ನಿವಾರಿಸಿಕೊಂಡಿದೆ; ಪ್ಲಾಸ್ಟಿಕ್‌ನ ದಹಿಸುವಿಕೆ ಮತ್ತು ಹೂಳುವಿಕೆ ಮೂಲಕ ಚೀನಾ ಈ ಕೆಲಸ ಮಾಡಿದೆ. ತ್ಯಾಜ್ಯ ವಿಲೇವಾರಿ, ನಿವಾರಣೆ ಮತ್ತು ಮರುಬಳಕೆಯ ವ್ಯವಸ್ಥೆಯನ್ನು ಭಾರತವು ಉತ್ತಮಪಡಿಸಿಕೊಳ್ಳಬೇಕಿದೆ. ಸಾರ್ವಜನಿಕ ಆರೋಗ್ಯ, ಸುಸ್ಥಿರ ಅಭಿವೃದ್ಧಿ ಮತ್ತು ಸ್ವಚ್ಛ ಪರಿಸರ ಎಲ್ಲದರ ಮೇಲೆಯೂ ಇದು ಪ್ರತಿಕೂಲ ಪರಿಣಾಮ ಬೀರುತ್ತದೆ. ಸುಟ್ಟ ಬಳಿಕವೂ ಉಳಿಯುವ ಪ್ಲಾಸ್ಟಿಕ್‌ನ ಅತಿ ಸಣ್ಣ ಕಣಗಳು ನಮ್ಮ ದೇಹದೊಳಕ್ಕೆ ಪ್ರವೇಶಿಸಿ, ಗಂಭೀರ ಆರೋಗ್ಯ ಸಮಸ್ಯೆಗೆ ಕಾರಣವಾಗುತ್ತವೆ. ಜಗತ್ತಿನ ಉತ್ತರ ಭಾಗದ ದೇಶಗಳಿಗೆ ಹೋಲಿಸಿದರೆ ದಕ್ಷಿಣದ ದೇಶಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸುವ ಸಂಪನ್ಮೂಲ ಕಡಿಮೆ ಇದೆ. ಆದರೆ, ಪ್ಲಾಸ್ಟಿಕ್ ತ್ಯಾಜ್ಯವು ಪ್ರತಿಯೊಬ್ಬರ ಮೇಲೆಯೂ ಪರಿಣಾಮ ಬೀರುತ್ತದೆ. ಹಾಗಾಗಿ, ತ್ಯಾಜ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಇಡೀ ಜಗತ್ತು ಒಟ್ಟಾಗಿ ಶ್ರಮಿಸಬೇಕು.

ಪ್ಲಾಸ್ಟಿಕ್ ತ್ಯಾಜ್ಯದ ಸಂಗ್ರಹ, ವಿಲೇವಾರಿ ಮತ್ತು ಮರುಬಳಕೆಗೆ ಭಾರತದಲ್ಲಿ ನಿಯಮಗಳು ಮತ್ತು ನಿಬಂಧನೆಗಳು ಇವೆ. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು ಮತ್ತು ಪ್ಲಾಸ್ಟಿಕ್ ತಯಾರಕರ ಹೊಣೆಗಾರಿಕೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಇದಕ್ಕೆ ಸಂಬಂಧಿಸಿ ವಿಸ್ತೃತವಾದ ಪ್ರಕ್ರಿಯೆಗಳನ್ನೂ ರೂಪಿಸಲಾಗಿದೆ. ಆದರೆ, ಅನುಷ್ಠಾನ ಮಾತ್ರ ಸಮರ್ಪಕವಾಗಿ ಇಲ್ಲ. ನಿಯಮಗಳಿಂದ ತಪ್ಪಿಸಿಕೊಳ್ಳಲಾಗುತ್ತದೆ. ಭ್ರಷ್ಟಾಚಾರವೂ ಇದೆ. ತ್ಯಾಜ್ಯ ಸಂಗ್ರಹ, ವಿಲೇವಾರಿ ಮತ್ತು ಮರುಬಳಕೆಗೆ ಬೇಕಾದ ಸಂಪನ್ಮೂಲದ ಕೊರತೆ ಇದೆ. ದಕ್ಷತೆಯೂ ಇಲ್ಲ. ಏಕಬಳಕೆ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸುವ ಪ್ರಯತ್ನಗಳ ಸಮನ್ವಯಕ್ಕೆ ಕಾರ್ಯಪಡೆಯನ್ನು ರಚಿಸಲಾಗಿದೆ. ನಿಯಮಗಳ ಅನುಷ್ಠಾನವನ್ನು ಉತ್ತಮಪಡಿಸಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಲವು ಕ್ರಮಗಳನ್ನು ಕೈಗೊಂಡಿದೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು ಸುಸ್ಥಿರ ಪ್ಯಾಕಿಂಗ್‌ಗಾಗಿ ಅಭಿಯಾನವೊಂದನ್ನು ಆರಂಭಿಸಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಪಾತ್ರ ನಿರ್ಣಾಯಕ. ಆದರೆ, ಹಲವು ರಾಜ್ಯಗಳಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳು ನಿಷ್ಕ್ರಿಯವಾಗಿವೆ. ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಇದ್ದರೂ ಪ್ಲಾಸ್ಟಿಕ್ ತಲಾ ಬಳಕೆ ಪ್ರಮಾಣವು ಕಡಿಮೆ. ಆದರೆ, ಇದು ಖುಷಿಪಡುವ ವಿಚಾರವೇನೂ ಅಲ್ಲ.

ದಿನದ ಟ್ವೀಟ್

‘ಗುಂಡು’ ಕಂಡು ಮುಗಿಬಿದ್ದ ಭೂಪರು!



ಆಂಧ್ರಪ್ರದೇಶದ ಗುಂಟೂರಿನಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ₹ 50 ಲಕ್ಷ ಮೌಲ್ಯದ ಮದ್ಯವನ್ನು ನಾಶಪಡಿಸಲು ಜೋಡಿಸಿಟ್ಟಿದ್ದಾಗ, ಮದ್ಯಪ್ರಿಯರ ಗುಂಪೊಂದು ಅದನ್ನು ಲೂಟಿ ಮಾಡಲು ಯತ್ನಿಸಿದ್ದರಿಂದ ಗೊಂದಲದ ಸ್ಥಿತಿ ನಿರ್ಮಾಣವಾಯಿತು. ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಈ ಮದ್ಯವನ್ನು ನಾಶಪಡಿಸಲು ಅಧಿಕಾರಿಗಳು ಮುಂದಾಗುತ್ತಿದ್ದಂತೆಯೇ ನುಗ್ಗಿಬಂದ ಕೆಲವರು, ಸಿಕ್ಕಷ್ಟು ಮದ್ಯದ ಬಾಟಲಿಗಳನ್ನು ಎತ್ತಿಕೊಂಡು ಪರಾರಿಯಾದರು...

ಸುಧಾಕರ್ ಉದುಮುಲ, ಪತ್ರಕರ್ತ, ಲೇಖಕ

ಕಿಡಿನುಡಿ

ರೈಲನ್ನು ಉರುಳಿಸಲು ಮತ್ತೊಂದು ಪಿತೂರಿ! ಈ ಬಾರಿ ರಾಜಸ್ಥಾನದ ಅಜ್ಮೇರ್‌ನಲ್ಲಿ. ಫುಲೇರಾ– ಅಹಮದಾಬಾದ್ ಮಾರ್ಗದಲ್ಲಿ ಹಳಿ ತಪ್ಪಿಸಲು ಇಟ್ಟಿದ್ದ 70 ಕೆ.ಜಿ. ತೂಕದ ಸಿಮೆಂಟ್ ಬ್ಲಾಕ್‌ಗಳನ್ನು ಪತ್ತೆಹಚ್ಚಲಾಗಿದೆ. ಎಫ್‌ಐಆರ್ ದಾಖಲಿಸಲಾಗಿದೆ. ತನಿಖೆ ಆರಂಭವಾಗಿದೆ. ಇತ್ತೀಚೆಗೆ ನಡೆದ ಇಂತಹ ಎಲ್ಲ ಪ್ರಕರಣಗಳ ತನಿಖೆಯನ್ನೂ ಎನ್‌ಐಎಗೆ ವಹಿಸಬೇಕು.

ಲಕ್ಷ್ಯ ಮೆಹತಾ

25 ವರ್ಷಗಳ ಹಿಂದೆ

ಶನಿವಾರ, 11-9-1999

• 2ನೇ ಹಂತ: ಮತದಾನ ಇಂದು

ಬೆಂಗಳೂರು, ಸೆ. 10– ರಾಜ್ಯದಲ್ಲಿ ನಾಳೆ ನಡೆಯಲಿರುವ ಎರಡನೇ ಸುತ್ತಿನ ಮತದಾನದಲ್ಲಿ ಒಬ್ಬರು ಮಾಜಿ ಪ್ರಧಾನಿ, ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಇಬ್ಬರು ಮಾಜಿ ಉಪಮುಖ್ಯಮಂತ್ರಿಗಳು ಹಾಗೂ ಪ್ರಮುಖ ರಾಜಕೀಯ ಪಕ್ಷಗಳ ರಾಜ್ಯ ಘಟಕಗಳ ಮೂವರು ಅಧ್ಯಕ್ಷರು ಸೇರಿದಂತೆ ಅನೇಕ ಘಟಾನುಘಟಿಗಳ ರಾಜಕೀಯ ಭವಿಷ್ಯವನ್ನು ಮತದಾರರು ತೀರ್ಮಾನಿಸಲಿದ್ದಾರೆ.

ಹದಿಮೂರು ಲೋಕಸಭೆ ಹಾಗೂ 104 ವಿಧಾನಸಭಾ ಕ್ಷೇತ್ರಗಳಿಗೆ ಶನಿವಾರ ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದ್ದು, ಒಟ್ಟು 632 ಅಭ್ಯರ್ಥಿಗಳು ಮತದಾರರ ‘ಅಗ್ನಿಪರೀಕ್ಷೆ’ಗೆ ಒಳಗಾಗಲಿದ್ದಾರೆ. ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಎಲೆಕ್ಟ್ರಾನಿಕ್ ಮತದಾನ ಯಂತ್ರಗಳ ಮೂಲಕ ಚುನಾವಣೆ ನಡೆಯಲಿದೆ.

• ಅಮೇಥಿಯಲ್ಲಿ ಸೋನಿಯಾ ನಾಮಪತ್ರ

ಸುಲ್ತಾನ್‌ಪುರ (ಉತ್ತರ ಪ್ರದೇಶ), ಸೆ. 10– ಬಿಜೆಪಿ ವಿರೋಧಿ ಘೋಷಣೆ, ಕಾಂಗ್ರೆಸ್ ಪರ ಜನಸಾಗರದ ಮುಗಿಲು ಮುಟ್ಟುವ ಘೋಷಣೆಗಳ ನಡುವೆ ಸೋನಿಯಾ ಗಾಂಧಿ ಅವರು ತಮ್ಮ ಪತಿ ರಾಜೀವ್ ಗಾಂಧಿ ಪ್ರತಿನಿಧಿಸುತ್ತಿದ್ದ ಪ್ರತಿಷ್ಠಿತ ಅಮೇಥಿ ಲೋಕಸಭೆ ಕ್ಷೇತ್ರದಲ್ಲಿ ಇಂದು ನಾಮಪತ್ರ ಸಲ್ಲಿಸುವ ಮೂಲಕ ಉತ್ತರ ಪ್ರದೇಶದಲ್ಲಿ ಚುನಾವಣೆಯು ರಂಗೇರುವಂತೆ ಮಾಡಿದರು.

ಸೋನಿಯಾ ಗಾಂಧಿ ಅವರು ನಾಮಪತ್ರ ಸಲ್ಲಿಸುವ ಸಂಗತಿ ಜಿಲ್ಲಾ ಆಡಳಿತಕ್ಕೆ ಮೊದಲೇ ಗೊತ್ತಿದ್ದ ಕಾರಣ ಜಿಲ್ಲಾಧಿಕಾರಿ ಕಾರ್ಯಾಲಯದ ಒಳಗಡೆ ಸೂಕ್ತ ಬಂದೋಬಸ್ತ್ ಮಾಡಲಾಗಿತ್ತು.

50 ವರ್ಷಗಳ ಹಿಂದೆ

ಬುಧವಾರ, 11-9-1974

• ಕಪ್ಪುಹಣ, ತೆರಿಗೆ ಕಳ್ಳತನದ ವಿರುದ್ಧ ತೀವ್ರ ಕ್ರಮಕ್ಕಾಗಿ ಸಚಿವರ ಆದೇಶ

ನವದೆಹಲಿ, ಸೆ. 10– ಕಳ್ಳಹಣದಿಂದ ವಹಿವಾಟು ನಡೆಸುವವರು ಮತ್ತು ತೆರಿಗೆಗಳ್ಳರನ್ನು ಪತ್ತೆ ಮಾಡುವ ಕ್ರಮಗಳನ್ನು ಮತ್ತಷ್ಟು ತೀವ್ರಗೊಳಿಸುವಂತೆ ಕೇಂದ್ರ ಹಣಕಾಸು ಸಚಿವ ಶಾಖೆಯು ವರಮಾನ ತೆರಿಗೆ ಇಲಾಖೆಗೆ ಆದೇಶಿಸಿದೆ.

ಆದಾಯ ತೆರಿಗೆ ಕಮಿಷನರುಗಳಿಗೆ ಹಣಕಾಸು ಖಾತೆ ರಾಜ್ಯ ಸಚಿವ ಕೆ.ಆರ್. ಗಣೇಶ್‌ರವರು ಪತ್ರವೊಂದನ್ನು ಬರೆದು, ಉತ್ಪಾದನೆಯನ್ನು ಬಚ್ಚಿಡುವ ಹಾಗೂ ಈಗ ಅಭಾವವಿರುವ ಸಾಮಾನ್ಯ ಬಳಕೆ ವಸ್ತುಗಳ ಅಕ್ರಮ ದಾಸ್ತಾನು ಮತ್ತು ಕಳ್ಳಪೇಟೆಯಲ್ಲಿ ತೊಡಗಿರುವವರ ವಿರುದ್ಧ ಗಮನವನ್ನು ಕೇಂದ್ರೀಕರಿಸುವಂತೆ ತಿಳಿಸಿದ್ದಾರೆ.

ತೆರಿಗೆಗಳಿಂದ ತಪ್ಪಿಸಿಕೊಳ್ಳಲು ಮೌಲ್ಯ ಕಡಿಮೆ ನೀಡಿರುವ ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಕ್ಕೆ ವಿಶೇಷ ಗಮನ ನೀಡುವಂತೆಯೂ ಸೂಚಿಸಲಾಗಿದೆ.

• ರಾಜ್ಯಗಳಿಗೆ ಇನ್ನಷ್ಟು ಹೆಚ್ಚು ಸೀಮೆಎಣ್ಣೆ; ಶೇ 10 ಖೋತಾ ರದ್ದು

ನವದೆಹಲಿ, ಸೆ. 10– ರಾಜ್ಯಗಳಿಗೆ ಒದಗಿಸುವ ಸೀಮೆಎಣ್ಣೆಯಲ್ಲಿ ಈವರೆಗೆ ಇದ್ದ ಖೋತಾವನ್ನು ಭಾಗಶಃ ತುಂಬಿಸಲಾಗಿದೆ.

ಜೂನ್ ಒಂದನೇ ತಾರೀಕಿನಿಂದ ಅದರ ಖೋತಾ ಶೇ 30ರಷ್ಟು ಇತ್ತು. ಆದರೆ ಸೆಪ್ಟೆಂಬರ್ ಒಂದರಿಂದ ಅದು ಶೇ 20ರಷ್ಟು ಮಾತ್ರ ಆಗಿರುತ್ತದೆ.

ರಾಜ್ಯಗಳಿಗೆ ಸೀಮೆಎಣ್ಣೆ ಖೋತಾ ಜನವರಿಯಿಂದ ಪ್ರಾರಂಭವಾಯಿತು. ಮೊದಲು ಶೇ 15ರಷ್ಟು ಮಾತ್ರ ಇದ್ದ ಅದು ಫೆಬ್ರುವರಿಯಲ್ಲಿ ಶೇ 20ಕ್ಕೆ ಏರಿತು. ಆದರೆ ಮಾರ್ಚ್‌ನಲ್ಲಿ ಅದು ಮೊದಲು ಶೇ 15ಕ್ಕೆ ಇಳಿದು ಏಪ್ರಿಲ್‌ನಲ್ಲಿ ಶೇ 25ಕ್ಕೆ ಏರಿತು. ಪುನಃ ಮೇ ತಿಂಗಳಿನಲ್ಲಿ ಅದು ಶೇ 20ಕ್ಕೆ ಇಳಿದು ಜೂನ್‌ನಿಂದ ಆಗಸ್ಟ್‌ವರೆಗೆ ಶೇ 30ರಷ್ಟು ಖೋತಾ ಜಾರಿಯಲ್ಲಿತ್ತು.

ಮೈತ್ರಿಕೂಟದ ಮಾರುತಗಳಿಗೆ ಹಾಯಿಯನ್ನು ಹೊಂದಿಸಿಕೊಳ್ಳುತ್ತಿರುವ ಪ್ರಧಾನಿ ಮೋದಿ

ಗಾಳಿಗೆ ಬಾಗುವ ಮರ ಬಾಳುತ್ತದೆ



ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಮರಳಿದ ನಂತರ ಕೈಗೊಂಡ ಕೆಲವು ನಿರ್ಧಾರಗಳನ್ನು ಹಿಂಪಡೆದುಕೊಂಡಿದ್ದನ್ನು ಉಲ್ಲೇಖಿಸಿ ಅವರ ವಿರೋಧಿಗಳ ಪೈಕಿ ಹಲವರು ಅಣಕವಾಡುತ್ತಿದ್ದಾರೆ. ಆದರೆ, ಮೋದಿ ಅವರು ಹೊಸ ಮೈತ್ರಿ ಸರ್ಕಾರದ ಪರಿಸ್ಥಿತಿಗೆ ಹೊಂದಿಕೊಳ್ಳುವ ಗುಣವನ್ನು ತೋರಿಸುತ್ತಿರುವಂತೆ ಕಾಣುತ್ತಿದೆ.

ಮೂರನೆಯ ಅವಧಿಗೆ ಅಧಿಕಾರ ವಹಿಸಿಕೊಂಡ ನಂತರದಲ್ಲಿ ಮೋದಿ ನೇತೃತ್ವದ ಸರ್ಕಾರವು ತನ್ನ ನೀತಿಗಳನ್ನು ಹಿಂಪಡೆಯುವ ಕೆಲಸ ಮಾಡುತ್ತಿದೆ ಎಂದು ಆರೋಪಿಸುತ್ತಿರುವವರು ಒಂದು ಸಂಗತಿಯನ್ನು ಮರೆಯುತ್ತಿರುವಂತೆ ಕಾಣುತ್ತಿದೆ. ಅಂದರೆ, ಮೋದಿ ಅವರು ಹಲವು ಸಂದರ್ಭಗಳಲ್ಲಿ ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸುತ್ತಿದ್ದರೂ 2014ರಿಂದ 2024ರ ವರೆಗೆ ಸ್ಪಷ್ಟವಾದ ಬಹುಮತ ಇದ್ದಾಗಲೂ ಭಿನ್ನ ಅಭಿಪ್ರಾಯಗಳಿಗೆ ತಲೆಬಾಗುವ ಕೆಲಸವನ್ನೂ ಮಾಡಿದ್ದರು. ಮೈತ್ರಿ ರಾಜಕಾರಣದ ವಾಸ್ತವವನ್ನು ಮೋದಿ ಅವರು ಒಪ್ಪಿಕೊಳ್ಳುತ್ತಾರೆ, ಸರ್ಕಾರವನ್ನು ಸಹಮತದ ನೆಲೆಯಲ್ಲಿ ಮುನ್ನಡೆಸುತ್ತಾರೆ ಎಂಬುದನ್ನು ವಿರೋಧ ಪಕ್ಷಗಳ ನಾಯಕರು ನಿರೀಕ್ಷಿಸಿರಲಿಲ್ಲ ಎಂಬುದು ಅವರ ಪ್ರತಿಕ್ರಿಯೆಗಳನ್ನು ಕಂಡಾಗ ಅನಿಸುತ್ತದೆ. ಆದರೆ, ಕಳೆದ ನಾಲ್ಕು ವಾರಗಳ ಘಟನೆಗಳು ವಿರೋಧ ಪಕ್ಷಗಳ ನಿರೀಕ್ಷೆಗಳನ್ನು ಹುಸಿಯಾಗಿಸಿವೆ.

ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆಯನ್ನು ಹಿಂಪಡೆಯುವುದಾಗಿ ಕೇಂದ್ರ ಸರ್ಕಾರವು ಆಗಸ್ಟ್ ಆರಂಭದಲ್ಲಿ ಹೇಳಿತು. ಅದಾದ ನಂತರ, ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಈ ಮಸೂದೆಯ ಮೊದಲ ಕರಡಿನ ಬಗ್ಗೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

ಆಗಸ್ಟ್ ತಿಂಗಳಲ್ಲಿ ಕೇಂದ್ರವು ಲ್ಯಾಟರಲ್ ಎಂಟ್ರಿ ವಿಚಾರದಲ್ಲಿ ಹಿಂದಡಿ ಇರಿಸಬೇಕಾಯಿತು. 2018ರಲ್ಲಿಯೂ ಕೇಂದ್ರ ಸರ್ಕಾರವು ಈ ಬಗೆಯ ನೇಮಕಾತಿಗಳನ್ನು ನಡೆಸಿತ್ತಾದರೂ, ಎನ್‌ಡಿಎ ಮೈತ್ರಿಕೂಟದ ಪಾಲುದಾರರ ವಿರೋಧದ ಕಾರಣಕ್ಕೆ ಸರ್ಕಾರವು ಈ ಬಾರಿ ಈ ಪ್ರಯತ್ನವನ್ನು ಕೈಬಿಡಬೇಕಾಯಿತು. 45 ಮಂದಿ ‘ಪ್ರತಿಭಾನ್ವಿತ ಹಾಗೂ ಪ್ರೇರಣಾದಾಯಿಗಳಾದ ಭಾರತೀಯ ಪ್ರಜೆಗಳನ್ನು’ ಲ್ಯಾಟರಲ್ ಎಂಟ್ರಿ ಮೂಲಕ ನೇಮಕ ಮಾಡಿಕೊಳ್ಳುವ ಕೇಂದ್ರ ಲೋಕಸೇವಾ ಆಯೋಗದ ಪ್ರಸ್ತಾವವನ್ನು ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ಅಧ್ಯಕ್ಷ ಚಿರಾಗ್ ಪಾಸ್ವಾನ್ ಅವರು ಪ್ರಶ್ನಿಸಿದರು. ಈ ಬಗೆಯ ನೇಮಕಾತಿಗಳ ಪರವಾಗಿ ತಾವು ಇಲ್ಲ ಎಂದು ಅವರು ಘೋಷಿಸಿದರು. ‘ಸರ್ಕಾರಿ ನೇಮಕಾತಿಗಳು ನಡೆಯುವಾಗಲೆಲ್ಲ ಮೀಸಲಾತಿಯನ್ನು ಪಾಲಿಸಬೇಕು, ಈ ವಿಚಾರದಲ್ಲಿ ಆದರೆ ಹೋದರೆ ಎಂಬ ಮಾತುಗಳು ಸಲ್ಲ’ ಎಂದು ಸ್ಪಷ್ಟಪಡಿಸಿದರು. ಜೆಡಿಯು ಕೂಡ ಈ ನೇಮಕಾತಿಗೆ ಆಕ್ಷೇಪ ವ್ಯಕ್ತಪಡಿಸಿತು.

ಮಿತ್ರಪಕ್ಷಗಳಿಂದ ಆಕ್ಷೇಪ ಬಂದ ನಂತರ, ಲ್ಯಾಟರಲ್ ಎಂಟ್ರಿ ಕುರಿತ ಜಾಹೀರಾತನ್ನು ಹಿಂಪಡೆಯುವಂತೆ ಯುಪಿಎಸ್‌ಸಿಗೆ ಸೂಚಿಸಲು ಕೇಂದ್ರವು ತಡಮಾಡಲಿಲ್ಲ. ಯುಪಿಎಸ್‌ಸಿಗೆ ಬರೆದ ಪತ್ರದಲ್ಲಿ ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ಲ್ಯಾಟರಲ್ ಎಂಟ್ರಿ ಪ್ರಕ್ರಿಯೆಯು ‘ಸಂವಿಧಾನದಲ್ಲಿ ಹೇಳಿರುವ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಕ್ಕೆ ಬದ್ಧವಾಗಿರಬೇಕು, ಅದರಲ್ಲೂ ಮುಖ್ಯವಾಗಿ ಮೀಸಲಾತಿಗೆ ಬದ್ಧವಾಗಿರಬೇಕು’ ಎಂಬುದು ಪ್ರಧಾನಿಯವರ ದೃಢವಾದ ನಂಬಿಕೆ ಎಂದು ಹೇಳಿದರು.

ಮೈತ್ರಿಕೂಟದ ಪಕ್ಷಗಳ ಆಕ್ಷೇಪದ ಕಾರಣದಿಂದಾಗಿ ಮುಂದಕ್ಕೆ ಸಾಗದೆ ಉಳಿದ ಇನ್ನೊಂದು ಕ್ರಮವೆಂದರೆ, ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದ್ದು. ಕೇಂದ್ರ ಹಾಗೂ ರಾಜ್ಯ ವಕ್ಫ್ ಮಂಡಳಿಗಳ ಸ್ವರೂಪವನ್ನು ಇನ್ನಷ್ಟು ವಿಸ್ತೃತಗೊಳಿಸುವ ಉದ್ದೇಶವು ಈ ಮಸೂದೆಗೆ ಇದೆ. ಮಂಡಳಿಗಳಲ್ಲಿ ಮಹಿಳೆಯರಿಗೆ, ಬೊಹ್ರಾ, ಆಘಾಖಾನಿ ಸಮುದಾಯದವರಿಗೆ ಮತ್ತು ಮುಸ್ಲಿಮರಲ್ಲಿನ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ಉದ್ದೇಶವು ಈ ಮಸೂದೆಗೆ ಇದೆ. ಮೈತ್ರಿಕೂಟದ ಸದಸ್ಯ ಪಕ್ಷಗಳು ಇಡೀ ಮಸೂದೆಗೆ ವಿರೋಧ ವ್ಯಕ್ತಪಡಿಸಿಲ್ಲವಾದರೂ, ಮಸೂದೆಯನ್ನು ಸಂಸತ್ತಿನ ಜಂಟಿ ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕು ಎಂದು ಅವು ಆಗ್ರಹಿಸಿದ್ದವು. ಟಿಡಿಪಿ, ಜನಸೇನಾ ಪಕ್ಷ ಮತ್ತು ಲೋಕ ಜನಶಕ್ತಿ ಪಕ್ಷ ಈ ಮಸೂದೆ ಬಗ್ಗೆ ವಿಸ್ತೃತ ಚರ್ಚೆ ಬೇಕು ಎಂದವು. ಕಾಂಗ್ರೆಸ್ ಹಾಗೂ ಇತರ ಕೆಲವು ಪಕ್ಷಗಳು ಕೂಡ ಮಸೂದೆಯನ್ನು ವಿರೋಧಿಸಿದವು. ಈ ಆಗ್ರಹಕ್ಕೆ ಮಣಿದ ಕೇಂದ್ರ ಸರ್ಕಾರವು ಮಸೂದೆಯ ಪರಿಶೀಲನೆಗೆ ಸಂಸತ್ತಿನ ಜಂಟಿ ಸದನ ಸಮಿತಿಯನ್ನು (ಜೆಪಿಸಿ) ರಚಿಸಿತು.

ಆದರೆ ಪ್ರಧಾನಿ ಮೋದಿ ಅವರು ಸಂಸತ್ತಿನಲ್ಲಿ ಹೆಚ್ಚಿನ ಬಲ ಹೊಂದಿದ್ದ ಸಂದರ್ಭದಲ್ಲಿಯೂ ವಿರೋಧ ಪಕ್ಷಗಳ ಆಗ್ರಹಕ್ಕೆ ಮಣಿದಿದ್ದ ಸಂದರ್ಭಗಳು ಇವೆ ಎಂಬುದನ್ನು ಮರೆಯುವಂತಿಲ್ಲ. ಜನರು ಬಹಳ ದೀರ್ಘ ಅವಧಿಗೆ ಎಲ್ಲವನ್ನೂ ನೆನಪಿಟ್ಟುಕೊಳ್ಳುವುದಿಲ್ಲ. ಹೀಗಿದ್ದರೂ, ಹಿಂದೆ ಸಂಖ್ಯಾಬಲ ಹೊಂದಿದ್ದಾಗಲೂ ಮೋದಿ ಅವರು ವಿರೋಧ ಪಕ್ಷಗಳ ದನಿಗೆ ಓಗೊಟ್ಟಿದ್ದ ನಿದರ್ಶನಗಳನ್ನು ಉಲ್ಲೇಖಿಸುವುದು ಮೈತ್ರಿಕೂಟ ಸರ್ಕಾರದ ಈ ಅವಧಿಯಲ್ಲಿ ಉಪಯುಕ್ತವಾಗುತ್ತದೆ. ಮೋದಿ ಅವರು ಬಹಳ ಮುತುವರ್ಜಿಯಿಂದ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆದಿದ್ದರು. 2020ರಲ್ಲಿ ಸಂಸತ್ತು ಈ ಮೂರು ಕಾಯ್ದೆಗಳಿಗೆ ಸಂಬಂಧಿಸಿದ ಮಸೂದೆಗಳಿಗೆ ಅಂಗೀಕಾರ ನೀಡಿತ್ತು. ಇದಾದ ನಂತರ ರೈತ ಸಂಘಟನೆಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ಕಾಯ್ದೆಗೆ ತಡೆಯಾಜ್ಞೆ ತಂದವು. ನಂತರ, ದೆಹಲಿಯ ಗಡಿಯಲ್ಲಿ ನಡೆದ ದೀರ್ಘ ಅವಧಿಯ ಪ್ರತಿಭಟನೆ ಹಾಗೂ ಅದರ ಜೊತೆಯಲ್ಲೇ ಉಂಟಾದ ಹಿಂಸಾಚಾರವು ಈ ಮೂರು ಕಾಯ್ದೆಗಳನ್ನು ಸರ್ಕಾರವು 2021ರ ನವೆಂಬರ್‌ನಲ್ಲಿ ಹಿಂಪಡೆಯುವಂತೆ ಮಾಡಿದವು. ಆ ಸಂದರ್ಭದಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವು ಲೋಕಸಭೆಯಲ್ಲಿ 350ಕ್ಕೂ ಹೆಚ್ಚು ಸದಸ್ಯರ ಬೆಂಬಲ ಹೊಂದಿತ್ತು.



ದತ್ತಾಂಶ ಸುರಕ್ಷತೆ ಮಸೂದೆಯ ವಿಚಾರವಾಗಿ ಕೇಂದ್ರವು 2022ರ ಆಗಸ್ಟ್‌ನಲ್ಲಿ ಹಿಂದಡಿ ಇರಿಸುವ ನಿರ್ಧಾರ ಮಾಡಿತು. ಸಂಸತ್ತಿನ ಸಮಿತಿಯೊಂದು ಈ ಮಸೂದೆಯಲ್ಲಿ ಭಾರಿ ಸಂಖ್ಯೆಯಲ್ಲಿ ತಿದ್ದುಪಡಿಗಳು ಆಗಬೇಕಿವೆ ಎಂದು ಶಿಫಾರಸು ಮಾಡಿದ ನಂತರ, ಕೇಂದ್ರವು ಈ ತೀರ್ಮಾನಕ್ಕೆ ಬಂದಿತ್ತು. ಅದನ್ನು ಪರಿಶೀಲಿಸಿದ ನಂತರ ಕೇಂದ್ರವು ಪರಿಷ್ಕೃತ ಮಸೂದೆಯನ್ನು ಮಾರನೆಯ ವರ್ಷ ಸಂಸತ್ತಿನಲ್ಲಿ ಮಂಡಿಸಿತು. ವಿರೋಧ ಪಕ್ಷಗಳ ಕಡೆಯಿಂದ ಸಂಸತ್ತಿನಲ್ಲಿ ವಿರೋಧ ವ್ಯಕ್ತವಾದ ಕಾರಣಕ್ಕೆ, ಭೂಸ್ವಾಧೀನಕ್ಕೆ ಸಂಬಂಧಿಸಿದ ಮಸೂದೆಯೊಂದನ್ನು ಹಿಂದಕ್ಕೆ ಪಡೆಯಲು ಕೂಡ ಕೇಂದ್ರ ಸರ್ಕಾರ ನಿರ್ಧರಿಸಿದ ನಿದರ್ಶನ ಇದೆ.

ಸರ್ಕಾರದ ಉಳಿವಿಗಾಗಿ ಬೇರೆ ಪಕ್ಷಗಳ ಬೆಂಬಲ ಅಗತ್ಯವಿರುವಾಗ, ಸರ್ಕಾರದ ನೇತೃತ್ವ ವಹಿಸಿರುವವರು ಸಮಾಲೋಚನೆಗಳ ಮೂಲಕ ಕೆಲಸ ಮಾಡುವುದನ್ನು ಕಲಿಯುತ್ತಾರೆ; ಹಾಗೆಯೇ ಮೈತ್ರಿಕೂಟದ ಧರ್ಮ ಏನೆಂಬುದನ್ನು ಅರ್ಥ ಮಾಡಿಕೊಳ್ಳುತ್ತಾರೆ. 1999ರಿಂದ 2004ರವರೆಗೆ ಹಲವು ಪಕ್ಷಗಳ ಮೈತ್ರಿಕೂಟವನ್ನು ಯಶಸ್ವಿಯಾಗಿ ಮುನ್ನಡೆಸಿದ ಸಂದರ್ಭದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಮಾಡಿದ್ದು ಇದನ್ನೇ.

ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆ ಆದ ಮೊದಲ ಮೂರು ತಿಂಗಳಲ್ಲಿ ಮೋದಿ ಅವರ ಪ್ರತಿಕ್ರಿಯೆಗಳು, ಈ ವಿಚಾರವಾಗಿ ಅವರಿಗೆ ಅರಿವಿದೆ ಎಂಬುದನ್ನು, ಅವುಗಳನ್ನು ಬಹಳ ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿದೆ ಎಂಬುದನ್ನು ತೋರಿಸುತ್ತಿರುವಂತಿವೆ. ಹಾಗೆಯೇ, ಈ ಹಿಂದೆಯೇ ಉಲ್ಲೇಖಿಸಿರುವಂತೆ, ಮೋದಿ ಅವರು ಸಂಖ್ಯಾಬಲ ಹೊಂದಿದ್ದ ಸಂದರ್ಭದಲ್ಲಿಯೂ ಈ ಬಗೆಯ ಕೆಲಸಗಳನ್ನು ಮಾಡಿದ್ದಾರೆ.

ಮೋದಿ ಅವರು ತಮ್ಮ ನೌಕೆಯ ಹಾಯಿಯನ್ನು ಮೈತ್ರಿಕೂಟದ ಗಾಳಿಗೆ ಅನುಗುಣವಾಗಿ ಹೊಂದಿಸಿಕೊಳ್ಳುತ್ತಿರುವುದು ಸ್ಪಷ್ಟ. ಮೋದಿ ಅವರ ವಿರೋಧಿಗಳು, ಮೋದಿ ನೇತೃತ್ವದ ಸರ್ಕಾರವು ಈಚಿನ ವಾರಗಳಲ್ಲಿ ಕೆಲವು ವಿಚಾರಗಳಲ್ಲಿ ಹಿಂದಡಿ ಇರಿಸಿರುವುದರ ಬಗ್ಗೆ ಹಿಗ್ಗಿನಿಂದ ಮಾತನಾಡುತ್ತಿದ್ದಾರೆ. ಆದರೆ, ನಿಸರ್ಗವು ನಮಗೆಲ್ಲರಿಗೂ ಹೇಳಿಕೊಡುವ ಪಾಠವೊಂದನ್ನು ಅವರೆಲ್ಲ ಮರೆಯುತ್ತಿರುವಂತೆ ಕಾಣುತ್ತಿದೆ. ಬಿರುಸಾದ ಗಾಳಿಗೆ ಬಾಗುವ ಮರಗಳು ಮಾತ್ರ ಉಳಿದುಕೊಳ್ಳುತ್ತವೆ. ಮಾರುತಗಳಿಗೆ ಹೊಂದಿಕೊಳ್ಳಲು ಆಗದವು, ತೀರಾ ದೃಢವಾಗಿ ನಿಲ್ಲಲು ಯತ್ನಿಸುವವು ಬುಡಮೇಲಾಗುತ್ತವೆ. ಹೀಗಾಗಿ, ಮುಂಬರುವ ದಿನಗಳಲ್ಲಿ ಮೋದಿ ನೇತೃತ್ವದ ಸರ್ಕಾರದ ಉಳಿವಿನ ವಿಚಾರದಲ್ಲಿ ಹೊಂದಾಣಿಕೆಯು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಚುರುಮುರಿ



ಅಮಿಕ್ರಾನ್ ವೈರಸ್!

• ತುರುವೇಕೆರೆ ಪ್ರಸಾದ್

‘**ಲೇಯ್**, ಮತ್ತೆ ಕೊರೊನಾ ಭೂತ ಹೆಗಲೇರ್ಕಂಡಿದೆ ಕಣ್ರಲಾ?’ ಎಂದ ಗುದ್ಲಿಂಗ ಹರಟೆಕಟ್ಟೇಲಿ!

‘ಅಯ್ಯೋ ಹೌದಾ? ಇದ್ಯಾವ ತಳೀನಾ? ಆಲ್ಫಾ, ಬೀಟಾ, ಡೆಲ್ಟಾ, ಒಮಿಕ್ರಾನ್ ಎಲ್ಲಾ ಬಂದು ಪ್ರಾಣ ಹಿಂಡಿ ಹೋದ್ವಲ್ಲೋ’ ಕೇಳಿದ ಮಾಲಿಂಗ.

‘ಇದು ಅಮಿಕ್ರಾನ್ ಅಂತ. ಪ್ಯೂರ್ ದೇಶೀ ತಳಿ, ಅದೂ ನಮ್ದೇ ಕರುನಾಡ ಕೂಸು ಕಣ್ಲಾ’.

‘ಅಮಿಕ್ರಾನ್ ಅಂತನಾ? ಎಲ್ಲೂ ಕೇಳ್ದಂಗಾಗಿಲ್ವಲ್ಲ. ಯಾಕೋ ಹೆದ್ರಿಕೆ ಆಗ್ತಿದೆ. ಏನು ಇದ್ರ ಲಕ್ಷಣಗಳು?’ ಕೇಳಿದ ಕಲ್ಲೇಶಿ.

‘ಇದು ಕರಪ್ಷನ್ ಕಮಿಷನ್ ವೈರಸ್ ಅಂತ. ಏಕಾಏಕಿ ಅಮರ್ಕಳ್ಳೋದ್ರಿಂದ ಅಮಿಕ್ರಾನ್ ಅಂತಾರೆ. ಇದು ಬರುತ್ತೆ ಅಂತ ಗೊತ್ತಾದ ತಕ್ಷಣ ಎದೆ ಢವಢವ ಹೊಡ್ಕಳೋಕೆ ಶುರುವಾಗೋದು, ಕೈ ಕಾಲು ನಡುಗೋದು, ಬೆವರೋದು, ಕೋವಿಡ್‌ನಲ್ಲಿ ಸತ್ತೋರು ಕಣ್ಮುಂದೆ ಬಂದಂಗಾಗಿ, ಅವರ ಶಾಪ ಬಿಡ್ತಿಲ್ಲ ಅಂತ ಬಡಬಡಿಸೋದು ಎಲ್ಲಾ ಇರುತ್ತಂತೆ’.

‘ಸರ್ಕಾರ ಏನೂ ಕ್ರಮ ತಕಂಡಿಲ್ವಾ?’

‘ಸರ್ಕಾರ ಕ್ರಮ ತಕತೀವಿ ಅಂತ ಬಾಂಬ್ ಹಾಕಿರೋದಕ್ಕೇ ಈ ಅಮಿಕ್ರಾನ್ ಈಚೆ ಬಂದು ಕಮಲದೋರನ್ನ ಅಮರ್ಕಂಡಿರೋದು’.

‘ನೀನು ಏನು ಯೋಳ್ತಿದೀಯ ಅಂತ ಅರ್ಥ ಆಗ್ತಿಲ್ಲ’ ಕಣ್ ಕಣ್ ಬಿಟ್ಟ ಭದ್ರ.

‘ಅದೇ ಕಣ್ಲಾ, ಕಮಲದೋರು ಕೈ ಮೇಲೆ ಮುಡಾ ಹಗರಣ ಮಡಿಕ್ಕಂಡು ಮುಗಿಬಿದ್ದವ್ರೆ. ಕೈನೋರು ಸಮಾಧಿ ಮಾಡಿದ್ದ ಕೊರೊನಾ ವೈರಸ್‌ನ ಬುಸ್ ಅಂತ ಈಚೆ ಬಿಟ್ಟವ್ರೆ’.

‘ಓಹೋ ನೀನು ಮೈಕಲ್ ಕುನ್ಹಾ ಸಾಹೇಬ್ರ ವರದಿ ಬಗ್ಗೆನಾ ಯೋಳ್ತಿರೋದು?’

‘ಹೂ ಮತ್ತೆ, ಅದನ್ನ ಕೇಳೇ ಕಮಲದ ಕೆಲ ನಾಯಕರು ಮೈ ಕೈ ಎಲ್ಲಾ ಗುನ್ನ ಅಕ್ದಂಗೆ ಮುಲುಕಾಡ್ತಾವ್ರಂತೆ’.

‘ಇದಕ್ಕೆ ಏನೂ ಸ್ಯಾನಿಟೈಸರ್, ಔಷ್ಧಿ ಇಲ್ವಾ?’

‘ಭ್ರಷ್ಟಾಚಾರದ ವೈರಸ್ ಯಾವ ಸ್ಯಾನಿಟೈಸರ್ ಹಾಕಿ ತೊಳುದ್ರೂ ಹೋಗಲ್ಲ. ಕಮಲ್ದೋರು ಕೈ ಹಗರಣಗಳ ಟೀಸರ್ ಬಿಡೋದು ಬಿಟ್ಟು ‘ಥಾವರೆ ಚಂದ’ ಅಂತ ರಾಜಭವನದಲ್ಲಿ ಕ್ವಾರಂಟೈನ್ ಆಗೋದಷ್ಟೇ ಬಾಕಿ’ ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

ಭಾಷಾಂತರ: ಗುಣಮಟ್ಟ ಸುಧಾರಿಸಲಿ

ತಪ್ಪಿಲ್ಲದ ಹಾಗೆ ಮತ್ತು ಸರಾಗವಾಗಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ಭಾಷಾಂತರ ಕಾರ್ಯ ನಡೆಯದೇ ಹೋದಲ್ಲಿ ಎಡವಟ್ಟು ಕಟ್ಟಿಟ್ಟಬುತ್ತಿ

• ಎಚ್.ಕೆ.ಶರತ್

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಇತ್ತೀಚೆಗೆ ನಡೆದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಬಹಳಷ್ಟು ಚರ್ಚೆಗೆ ಗ್ರಾಸವಾಯಿತು. ಕನ್ನಡದಲ್ಲಿದ್ದ ಪ್ರಶ್ನೆಗಳಲ್ಲಿ ಗಮನಾರ್ಹ ಪ್ರಮಾಣದ ತಪ್ಪುಗಳು ಇರುವುದು ಖಾತರಿಯಾದ ನಂತರ, ಇದೀಗ ಮರುಪರೀಕ್ಷೆಗೆ ಸಿದ್ಧತೆ ನಡೆಸಲಾಗುತ್ತಿದೆ. ಇಡೀ ಪ್ರಕರಣ ಅನುವಾದದ ಗುಣಮಟ್ಟದ ಕುರಿತು ಚರ್ಚೆ ಏರ್ಪಡಲು ಕಾರಣವಾಯಿತು. ತಪ್ಪಿಲ್ಲದ ಹಾಗೆ ಮತ್ತು ಸರಾಗವಾಗಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ಭಾಷಾಂತರ ಕಾರ್ಯ ನಡೆಯದೇ ಹೋದಲ್ಲಿ ಆಗಬಹುದಾದ ಅಪಸವ್ಯಗಳಿಗೆ ಈ ಪ್ರಕರಣ ಕನ್ನಡಿ ಹಿಡಿದಿದೆ.

ಕಿರುತೆರೆ, ಸಿನಿಮಾ, ಜಾಹೀರಾತು, ಸಾಹಿತ್ಯ, ಶಿಕ್ಷಣ ಒಳಗೊಂಡಂತೆ ನಾನಾ ಕ್ಷೇತ್ರಗಳಲ್ಲಿ ಭಾಷಾಂತರ ಕಾರ್ಯ ಬಹಳಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ನೇರವಾಗಿ ಕನ್ನಡದಲ್ಲಿಯೇ ರಚಿಸಿದ ಪಠ್ಯ ಮತ್ತು ಮಾಹಿತಿ ಕೂಡ ಸುಲಭವಾಗಿ ಗ್ರಹಿಸಲು ಸಾಧ್ಯವಾಗದ ರೀತಿಯಲ್ಲಿ ಇರುವುದನ್ನು ಹಲವೆಡೆ ಗಮನಿಸಬಹುದು. ಸರ್ಕಾರಿ ದಾಖಲೆಗಳಲ್ಲಿ, ಬಳಕೆದಾರರು ತುಂಬಬೇಕಿರುವ ಅರ್ಜಿ ನಮೂನೆಗಳಲ್ಲಿ, ಉತ್ಪನ್ನಗಳ ಬಳಕೆಗೆ ಸಂಬಂಧಿಸಿದ ಸೂಚನೆಗಳಲ್ಲಿ ಬಳಸುವ ಕನ್ನಡವನ್ನು ಅರ್ಥೈಸಿಕೊಳ್ಳಲು ಕೂಡ ಜನಸಾಮಾನ್ಯರು ತಿಣುಕಾಡಬೇಕಾದ ಪರಿಸ್ಥಿತಿ ಇದೆ.

ಪರೀಕ್ಷೆಯ ಎಡವಟ್ಟಿನ ಪ್ರಕರಣ ಕನ್ನಡದಲ್ಲಿ ನಡೆಯುತ್ತಿರುವ ಭಾಷಾಂತರ ಪ್ರಕ್ರಿಯೆಯ ಗುಣಮಟ್ಟ ಸುಧಾರಿಸುವ ಅಗತ್ಯದತ್ತಲೂ ಬೆಟ್ಟು ಮಾಡಿದೆ. ಗೂಗಲ್ ಟ್ರಾನ್ಸ್‌ಲೇಟರ್ ಸೇರಿದಂತೆ ತಂತ್ರಾಂಶಗಳನ್ನು ಬಳಸಿ ಭಾಷಾಂತರ ಮಾಡುವ ಕೆಲಸ ಅಗಾಧ ಪ್ರಮಾಣದಲ್ಲಿ ನಡೆಯುತ್ತಿದೆ. ಸದ್ಯದ ಮಟ್ಟಿಗೆ ಕನ್ನಡದಲ್ಲಿ ಯಾಂತ್ರಿಕ ಭಾಷಾಂತರದ (ಮಷೀನ್ ಟ್ರಾನ್ಸ್‌ಲೇಷನ್) ಗುಣಮಟ್ಟ ಕಳಪೆಯಾಗಿರುವುದರಿಂದ ಅದನ್ನು ಬಳಸಿ ಮಾಡುವ ಅನುವಾದದಲ್ಲಿ ಬಹಳಷ್ಟು ಎಡವಟ್ಟುಗಳು ಸಂಭವಿಸುತ್ತಿವೆ. ನುರಿತ ಅನುವಾದಕರಿಂದ ಭಾಷಾಂತರ ಮಾಡಿಸಿದರೆ ಮಾತ್ರ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯ ಎನ್ನುವ ಪರಿಸ್ಥಿತಿ ಇದೆ.

ಅಂತರ್ಜಾಲದ ಮೇಲೆ ಹೆಚ್ಚು ಅವಲಂಬಿತರಾಗಿರುವ ಪ್ರಸ್ತುತ ಕಾಲಘಟ್ಟದಲ್ಲಿ, ಕನ್ನಡದ ಬಳಕೆಯನ್ನು ವಿಸ್ತರಿಸುವಲ್ಲಿ ಯಾಂತ್ರಿಕ ಭಾಷಾಂತರ ಮಹತ್ವದ ಪಾತ್ರ ನಿರ್ವಹಿಸಲಿದೆ. ವಿವಿಧ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ ಮತ್ತು ಬೆಳವಣಿಗೆ ಹೆಚ್ಚಿಸುವ ದಿಸೆಯಲ್ಲಿ ಯಾಂತ್ರಿಕ ಭಾಷಾಂತರ ನಿರ್ವಹಿಸಬಹುದಾದ ಗಮನಾರ್ಹ ಪಾತ್ರದತ್ತಲೂ ನಮ್ಮ ಚಿತ್ತ ಹರಿಯಬೇಕಿದೆ.

ಯಾವುದಾದರೂ ಪಠ್ಯ ಅಥವಾ ಮಾಹಿತಿಯನ್ನು ವಿವಿಧ ಭಾಷೆಗಳಿಗೆ ಅನುವಾದಿಸುವ ಅಗತ್ಯ ಎದುರಾದಾಗ, ಮೊದಲಿಗೆ ಯಾಂತ್ರಿಕ ಭಾಷಾಂತರದ ಮೊರೆ ಹೋಗಿ ಆನಂತರ ಅನುವಾದದ ಗುಣಮಟ್ಟ ಪರಿಶೀಲಿಸಿ, ಅಗತ್ಯ ತಿದ್ದುಪಡಿ ಮಾಡಲು ಅನುವಾದಕರ ನೆರವು ಪಡೆಯುವ ಪರಿಪಾಟ ಸದ್ಯ ಹೆಚ್ಚು ಚಾಲ್ತಿಯಲ್ಲಿದೆ. ಒಕ್ಕೂಟ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಅನುದಾನ ಪಡೆದು ದೇಶದ ಪ್ರತಿಷ್ಠಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳಾದ ಐಐಟಿಗಳು ಮತ್ತು ಐಐಎಸ್‌ಸಿ 2003ರಿಂದ ಎನ್‌ಪಿಟಿಇಎಲ್ (ತಂತ್ರಜ್ಞಾನ ಆಧಾರಿತ ಕಲಿಕೆಯ ರಾಷ್ಟ್ರೀಯ ಕಾರ್ಯಕ್ರಮ) ಅಡಿ ಆನ್‌ಲೈನ್ ಕೋರ್ಸ್‌ಗಳನ್ನು ನಡೆಸುತ್ತಾ ಬಂದಿವೆ. ಸದ್ಯ ಎನ್‌ಪಿಟಿಇಎಲ್ ಪ್ರತಿ ಸೆಮಿಸ್ಟರ್‌ನಲ್ಲೂ 22 ವಿಭಾಗಗಳಲ್ಲಿ 600ಕ್ಕೂ ಹೆಚ್ಚು ಕೋರ್ಸ್‌ಗಳನ್ನು ಆಸಕ್ತ ಕಲಿಕಾರ್ಥಿಗಳಿಗೆ ಲಭ್ಯವಿರಿಸುತ್ತಿದೆ. ಇದುವರೆಗೂ ಬಹುತೇಕ ಇಂಗ್ಲಿಷ್ ಭಾಷೆಯಲ್ಲಷ್ಟೇ ಲಭ್ಯವಿದ್ದ ಕಲಿಕಾ ಸಂಪನ್ಮೂಲಗಳನ್ನು ಕನ್ನಡ, ತಮಿಳು, ತೆಲುಗು, ಮಲಯಾಳಂ, ಮರಾಠಿ ಒಳಗೊಂಡಂತೆ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಭಾರತೀಯ ತಂತ್ರಜ್ಞಾನ ಸಂಸ್ಥೆ- ಮದ್ರಾಸ್ (ಐಐಟಿ-ಮದ್ರಾಸ್) ಮೇಲುಸ್ತುವಾರಿಯಲ್ಲಿ ನಡೆಯುತ್ತಿರುವ ಭಾಷಾಂತರ ಪ್ರಕ್ರಿಯೆಯಲ್ಲಿ ಕೂಡ ಯಾಂತ್ರಿಕ ಭಾಷಾಂತರಕ್ಕೆ ಒತ್ತು ನೀಡಲಾಗಿದೆ. ಈ ಯೋಜನೆಯ ಸಾಕಾರಕ್ಕಾಗಿ ಅಭಿವೃದ್ಧಿಪಡಿಸಿರುವ ‘ಟ್ರಾನ್ಸ್‌ಲಿಂಗ್ವ’ ಮತ್ತು ‘ಚಿತ್ರಲೇಖ’ ಎಂಬ ಎರಡು ತಂತ್ರಾಂಶಗಳಲ್ಲಿ ಮೊದಲಿಗೆ ಯಾಂತ್ರಿಕ ಭಾಷಾಂತರದ ಮೂಲಕ ಪ್ರಾದೇಶಿಕ ಭಾಷೆಗಳಿಗೆ ಪಠ್ಯವನ್ನು ಅನುವಾದಿಸಲಾಗುತ್ತಿದೆ. ಆನಂತರ ಅನುವಾದ ಸಮರ್ಪಕವಾಗಿದೆಯೇ ಎಂಬುದನ್ನು ಪರಿಶೀಲಿಸಿ, ಸೂಕ್ತ ತಿದ್ದುಪಡಿ ಮಾಡಲು ಮಾತ್ರ ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆ ಎರಡೂ ತಿಳಿದಿರುವ ವಿಷಯ ತಜ್ಞರ ಮೊರೆ ಹೋಗಲಾಗುತ್ತಿದೆ. ಈ ಯೋಜನೆಯ ಭಾಗವಾಗಿರುವವರ ಪೈಕಿ ಬಹುತೇಕ ಮಂದಿ ನುರಿತ ಅನುವಾದಕರಲ್ಲ. ಇಂಗ್ಲಿಷ್ ಮತ್ತು ನಿರ್ದಿಷ್ಟ ಪ್ರಾದೇಶಿಕ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬಲ್ಲವರಷ್ಟೇ.



ಯಾಂತ್ರಿಕ ಭಾಷಾಂತರದ ಗುಣಮಟ್ಟ ಸುಧಾರಣೆಯಾದರೆ, ಇಂತಹ ಯೋಜನೆಗಳ ಮೂಲಕ ನಡೆಯುವ ಅನುವಾದದ ಗುಣಮಟ್ಟದಲ್ಲೂ ಗಮನಾರ್ಹ ಸುಧಾರಣೆಯಾಗಲಿದೆ. ವಿವಿಧ ಭಾಷೆಗಳಲ್ಲಿ ಸೇವೆ ಒದಗಿಸಲು ಕೂಡ ಕೃತಕ ಬುದ್ಧಿಮತ್ತೆಯನ್ನು ಗಣನೀಯವಾಗಿ ಬಳಸಲಾಗುತ್ತಿದೆ. ಹೀಗಾಗಿ, ಯಾಂತ್ರಿಕ ಭಾಷಾಂತರದ ಗುಣಮಟ್ಟ ಸುಧಾರಣೆಗೆ ಇರುವ ಸವಾಲುಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಲು ಕೈಗೊಳ್ಳಬೇಕಿರುವ ಕ್ರಮಗಳತ್ತ ಸರ್ಕಾರ ಹಾಗೂ ಕನ್ನಡಪರ ಕೆಲಸಗಳಲ್ಲಿ ತೊಡಗಿಕೊಂಡಿರುವ ತಂತ್ರಜ್ಞರು ಒಟ್ಟಾಗಿ ಕೆಲಸ ಮಾಡಬೇಕಿದೆ.

ಕನ್ನಡ ಮತ್ತು ಕನ್ನಡಿಗರ ಹಿತ ಕಾಯುವ ಸಲುವಾಗಿ ಅಸ್ತಿತ್ವದಲ್ಲಿರುವ ಸಂಸ್ಥೆಗಳು ಕೂಡ ಈ ದಿಸೆಯಲ್ಲಿ ಗಮನಹರಿಸಬೇಕಿದೆ.

ವಾಚಕರ ವಾಣಿ

ಮಕ್ಕಳ ಸಾಹಿತ್ಯ ಕೃತಿ ಖರೀದಿಸಲಿ

ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ‘ಮಕ್ಕಳಸ್ನೇಹಿ ಗ್ರಂಥಾಲಯ’ವನ್ನು ಸ್ಥಾಪಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ರಾಜ್ಯದ ಅನೇಕ ಪ್ರಕಾಶಕರು ಅತ್ಯುತ್ತಮ ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಇಂಥ ಪುಸ್ತಕಗಳನ್ನು ಆಯ್ಕೆ ಮಾಡಿ ಖರೀದಿಸಬೇಕು. ಅದಕ್ಕಾಗಿ ಪುಸ್ತಕ ಆಯ್ಕೆ ಸಮಿತಿಯನ್ನು ರಚಿಸಬೇಕು. ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಮಾತ್ರ ಖರೀದಿಸಬೇಕು. ಇದರಿಂದ ಮಕ್ಕಳಿಗೆ ಉತ್ತಮ ಕೃತಿಗಳನ್ನು ಕೊಟ್ಟಂತೆ ಆಗುತ್ತದೆ, ಪ್ರಕಾಶಕರಿಗೂ ಪ್ರೋತ್ಸಾಹ ದೊರೆಯುತ್ತದೆ. ಶಿಕ್ಷಣ ಇಲಾಖೆ ಇತ್ತ ಗಮನಹರಿಸಲಿ.

ಎಸ್.ಚನ್ನಪ್ಪ, ಮೈಸೂರು

ಹೋಮ್‌ವರ್ಕ್‌ಗೆ ಮೊಬೈಲ್ ಫೋನ್ ಬಳಕೆ ಸಲ್ಲದು

ಶಿಕ್ಷಕರು ಮಕ್ಕಳಿಗೆ ಹೋಮ್‌ವರ್ಕ್ ಕೊಡುವುದರಿಂದ, ಶಾಲೆಯಲ್ಲಿ ಕೇಳಿದ ಪಾಠವನ್ನು ಅವರು ಮತ್ತೊಮ್ಮೆ ಮನನ ಮಾಡಿಕೊಳ್ಳಲು ನೆರವಾಗುತ್ತದೆ. ಆದರೆ ಮಕ್ಕಳು ಹೋಮ್‌ವರ್ಕ್‌ನ ಪ್ರಶ್ನೆಗಳಿಗೆ ಪುಸ್ತಕದಲ್ಲಿ ಉತ್ತರವನ್ನು ಹುಡುಕದೆ ನೇರವಾಗಿ ಮೊಬೈಲ್ ಫೋನ್ ಮೂಲಕ ಉತ್ತರವನ್ನು ಹುಡುಕುತ್ತಾರೆ. ಅಲ್ಲಿ ಅವರಿಗೆ ಶ್ರಮವಿಲ್ಲದೆ ಬೇಗನೆ ಸಿದ್ಧ ಉತ್ತರಗಳು ಸಿಕ್ಕಿಬಿಡುತ್ತವೆ! ಹೀಗಾದರೆ ಅವರು ಯಾವ ರೀತಿ ಹೋಮ್‌ವರ್ಕ್ ಮಾಡಿದಂತೆ ಆಗುತ್ತದೆ? ಹಿಂದೆ ನಾವೆಲ್ಲ ಪುಸ್ತಕದಲ್ಲಿನ ಪಾಠವನ್ನು ಎರಡು– ಮೂರು ಬಾರಿ ಓದಿ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುತ್ತಿದ್ದೆವು. ಅಲ್ಲಿಗೆ ಶಿಕ್ಷಕರ ಶ್ರಮದ ಜೊತೆಗೆ ವಿದ್ಯಾರ್ಥಿಗಳ ಶ್ರಮವೂ ಸೇರಿ ಉತ್ತಮ ಕಲಿಕೆ ಸಾಧ್ಯವಾಗುತ್ತಿತ್ತು. ಆದರೆ ಈಗಿನ ಮೊಬೈಲ್ ಯುಗದಲ್ಲಿ ಹೋಮ್‌ವರ್ಕ್ ಎನ್ನುವುದು ನೆಪಮಾತ್ರಕ್ಕೆ ಮಾಡುವ ಒಂದು ಕಾರ್ಯವಾಗಿದೆ.

ಮನೆಯಲ್ಲಿ ಪಾಲಕರು ಮಕ್ಕಳಿಗೆ ಹೋಮ್‌ವರ್ಕ್ ಮಾಡಲು ಮೊಬೈಲ್ ಫೋನ್ ನೀಡಬಾರದು. ಮಕ್ಕಳ ಜೊತೆ ಕುಳಿತು ಅವರ ಪ್ರಶ್ನೆಗಳಿಗೆ ಹೇಗೆ ಪಾಠದಲ್ಲಿ ಉತ್ತರವನ್ನು ಹುಡುಕಬೇಕು ಎಂಬುದನ್ನು ತಿಳಿಸಿಕೊಡಬೇಕು. ಆಗ ಮಕ್ಕಳಿಗೆ ಮೊಬೈಲ್ ಮೇಲಿನ ಆಕರ್ಷಣೆ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾದೀತೇನೊ. ಆದರೆ ಸಮಯದ ಅಭಾವದ ನೆಪ ಒಡ್ಡಿಯೋ ಯಾವುದೋ ಕೆಲಸದ ನೆಪವನ್ನೋ ಹೇಳಿ ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಅವರನ್ನು ತಾವೇ ಹಾಳು ಮಾಡುತ್ತಿರುವ ಪೋಷಕರು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಈ ಬಗ್ಗೆ ಶಿಕ್ಷಕರು ಕೂಡ ಮಕ್ಕಳಿಗೆ ತಿಳಿ ಹೇಳಬೇಕು. ಹೋಮ್‌ವರ್ಕ್‌ಗೆ ಮೊಬೈಲ್ ಫೋನ್ ಬಳಕೆಯ ಗೀಳಿನಿಂದ ಮಕ್ಕಳನ್ನು ಹೊರ ತರಬೇಕು.

ರಾಜು ಬಿ. ಲಕ್ಕಂಪುರ, ಜಗಳೂರು

ಕೋಣೆ ಮಕ್ಕಳು ಕೊಳೆತೊ...

ವಿದ್ಯಾರ್ಥಿಗಳ ಆತ್ಮಹತ್ಯೆ ಬಗೆಗಿನ ಸಂಪಾದಕೀಯ (ಪ್ರ.ವಾ., ಸೆ. 7) ತುಂಬಾ ಸಕಾಲಿಕವಾಗಿತ್ತು ಹಾಗೂ ಮೌಲಿಕವಾಗಿತ್ತು. ವಿದ್ಯಾರ್ಥಿಗಳು ಸಣ್ಣಪುಟ್ಟ ತೊಂದರೆಗಳಿಗೂ ಆತ್ಮಹತ್ಯೆಯ ಹಾದಿ ಹಿಡಿಯುವುದಕ್ಕೆ ಪೋಷಕರ ಶೈಕ್ಷಣಿಕ ಒತ್ತಡ ಒಂದೆಡೆ ಕಾರಣವಾದರೆ, ಚಿಕ್ಕ ವಯಸ್ಸಿನಿಂದ ಅವರನ್ನು ಬೆಳೆಸುವ ರೀತಿ ಕೂಡ ಒಂದು ಕಾರಣವಾಗಿದೆ. ಹಿಂದೆ ಶಾಲೆಗಳಲ್ಲಿ ಮಕ್ಕಳು ಓದುವುದರ ಜೊತೆಗೆ ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳಲ್ಲೂ ಮುಂದೆ ಇರುತ್ತಿದ್ದರು. ಇದರಿಂದ ಅವರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಿ ಬೆಳೆಯುತ್ತಿದ್ದರು. ಮರ ಹತ್ತುವಾಗ, ಆಟ ಆಡುವಾಗ ಬಿದ್ದು ಎದ್ದು ಸೋಲನ್ನು ಅರಗಿಸಿಕೊಂಡು ಮತ್ತೆ ಗೆಲ್ಲುವ ಮನೋಭಾವ ಅವರಲ್ಲಿ ಅಂತರ್ಗತವಾಗಿಬಿಡುತ್ತಿತ್ತು.

ಅದೇ ರೀತಿ ಮನೆಯಲ್ಲೂ ಮನೆ, ಜಮೀನು ಕೆಲಸಗಳನ್ನು ಅವರ ಶಕ್ತಿಗನುಗುಣವಾಗಿ ಮಾಡಬೇಕಾಗಿತ್ತು. ಪೋಷಕರ ಕಷ್ಟ– ಸುಖಗಳಲ್ಲಿ ಅವರ ಸಹಭಾಗಿತ್ವ ಇರುತ್ತಿತ್ತು. ತಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನೂ ಮಕ್ಕಳು ಚಿಕ್ಕಂದಿನಿಂದ ಅರಗಿಸಿಕೊಂಡೇ ಬೆಳೆಯುತ್ತಿದ್ದರು. ಈಗ ಮಕ್ಕಳನ್ನು ‘ಫಾರಂ ಕೋಳಿ’ಗಳ ಹಾಗೆ ಬೆಳೆಸಲಾಗುತ್ತಿದೆ. ‘ನೂರಕ್ಕೆ ನೂರು ಅಂಕ ಗಳಿಸಿ ಓದಿದರೆ ಮಾತ್ರ ಜೀವನ, ಇಲ್ಲದಿದ್ದರೆ ಜೀವನವೇ ಮುಗಿಯಿತು’ ಎಂಬ ನಕಾರಾತ್ಮಕ ಸಂದೇಶವನ್ನು ಪೋಷಕರು ಹಾಗೂ ಶಿಕ್ಷಕರು ಮಕ್ಕಳ ತಲೆಯಲ್ಲಿ ತುಂಬುತ್ತಾರೆ. ಇದು ಅಸಾಧ್ಯ ಎನಿಸಿದಾಗ, ಅತಿ ಸೂಕ್ಷ್ಮವಾಗಿ ಬೆಳೆದ ಮಕ್ಕಳು ಸೋಲಿನ ಭಯದಿಂದ ಆತ್ಮಹತ್ಯೆಯ ಹಾದಿ ಹಿಡಿಯುತ್ತಾರೆ. ತಾವು ಕಷ್ಟಪಟ್ಟಂತೆ ತಮ್ಮ ಮಕ್ಕಳು ಕಷ್ಟಪಡಬಾರದು ಎಂಬ ಕಾರಣದಿಂದ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಮುಚ್ಚಿಟ್ಟು, ಅವರು ಕೇಳಿದ್ದನ್ನೆಲ್ಲಾ ಸಾಲ ಮಾಡಿಯಾದರೂ ಕೊಡಿಸಿ ಕಷ್ಟಕಾರ್ಪಣ್ಯಗಳ ಪರಿವೆಯೇ ಇಲ್ಲದೆ ಮಕ್ಕಳನ್ನು ಬೆಳೆಸುತ್ತಾರೆ. ಇದು ಕೂಡ ಅವರ ದುರ್ಬಲ ಮನಃಸ್ಥಿತಿಗೆ ಕಾರಣವಾಗುತ್ತದೆ. ‘ಕೋಣೆ ಮಕ್ಕಳು ಕೊಳೆತೊ, ಬೀದಿ ಮಕ್ಕಳು ಬೆಳೆದೊ’ ಎಂಬ ಹಿರಿಯರ ನಾಣ್ಣುಡಿಯನ್ನು ಪೋಷಕರು ನೆನಪಿಡಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ


ಮಕ್ಕಳಿಂದ ಸ್ವಚ್ಛತಾ ಕಾರ್ಯ: ತಾರತಮ್ಯ ಬೇಡ

‘ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ತೊಳೆಸಿದರೆ ತಪ್ಪೇನು?’ ಎಂಬ ಪ್ರಶ್ನೆಗೆ ಎಲ್ಲರೂ ‘ತಪ್ಪು ಮತ್ತು ಅಪರಾಧ’ ಎಂಬ ಉತ್ತರ ನೀಡಿ ಕೈತೊಳೆದುಕೊಂಡಿರುವ ವಿಷಯವನ್ನು ಸಂಸದ ಗೋವಿಂದ ಕಾರಜೋಳ ಅವರು ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಎತ್ತಿರುವುದು ವರದಿಯಾಗಿದೆ (ಪ್ರ.ವಾ., ಸೆ. 6). ಶಾಲೆಗಳಲ್ಲಿ ಸ್ವಚ್ಛತೆಯ ಕೆಲಸಕ್ಕೆ ಮಕ್ಕಳಿಂದ ಕಿಂಚಿತ್ ನೆರವು ಪಡೆದರೆ ಅದು ಅಕ್ಷಮ್ಯ ಅಪರಾಧವೇನೂ ಅಲ್ಲ. ಆದರೆ ಇಂತಹ ವಿಚಾರಗಳಲ್ಲಿ ಜಾತಿ–ಧರ್ಮದಂತಹ ಅಂಶಗಳು ಪರಿಗಣನೆಗೆ ಒಳಗಾಗಬಾರದು. ತಾರತಮ್ಯ ಇರಬಾರದು. ತಾರತಮ್ಯ ನೀತಿಯನ್ನು ಖಂಡಿಸುವುದರ ಭಾಗವಾಗಿ ಮಕ್ಕಳನ್ನು ಶಾಲೆಯ ಸ್ವಚ್ಛತೆಯ ಕೆಲಸಗಳಿಗೆ ಬಳಸಿಕೊಳ್ಳುವುದರ ಬಗ್ಗೆ ಆಕ್ಷೇಪ ವ್ಯಕ್ತವಾಗುತ್ತಿದೆ.

ಖಾಸಗಿ ಶಾಲೆಗಳಲ್ಲಿ ಅಗತ್ಯ ಸ್ವಚ್ಛತಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದರಿಂದ ಅಲ್ಲಿ ಸಮಸ್ಯೆ ಇಲ್ಲ. ಆದರೆ ಸರ್ಕಾರಿ ಶಾಲೆಗಳಿಗೆ ಸರ್ಕಾರವು ಸ್ವಚ್ಛತಾ ಸಿಬ್ಬಂದಿಯನ್ನು ನೇಮಕ ಮಾಡುವುದಿಲ್ಲ. ಆಗ ಶಾಲೆಗಳ ಕೊಠಡಿಗಳನ್ನು ಸ್ವಚ್ಛ ಮಾಡುವವರು ಯಾರು? ನಾನು ಒಂದು ಸರ್ಕಾರಿ ಪ್ರೌಢಶಾಲೆಯಲ್ಲಿ ಕೆಲವು ವರ್ಷ ಗೌರವ ಶಿಕ್ಷಕನಾಗಿ ಕೆಲಸ ಮಾಡಿದೆ. ಆ ಶಾಲೆಯಲ್ಲಿ ಮಕ್ಕಳು ಪಾಳಿಯ ಮೇಲೆ ಕಸ ಗುಡಿಸುವುದಕ್ಕೆ ವೇಳಾಪಟ್ಟಿಯನ್ನೇ ಹಾಕಿದ್ದರು. ನಮ್ಮೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೋದಾಗ ಕೊಠಡಿಗಳಲ್ಲಿ ಕಸ ಕಡ್ಡಿ, ದೂಳು ತುಂಬಿತ್ತು. ಕಾರಣ ಅಲ್ಲಿ ಸರ್ಕಾರವು ಸ್ವಚ್ಛತಾ ಸಿಬ್ಬಂದಿಯನ್ನು ಕೊಟ್ಟಿರಲಿಲ್ಲ, ಮಕ್ಕಳನ್ನೂ ಆ ಕೆಲಸ ಮಾಡುವಂತೆ ತಾಕೀತು ಮಾಡುವಂತಿಲ್ಲ. ಹಾಗಾಗಿ, ತಾವು ಕಲಿಯುತ್ತಿರುವ ಶಾಲಾ ಕಾಲೇಜುಗಳ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ತಮ್ಮ ಜವಾಬ್ದಾರಿ ಎಂಬ ಅರಿವು ಮಕ್ಕಳಿಗೆ ಬಂದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.

ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಆಧಾರ: ವಿಶ್ವ ಆರೋಗ್ಯ ಸಂಸ್ಥೆ

ಎಂಪಾಕ್ಸ್ ಏನು, ಎತ್ತ?

1970 ಪ್ರಪಂಚದಲ್ಲಿ ಮೊದಲ ಬಾರಿಗೆ ಮನುಷ್ಯರಲ್ಲಿ ಎಂಪಾಕ್ಸ್ ಸೋಂಕು ಕಂಡು ಬಂದ ವರ್ಷ

121 2022ರ ಜನವರಿಯಿಂದ ಎಂಪಾಕ್ಸ್ ಕಾಯಿಲೆ ವರದಿಯಾದ ದೇಶಗಳ ಸಂಖ್ಯೆ

1.03 ಲಕ್ಷ 2022ರ ಜನವರಿಯಿಂದ 2024ರ ಜುಲೈ 31ರವರೆಗೆ ದೃಢಪಟ್ಟ ಪ್ರಕರಣಗಳು


4,900 ಆಫ್ರಿಕಾ ಖಂಡದ ಕಾಂಗೊ ಗಣರಾಜ್ಯದಲ್ಲಿ 2024ರ ಜನವರಿಯಿಂದ ಈವರೆಗೆ ದೃಢಪಟ್ಟ ಪ್ರಕರಣಗಳು

229 ಕಾಯಿಲೆಯಿಂದ ಮೃತಪಟ್ಟವರು (ಪ್ರಯೋಗಾಲಯದಲ್ಲಿ ನಡೆದ ಪರೀಕ್ಷೆಗಳ ಆಧಾರದಲ್ಲಿ)

629 ಕಾಂಗೊ ಗಣರಾಜ್ಯದಲ್ಲಿ ಎಂಪಾಕ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ಕಾರಣಗಳಿಂದ ಮೃತಪಟ್ಟವರು

ಎಂಪಾಕ್ಸ್ ಇರಲಿ ಎಚ್ಚರ

ಭಾರತದಲ್ಲಿ ಎಂಪಾಕ್ಸ್‌ನ ಒಂದು ಪ್ರಕರಣ ದೃಢಪಟ್ಟಿದೆ. ಇದೇ ಸೋಂಕು ಆಫ್ರಿಕಾ ಖಂಡದ ದೇಶಗಳನ್ನು ಬಸವಳಿಯುವಂತೆ ಮಾಡಿದೆ. ವಿಶ್ವ ಆರೋಗ್ಯ ಸಂಸ್ಥೆಯು ಸಾರ್ವಜನಿಕ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಿದ್ದರೂ ಇದು ಗಂಭೀರ ಕಾಯಿಲೆ ಏನಲ್ಲ. ಆದರೆ, ಸೋಂಕು ಹರಡುವಿಕೆಯ ವಿಚಾರದಲ್ಲಿ ಎಚ್ಚರಿಕೆ ಅಗತ್ಯ



ಎಂಪಾಕ್ಸ್, ಒಂದು ಸಾಂಕ್ರಾಮಿಕ ಕಾಯಿಲೆ. ಸಿಡುಬು ಉಂಟುಮಾಡುವ ಆರ್ಥೊಪಾಕ್ಸ್ ವೈರಸ್‌ನ ಕುಟುಂಬಕ್ಕೆ ಸೇರಿದ ಮಂಕಿಪಾಕ್ಸ್ ವೈರಸ್ (ಎಂಪಿಎಕ್ಸ್‌ವಿ) ಈ ಕಾಯಿಲೆಗೆ ಕಾರಣ. ಅದರಲ್ಲಿ ಎರಡು ತಳಿಗಳಿವೆ. ಕ್ಲಾಡ್ 1 ಮತ್ತು ಕ್ಲಾಡ್ 2. ಕ್ಲಾಡ್ 1ರಲ್ಲಿ 1ಎ ಮತ್ತು 1ಬಿ ಎಂಬ ರೂಪಾಂತರಗಳಿದ್ದರೆ, ಕ್ಲಾಡ್ 2ರಲ್ಲಿ 2ಎ ಮತ್ತು 2ಬಿ ಎಂಬ ರೂಪಾಂತರಗೊಂಡಿರುವ ವೈರಸ್‌ಗಳಿವೆ. 2022–23ರಲ್ಲಿ 2ಬಿ ತಳಿಯಿಂದ ಹಲವು ದೇಶಗಳಲ್ಲಿ ಕಾಯಿಲೆ ಕಾಣಿಸಿಕೊಂಡಿತ್ತು.

2022ರ ಜನವರಿಯಿಂದ ಇಲ್ಲಿಯವರೆಗೆ 121 ರಾಷ್ಟ್ರಗಳಲ್ಲಿ ಎಂಪಾಕ್ಸ್ ಪ್ರಕರಣಗಳು ದೃಢಪಟ್ಟಿವೆ. ಅಮೆರಿಕ, ಆಫ್ರಿಕಾ ಮತ್ತು ಯುರೋಪ್‌ನ 10 ರಾಷ್ಟ್ರಗಳಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಜಗತ್ತಿನ ಶೇ 80ರಷ್ಟು ಪ್ರಕರಣಗಳು ಈ ರಾಷ್ಟ್ರಗಳಲ್ಲಿಯೇ ಕಾಣಿಸಿಕೊಂಡಿವೆ.

1970ರಲ್ಲಿ ಮೊದಲ ಬಾರಿಗೆ ಮನುಷ್ಯರಲ್ಲಿ ಕಾಣಿಸಿಕೊಂಡಿದ್ದ ಈ ಸೋಂಕು, ಜಾಗತಿಕ ಮಟ್ಟದಲ್ಲಿ ತೀವ್ರವಾಗಿ ಕಾಣಿಸಿಕೊಂಡಿದ್ದು 2022ರಲ್ಲಿ. ಆಫ್ರಿಕಾ ಖಂಡದ ರಾಷ್ಟ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈ ರೋಗ, ಈಗ ಇತರೆಡೆಗಳಲ್ಲೂ ಕಾಣಿಸಿಕೊಳ್ಳುತ್ತಿದೆ. 1ಎ ಮತ್ತು 1ಬಿ ತಳಿಗಳಿಂದಾಗಿ ಕಾಂಗೊ ಗಣರಾಜ್ಯ (ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ದಿ ಕಾಂಗೊ) ಸೇರಿದಂತೆ ಹಲವು ದೇಶಗಳಲ್ಲಿ ಆರೋಗ್ಯ ತುರ್ತುಪರಿಸ್ಥಿತಿ ಸೃಷ್ಟಿಯಾಗಿದೆ. ಆಗಸ್ಟ್‌ನಲ್ಲಿ ಆಫ್ರಿಕಾ ಮಾತ್ರವಲ್ಲದೆ, ಇತರ ದೇಶಗಳಲ್ಲೂ ಕ್ಲಾಡ್ 1ಬಿ ತಳಿಯ ವೈರಸ್ ಸೋಂಕಿತರು ಕಂಡುಬಂದಿದ್ದಾರೆ. ಅವರ ಪೈಕಿ ಹೆಚ್ಚಿನವರು ಸೋಂಕಿತರು ಇರುವ ದೇಶಗಳಿಗೆ ಪ್ರಯಾಣಿಸಿದವರು. ಒಂದು ವೇಳೆ, ಪ್ರಯಾಣದ ಹಿನ್ನೆಲೆ ಇಲ್ಲದವರಲ್ಲೂ ಅದು ಕಾಣಿಸಿಕೊಂಡರೆ, ಅದು ಸಮುದಾಯಕ್ಕೆ ಹರಡಿದೆ ಎಂದು ಅರ್ಥ.

ಮನುಷ್ಯ ಮತ್ತು ಪ್ರಾಣಿಗಳ ನಡುವೆ ಹರಡುವ ಈ ರೋಗದ ಮೂಲ ಯಾವುದು ಎನ್ನುವುದು ಇನ್ನೂ ನಿಗೂಢವಾಗಿದೆ. ಅಳಿಲಿನಂತಹ ಸಣ್ಣ ಸಸ್ತನಿಗಳು ಮತ್ತು ಕೋತಿಗಳು ವೈರಸ್‌ಗೆ ತುತ್ತಾಗುತ್ತವೆ ಎನ್ನಲಾಗುತ್ತಿದೆ.

ಹೇಗೆ ಹರಡುತ್ತದೆ?: ಎಂಪಾಕ್ಸ್ ಹೊಂದಿರುವವರೊಂದಿಗೆ ನಿಕಟ ಸಂಪರ್ಕದಲ್ಲಿರುವವರಿಗೆ ಸೋಂಕು ಹರಡುತ್ತದೆ. ಮುಖ್ಯವಾಗಿ, ಸೋಂಕಿತರನ್ನು ಮುಟ್ಟುವುದು, ಅವರೊಂದಿಗೆ ಲೈಂಗಿಕ ಸಂಪರ್ಕ ನಡೆಸುವುದು, ಸೋಂಕಿತನ ಬಾಯಿಯೊಂದಿಗೆ ಬಾಯಿ ಮೂಲಕ ಸ್ಪರ್ಶಿಸುವುದು ಅಥವಾ ಬಾಯಿಯಿಂದ ಚರ್ಮವನ್ನು ಸ್ಪರ್ಶಿಸುವುದರಿಂದ ಬರುತ್ತದೆ. ಜತೆಗೆ, ಸೋಂಕಿತನ ಹತ್ತಿರ ನಿಂತಿದ್ದರೆ, ಅವರ ಉಸಿರಿನ ಮೂಲಕವೂ ಬರಬಹುದು.

ಹೆಚ್ಚು ಮಂದಿ ಲೈಂಗಿಕ ಸಂಗಾತಿಗಳನ್ನು ಹೊಂದಿರುವವರಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಅದರ ಜತೆಗೆ ವೈದ್ಯರು, ಆರೋಗ್ಯ ಕಾರ್ಯಕರ್ತರು, ಸೋಂಕಿತರ ಕುಟುಂಬದವರಿಗೆ ಸೋಂಕು ತಗಲುವ ಸಂಭವವಿರುತ್ತದೆ.

ಟ್ಯಾಟೂ ಪಾರ್ಲರ್‌ಗಳು, ಆಸ್ಪತ್ರೆಗಳ ಸೂಜಿಗಳು ಮತ್ತು ಸೋಂಕಿತರ ಬಟ್ಟೆಗಳ ಮೂಲಕವೂ ಇದು ಹರಡಬಹುದು. ಸೋಂಕಿತ ಪ್ರಾಣಿಗಳಿಂದಲೂ ಮನುಷ್ಯರಿಗೆ ಕಾಯಿಲೆ ಬರುವ ಅಪಾಯ ಇದೆ. ಆ ಪ್ರಾಣಿಗಳು ಕಚ್ಚುವುದು, ಪರಚುವುದು ಮಾಡಿದಾಗ, ಅಂಥ ಪ್ರಾಣಿಗಳನ್ನು ಬೇಟೆ ಆಡಿದಾಗ, ಅವುಗಳೊಂದಿಗೆ ಆಟ ಆಡಿದಾಗ, ಚರ್ಮ ಸುಲಿಯುವಾಗ, ಅವುಗಳ ಮಾಂಸದ ಅಡುಗೆ ಮಾಡುವಾಗ, ತಿನ್ನುವಾಗಲೂ ಸೋಂಕು ತಗುಲಬಹುದು. ಗರ್ಭಿಣಿಗೆ ಸೋಂಕು ತಗುಲಿದರೆ, ಅದು ಭ್ರೂಣವನ್ನೂ ಪ್ರವೇಶಿಸಬಹುದು ಇಲ್ಲವೇ ಜನನದ ಸಮಯದಲ್ಲಿ ಅಥವಾ ಜನನದ ನಂತರ ಮಗುವಿಗೆ ಹರಡಬಹುದು.

ರೋಗಲಕ್ಷಣಗಳಿಗೆ ಚಿಕಿತ್ಸೆ: ಎಂಪಾಕ್ಸ್‌ಗೆ ಚಿಕಿತ್ಸೆ ನೀಡುವುದೆಂದರೆ, ಮುಖ್ಯವಾಗಿ ದದ್ದುಗಳನ್ನು ಮತ್ತು ನೋವನ್ನು ಕಡಿಮೆ ಮಾಡುವುದು. ಕಾಯಿಲೆಯ ಆರಂಭದ ಹಂತದಲ್ಲಿಯೇ ಅದನ್ನು ಪತ್ತೆ ಹಚ್ಚಿದರೆ, ಲಕ್ಷಣಗಳನ್ನು ಬೇಗ ಕಡಿಮೆ ಮಾಡಬಹುದು ಮತ್ತು ಕಾಯಿಲೆ ಉಲ್ಬಣಗೊಂಡು ಇತರೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವುದನ್ನು ತಡೆಯಬಹುದು ಎಂದು ಹೇಳುತ್ತಾರೆ ವೈದ್ಯರು.

ಎಂಪಾಕ್ಸ್ ಲಸಿಕೆ ಪಡೆಯುವುದರಿಂದ ಸೋಂಕನ್ನು ತಡೆಯಬಹುದು. ಎಂಪಾಕ್ಸ್ ಸಾಂಕ್ರಾಮಿಕ ಹರಡತೊಡಗಿದಾಗ, ಸೋಂಕು ತಗಲುವ ಹೆಚ್ಚಿನ ಅಪಾಯ ಇರುವವರಿಗೆ ಲಸಿಕೆ ಪಡೆಯುವಂತೆ ಸಲಹೆ ನೀಡಲಾಗುತ್ತದೆ. ಲಸಿಕೆ ಹಾಕಿಸಿಕೊಳ್ಳುವುದರ ಜತೆಗೆ ಸಾರ್ವಜನಿಕ ಆರೋಗ್ಯ ರಕ್ಷಣೆಯ ಮಾರ್ಗಸೂಚಿಗಳನ್ನು ಪಾಲಿಸುವುದು ಕೂಡ ಮುಖ್ಯ.

ತುರ್ತು ಪರಿಸ್ಥಿತಿಯಲ್ಲಿ ಕೆಲವು ರೀತಿಯ ಆ್ಯಂಟಿ ವೈರಲ್‌ಗಳನ್ನು ಬಳಸುವುದಕ್ಕೆ ಅನುಮತಿ ಇದೆ. ಆದರೆ, ಆ್ಯಂಟಿ ವೈರಲ್‌ಗಳು ಮಂಕಿಪಾಕ್ಸ್ ಚಿಕಿತ್ಸೆಯಲ್ಲಿ ಎಷ್ಟರ ಮಟ್ಟಿಗೆ ಪ್ರಯೋಜನಕಾರಿ ಎನ್ನುವುದನ್ನು ಹೇಳಲು ಇನ್ನೂ ಸಾಧ್ಯವಾಗಿಲ್ಲ.

ಮಂಕಿಪಾಕ್ಸ್ ಅಪಾಯಕಾರಿಯೇ?: ಹೆಚ್ಚಿನ ಸಂದರ್ಭಗಳಲ್ಲಿ ಮಂಕಿಪಾಕ್ಸ್ ಗಂಭೀರ ಸ್ವರೂಪ ಪಡೆಯುವುದಿಲ್ಲ. ಕೆಲವೊಮ್ಮೆ ಸೋಂಕಿತರಲ್ಲಿ ಸಿಡುಬಿನ ಸೌಮ್ಯ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೆಲವೇ ವಾರಗಳಲ್ಲಿ ರೋಗಲಕ್ಷಣಗಳು ವಾಸಿಯಾಗುತ್ತವೆ. ಆದರೆ, ಕೆಲವೊಮ್ಮೆ ಸೋಂಕು ಉಲ್ಬಣವಾಗುವ ಅಪಾಯವೂ ಇರುತ್ತದೆ. ಅಪರೂಪದ ಪ್ರಕರಣಗಳಲ್ಲಿ ಸಾವು ಕೂಡ ಸಂಭವಿಸಬಹುದು.

ಆಧಾರ: ಪಿಟಿಐ, ಬಿಬಿಸಿ, ಪಿಐಬಿ, ವಿಶ್ವ ಆರೋಗ್ಯ ಸಂಸ್ಥೆ ವೆಬ್‌ಸೈಟ್, ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್‌ಷನ್ (ಅಮೆರಿಕ)

ರೋಗ ಲಕ್ಷಣಗಳೇನು?

ಸಿಡುಬಿನ (ಸ್ಮಾಲ್‌ಪಾಕ್ಸ್) ರೋಗಲಕ್ಷಣಗಳನ್ನೇ ಇದು ಹೊಂದಿದೆ. ಆದರೆ, ಸಿಡುಬಿನಷ್ಟು ತೀವ್ರವಾಗಿ ಕಾಡುವುದಿಲ್ಲ. ಎಂಪಾಕ್ಸ್‌ಗೆ ಒಳಗಾದವರು ಎರಡರಿಂದ ನಾಲ್ಕು ವಾರಗಳಲ್ಲಿ ಗುಣಮುಖರಾಗುತ್ತಾರೆ. ಮಕ್ಕಳನ್ನು ಇದು ತೀವ್ರವಾಗಿ ಕಾಡಬಹುದು.

ರೋಗಿಯ ದೇಹದಲ್ಲಿರುವ ವೈರಾಣುಗಳ ಪ್ರಮಾಣ, ದೇಹದ ಆರೋಗ್ಯ ಸ್ಥಿತಿ, ಇತರೆ ಸಮಸ್ಯೆಗಳಿದ್ದರೆ ಈ ಕಾಯಿಲೆ ಜೀವಕ್ಕೆ ಕುತ್ತು ತರಬಹುದು.

ವೈರಸ್ ಸೋಂಕು ತಗುಲಿದ ಬಳಿಕ 5ರಿಂದ 21 ದಿನಗಳ ಒಳಗಾಗಿ ಜನರಲ್ಲಿ ರೋಗಲಕ್ಷಣಗಳು ಕಂಡುಬರುತ್ತವೆ. ವೈರಸ್ ಸೋಂಕು ತಗುಲಿದ ಆರಂಭದಲ್ಲಿ ಮುಖ, ಕೈ–ಕಾಲುಗಳು ಸೇರಿದಂತೆ ಚರ್ಮದ ಮೇಲೆ ಗುಳ್ಳೆಗಳು ಏಳುತ್ತವೆ, ಜ್ವರ, ತೀವ್ರ ತಲೆನೋವು, ಬೆನ್ನು ನೋವು, ಮಾಂಸಖಂಡಗಳಲ್ಲಿ ಸೆಳೆತ, ಗಂಟಲು ಕೆರೆತ, ಕೆಮ್ಮು, ಸುಸ್ತು ಕಾಣಿಸಿಕೊಳ್ಳುತ್ತವೆ. ನಂತರದ ದಿನಗಳಲ್ಲಿ ಚರ್ಮದಲ್ಲಿ ಎದ್ದ ಗುಳ್ಳೆಗಳಲ್ಲಿ ನೀರು ತುಂಬಿ ಬಳಿಕ ಕೀವಾಗುತ್ತದೆ. ಗುಳ್ಳೆಗಳು ತುರಿಕೆ, ನೋವನ್ನೂ ತರಬಹುದು.

ತಡೆಯುವುದು ಹೇಗೆ?

- ವೈದ್ಯರ ಸಲಹೆಯಂತೆ ಲಸಿಕೆ ಪಡೆಯುವುದು
- ಸೋಂಕಿತ ವ್ಯಕ್ತಿಯ ಚರ್ಮದೊಂದಿಗೆ ಸಂಪರ್ಕ ಮಾಡದಿರುವುದು
- ಎಂಪಾಕ್ಸ್‌ಗೆ ಒಳಗಾದವರು ಬಳಸಿದ ವಸ್ತುಗಳನ್ನು (ಊಟದ ತಟ್ಟೆ, ಲೋಟ, ಹಾಸಿಗೆಗಳು, ಬಟ್ಟೆಗಳು, ಸಾಬೂನು ಇತ್ಯಾದಿ) ಸ್ಪರ್ಶಿಸದೇ ಇರುವುದು
- ಸೋಂಕು ದೃಢಪಟ್ಟರೆ ಮನೆಯಲ್ಲಿ ಪ್ರತ್ಯೇಕ ಕೊಠಡಿಯಲ್ಲಿದ್ದು, ಇತರರ ಸಂಪರ್ಕದಿಂದ ದೂರ ಇರುವುದು
- ಪ್ರಾಣಿಗಳ ಸಂಪರ್ಕದಿಂದ ದೂರ ಉಳಿಯುವುದು
- ಸೋಂಕಿತ ವ್ಯಕ್ತಿ, ಪ್ರಾಣಿಗಳ ಸಂಪರ್ಕಕ್ಕೆ ಬಂದರೆ ಕೈಗಳನ್ನು ತೊಳೆಯುವುದು, ಸ್ಯಾನಿಟೈಸರ್ ಬಳಸುವುದು
- ಸೋಂಕಿತರ ಆರೈಕೆ, ಚಿಕಿತ್ಸೆ ವೇಳೆ ಪಿಪಿಇ ಕಿಟ್ ಧರಿಸುವುದು



ಲಸಿಕೆ ಕೊರತೆ, ಪೂರೈಕೆ ವಿಳಂಬ

ಆಫ್ರಿಕಾ ಖಂಡದ ಹಲವು ಭಾಗಗಳಲ್ಲಿ 1970ರಿಂದ ಈ ಸೋಂಕು ಕಾಣಿಸಿಕೊಂಡರೂ ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದು 2022ರಲ್ಲಿ. ಜಗತ್ತಿನ ಸುಮಾರು 100 ದೇಶಗಳಲ್ಲಿ ಲಸಿಕೆಯ ಮೂಲಕ ಸೋಂಕು ಹರಡುವಿಕೆಯನ್ನು ತಡೆಯಲಾಗಿತ್ತು. ಆದರೆ, ಆಫ್ರಿಕಾದಲ್ಲಿ ಲಸಿಕೆಯ ಕೊರತೆ ಕಂಡುಬಂದಿದೆ.


ಈ ವರ್ಷದ ಜನವರಿಯ ನಂತರ ಆಫ್ರಿಕಾದಲ್ಲಿ ಕಾಂಗೊ ಗಣರಾಜ್ಯ ಹಾಗೂ ಸುತ್ತಲಿನ 12 ರಾಷ್ಟ್ರಗಳಿಗೆ ಕಾಯಿಲೆ ಹರಡಿದೆ. ವಿಶ್ವ ಆರೋಗ್ಯ ಸಂಸ್ಥೆಯು ಆಗಸ್ಟ್ ಎರಡನೇ ವಾರದಲ್ಲಿ ‘ಎಂ–ಪಾಕ್ಸ್’ ಅನ್ನು ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಘೋಷಣೆ ಮಾಡಿತು. ಹಲವು ದೇಶಗಳು ಲಸಿಕೆಗಳ ಪೂರೈಕೆಗೆ ಮುಂದಾದವು. ಆದರೆ, ಆಫ್ರಿಕಾದ ದೇಶಗಳು ಈಗಲೂ ಲಸಿಕೆಗಾಗಿ ಪರದಾಡುತ್ತಿವೆ.

ಲಸಿಕೆಗಳ ಕೊರತೆಗೆ ಕಾರಣ, ಹಣಕಾಸು, ಮೂಲಸೌಕರ್ಯ ಮತ್ತು ಪೂರೈಕೆಯಲ್ಲಿನ ಸವಾಲುಗಳು ಕಾರಣ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮೂರು ವಾರಗಳ ಬಳಿಕ ಒಂದು ಲಕ್ಷ ಡೋಸ್‌ಗಳಷ್ಟು ಲಸಿಕೆ ಕಾಂಗೊಗೆ ತಲುಪಿದೆ. ಅಲ್ಲಿ ವೇಗವಾಗಿ ಕಾಯಿಲೆ ಹರಡುತ್ತಿರುವುದರಿಂದ ಇನ್ನಷ್ಟು ಡೋಸ್‌ಗಳ ಅಗತ್ಯವಿದೆ.

ಹಿಂದೆ ಸಿಡುಬಿಗೆ ಲಸಿಕೆ ಹಾಕುತ್ತಿದ್ದುದರಿಂದ, ಅದು ಎಂಪಾಕ್ಸ್ ಅನ್ನೂ ತಡೆಗಟ್ಟುತ್ತಿತ್ತು. ಸಿಡುಬಿಗೆ ಮೂರು ಲಸಿಕೆಗಳನ್ನು ಬಳಸಲಾಗುತ್ತಿದ್ದು, ಅವು ಎಂಪಾಕ್ಸ್ ಅನ್ನು ತಡೆಯುವಲ್ಲಿ ಕೂಡ ಯಶಸ್ವಿಯಾಗಿವೆ. ಆದರೆ, ಸಿಡುಬಿನ ಲಸಿಕೆಯನ್ನು ಸ್ಥಗಿತಗೊಳಿಸಿದ ನಂತರ ಎಂಪಾಕ್ಸ್ ಹೆಚ್ಚು ಹರಡುತ್ತಿದೆ. ಸದ್ಯ, ಎಂಪಾಕ್ಸ್ ವಿರುದ್ಧ ಮೂರು ಲಸಿಕೆಗಳನ್ನು ಬಳಸಲಾಗುತ್ತಿದೆ. ಆದರೂ ಅವು ಸಂಪೂರ್ಣ ಸುರಕ್ಷಿತ ಎಂದು ತಜ್ಞರು ಖಾತರಿಪಡಿಸಿಲ್ಲ; ಜನ ತಮ್ಮ ವಿವೇಚನೆಯ ಮೇರೆಗೆ ಲಸಿಕೆ ಪಡೆಯಬಹುದು ಎಂದಷ್ಟೇ ಹೇಳಿದ್ದಾರೆ. ಲಸಿಕೆ ಅಭಿವೃದ್ಧಿ ಪಡಿಸಲು ವಿಶ್ವ ಆರೋಗ್ಯ ಸಂಸ್ಥೆ ಕರೆ ನೀಡಿದ್ದು, ವಿವಿಧ ಕಂಪನಿಗಳು ಅಭಿವೃದ್ಧಿಯಲ್ಲಿ ತೊಡಗಿವೆ.

ಸಿನಿ ಬಿಟ್ಸ್

‘ದೈಜಿ’ಯಲ್ಲಿ ರಮೇಶ್ ಭಿನ್ನ ಲುಕ್


ರಮೇಶ್ ಅರವಿಂದ್

ಮಂಗಳವಾರ(ಸೆ.10) ನಟ ರಮೇಶ್ ಅರವಿಂದ್ ಅವರ ಜನ್ಮದಿನ. ಇದೇ ಸಂದರ್ಭದಲ್ಲಿ ರಮೇಶ್ ಅವರ ನಟನೆಯ 106ನೇ ಸಿನಿಮಾದ ಪೋಸ್ಟರ್ ಬಿಡುಗಡೆಯಾಗಿದೆ.

‘ದೈಜಿ’ ಎಂಬ ಶೀರ್ಷಿಕೆ ಹೊತ್ತ ಈ ಥ್ರಿಲ್ಲರ್ ಹಾರರ್ ಚಿತ್ರದಲ್ಲಿ ರಮೇಶ್ ಅರವಿಂದ್ ಮುಖ್ಯ ಭೂಮಿಕೆಯಲ್ಲಿ ನಟಿಸಲಿದ್ದು, ಈ ಚಿತ್ರವನ್ನು ‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿಯ ನಿರ್ದೇಶಕ ಆಕಾಶ್ ಶ್ರೀವತ್ಸ ನಿರ್ದೇಶಿಸುತ್ತಿದ್ದಾರೆ. ವಿಭಾ ಕಶ್ಯಪ್ ನಿರ್ಮಾಣದ ಬ್ಯಾನರ್ ಅಡಿಯಲ್ಲಿ ರವಿ ಕಶ್ಯಪ್ ಅವರು ಈ ಚಿತ್ರವನ್ನು ನಿರ್ಮಿಸಲಿದ್ದಾರೆ. ‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿ ರಮೇಶ್ ಅವರ ಸಿನಿ ಪಯಣಕ್ಕೆ ಹೊಸ ತಿರುವು ನೀಡಿತ್ತು. ಇದೀಗ ಮೂರನೇ ಬಾರಿಗೆ ಆ್ಯಕ್ಷನ್ ಕಟ್ ಹೇಳಲು ಆಕಾಶ್ ಸಜ್ಜಾಗಿದ್ದಾರೆ. ‘ದೈಜಿ’ಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಕೊಂಕಣಿಯಲ್ಲಿ ‘ದೈಜಿ’ ಎಂದರೆ ರಕ್ತ ಸಂಬಂಧ. ಜಪಾನೀ ಭಾಷೆಯಲ್ಲಿ ‘ದೈಜಿ’ ಎಂದರೆ ಬಹಳ ಕಾಳಜಿ ವಹಿಸಬೇಕಾದ ವಿಚಾರ. ಹಿಂದೆಂದೂ ಕಾಣಿಸಿಕೊಳ್ಳದಂತಹ ಪಾತ್ರದಲ್ಲಿ ರಮೇಶ್ ಅವರು ಇಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

‘ದೈಜಿ’ಯು ಹಾರರ್ ಸೈಕಲಾಜಿಕಲ್ ಥ್ರಿಲ್ಲರ್ ಚಿತ್ರವಾಗಿದ್ದು, ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ವಿದೇಶದಲ್ಲಿ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

‘ಬೇರೆ ಭಾಷೆಯಲ್ಲಿ ವಿಭಿನ್ನ ಸಿನಿಮಾ ಸ್ವೀಕರಿಸುತ್ತಾರೆ’


ವಿಕ್ಕಿ ವರುಣ್, ಧನ್ಯಾ ರಾಮ್‌ಕುಮಾರ್

‘ಕೆಂಡಸಂಪಿಗೆ’ ಖ್ಯಾತಿಯ ವಿಕ್ಕಿ ವರುಣ್, ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ‘ಕಾಲಾಪತ್ಥರ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜ್‌ಕುಮಾರ್ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ತಮಿಳು, ಮಲಯಾಳಂನಲ್ಲಿ ವಿಭಿನ್ನ ರೀತಿಯ ಸಿನಿಮಾಗಳನ್ನು ಸ್ವೀಕರಿಸುತ್ತಾರೆ. ಯಾಕೆಂದರೆ ಅವರು ಸಿನಿಮಾವನ್ನು ಒಂದೇ ಆಯಾಮದಿಂದ ನೋಡುವುದಿಲ್ಲ. ಎಲ್ಲ ಆಯಾಮದಿಂದ ನೋಡುತ್ತಾರೆ. ನಿರ್ದೇಶನ, ನಟನೆ, ಚಿಕ್ಕಪಾತ್ರಗಳು ಎಲ್ಲವನ್ನೂ ಗುರುತಿಸುತ್ತಾರೆ. ನಮ್ಮಲ್ಲಿಯೂ ಉತ್ತಮ ಚಿತ್ರಗಳನ್ನು ಗುರುತಿಸಬೇಕು. ‘ಕಾಲಾಪತ್ಥರ್’ ಕೂಡ ಭರವಸೆಯ ಸಿನಿಮಾ. ವಿಕ್ಕಿ ಮೊದಲ ಸಿನಿಮಾದಿಂದಲೂ ಶೀರ್ಷಿಕೆಯಲ್ಲಿ ‘ಕೆ’ ಪದ ಬಿಟ್ಟಿಲ್ಲ. ಕಿಂಗ್ ಆ್ಯಟಿಟ್ಯೂಡ್ ಇರುವವರು ‘ಕೆ’ ಪದವನ್ನು ಬಳಸುತ್ತಾರೆ’ ಎಂದರು ಶಿವಣ್ಣ.

ಭುವನ್ ಮೂವೀಸ್ ಲಾಂಛನದಲ್ಲಿ ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ನಿರ್ಮಿಸಿರುವ ಚಿತ್ರಕ್ಕೆ ವಿಕ್ಕಿ ಆ್ಯಕ್ಷನ್ ಕಟ್ ಕೂಡ ಹೇಳಿದ್ದಾರೆ.

‘ನಾನು ನಟ ಆಗಬೇಕೆಂದುಕೊಂಡವನಲ್ಲ. ನಿರ್ದೇಶಕನಾಗಬೇಕೆಂದು ಚಿತ್ರರಂಗಕ್ಕೆ ಬಂದವನು. ದುನಿಯಾ ಸೂರಿ ಅವರ ಬಳಿ ಸಹಾಯಕನಾಗಿ ಕೆಲಸ ಮಾಡಿದ್ದೇನೆ. ಈ ಸಿನಿಮಾಕ್ಕಾಗಿ ಏಳು ವರ್ಷ ಶ್ರಮಿಸಿದ್ದೇನೆ’ ಎಂದರು ವಿಕ್ಕಿ.

ಚಿತ್ರದಲ್ಲಿ ನಟಿಸಿರುವ ನಿರ್ದೇಶಕ ಟಿ.ಎಸ್.ನಾಗಾಭರಣ, ರಾಜೇಶ್ ನಟರಂಗ, ಚಕ್ರವರ್ತಿ ಚಂದ್ರಚೂಡ್ ಮುಂತಾದವರು ಚಿತ್ರದ ಕುರಿತು ಮಾತನಾಡಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹಲವು ಸಾಮಾಜಿಕ ಜಾಲತಾಣ ಬಳಕೆದಾರರು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಸುತ್ತೋಲೆಯೊಂದನ್ನು ಹಂಚಿಕೊಳ್ಳುತ್ತಿದ್ದಾರೆ. ಪರಿಷ್ಕರಣೆಯ ಕಾರಣಕ್ಕಾಗಿ ಎಲ್‌ಐಸಿಯು ತನ್ನ ಎಲ್ಲ ಉತ್ಪನ್ನಗಳನ್ನು ಹಾಗೂ ಪಾಲಿಸಿಗಳನ್ನು ಸೆ. 30ರಿಂದ ಚಾಲ್ತಿಗೆ ಬರುವಂತೆ ಹಿಂಪಡೆಯುತ್ತದೆ ಎಂದು ಪ್ರತಿಪಾದಿಸಲಾಗುತ್ತಿದೆ. ಚಾಲ್ತಿಯಲ್ಲಿರುವ ಪಾಲಿಸಿಗಳ ಪೈಕಿ ಅತ್ಯಂತ ಲಾಭದಾಯಕವಾದ ಪಾಲಿಸಿಗಳನ್ನು ಸೆಪ್ಟೆಂಬರ್ 30ರ ಒಳಗೆ ಪಡೆದುಕೊಳ್ಳಿ ಎಂದು ಸುತ್ತೋಲೆಯನ್ನು ತೋರಿಸಿ ಪ್ರಚಾರ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ವಿಚಾರದ ಸತ್ಯಾಸತ್ಯತೆ ಅರಿಯಲು ಎಲ್‌ಐಸಿ ವೆಬ್‌ಸೈಟ್ ಅನ್ನು, ಅದರ ಸಾಮಾಜಿಕ ಜಾಲತಾಣದ ಅಕೌಂಟ್‌ಗಳನ್ನು ಪರಿಶೀಲಿಸಲಾಯಿತು. ಸಂಸ್ಥೆಯು ಈ ಸುತ್ತೋಲೆಯ ಬಗ್ಗೆ ಯಾವುದೇ ಪ್ರಕಟಣೆ ಅಥವಾ ಪತ್ರಿಕಾ ಹೇಳಿಕೆ ನೀಡಿಲ್ಲ ಎನ್ನುವುದು ತಿಳಿಯಿತು. ಬದಲಿಗೆ, ಎಲ್‌ಐಸಿಯು ಪ್ರೆಸ್ ಬ್ಯೂರೊ ಆಫ್ ಇಂಡಿಯಾದ ಒಂದು ಪ್ರಕಟಣೆಯನ್ನು ತನ್ನ ಎಕ್ಸ್ ವೇದಿಕೆಯಲ್ಲಿ ಹಂಚಿಕೊಂಡಿದೆ. ಅದರಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪಾಲಿಸಿ ವಾಪಸ್‌ಗೆ ಸಂಬಂಧಿಸಿದ ಸುತ್ತೋಲೆಯನ್ನು ಎಲ್‌ಐಸಿ ಹೊರಡಿಸಿರುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದೆ. ಜತೆಗೆ, ಆ ಸುತ್ತೋಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ದಿನಾಂಕ ಇಲ್ಲದೇ ಇದ್ದುದು ಮತ್ತು ವಾಕ್ಯ ರಚನೆ, ಕಾಗುಣಿತದ ತಪ್ಪುಗಳು ಇರುವುದು ಕಂಡುಬಂತು. ಎಲ್‌ಐಸಿ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುತ್ತೋಲೆಯು ನಕಲಿ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಯಾವುದರಿಂದ ಕುಟುಂಬ ಕಟ್ಟಬೇಕು?

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

20

ಒಂದು ಕುಟುಂಬ ಸುಖವಾಗಿರಬೇಕು ಅಂದರ ಏನು ಮಾಡಬೇಕು? ಯಾವುದರಿಂದ ಕಟ್ಟಿದರೆ ಸೌಧ ಚೆನ್ನಾಗಿರುತ್ತದೆ? ಕುಟುಂಬ ಚೆನ್ನಾಗಿರಬೇಕು ಅಂದರ ಅದನ್ನು ಪ್ರೇಮದಿಂದ ಕಟ್ಟಬೇಕು. ಒಂದು ಮನೆಯನ್ನು ಸಿಮೆಂಟ್‌ನಿಂದ ಕಟ್ಟೋದಲ್ಲ, ಭಾವನೆಗಳಿಂದ ಕಟ್ಟಬೇಕು.

ಈಗೊಂದು ಮದುವೆ ವಾರ್ಷಿಕೋತ್ಸವ ಇರತೈತಿ. ಎಲ್ಲರೂ ಬಂದಿರ್ತಾರ. ಬ್ರೇಸ್‌ಲೆಟ್, ಹಣ, ಅಂತೆಲ್ಲ ಗಿಫ್ಟ್ ತಂದು ಕೊಡ್ತಾರ. ಆದರ ರಾತ್ರಿ ಮಲಗುವ ಹೊತ್ತಿಗೆ ನಿಮ್ಮ ಪುಟ್ಟ ಮಗ ಬಂದು ಒಂದು ಗುಲಾಬಿ ಕೊಡ್ತಾನ. ವಿಶ್ ಮಾಡ್ತಾನ. ಅದನ್ನು ಪಡೆದ ನಿಮಗ, ಮಲಗಿದಾಗ ಇತರ ಯಾರೇ ಕೊಟ್ಟ ಗಿಫ್ಟ್ ನೆನಪಿರೋದಿಲ್ಲ. ಮಗನ ಕೈಯಾಗಿನ ಗುಲಾಬಿ, ಎದೆಯೊಳಗಿನ ಪ್ರೇಮ ಮಾತ್ರ ನೆನಪಿರುತ್ತದೆ. ಯಾಕೆಂದರೆ ಪ್ರೇಮ ಉಳೀತದೆ. ವಸ್ತುಗಳು ಉಳಿಯಲ್ಲ. ಸಣ್ಣ ಸಣ್ಣ ವಿಷಯಗಳಲ್ಲಿ ಸಂತೋಷ ಕಾಣುವುದನ್ನು ಮನುಷ್ಯ ಕಲಿಯಬೇಕು. ಪ್ರೇಮದಿಂದ ಬದುಕು ದೊಡ್ಡದಾಗುತ್ತದೆ. ದೊಡ್ಡ ಮನೆ ಕಟ್ಟಿಸಿದವ ದೊಡ್ಡವನಾಗುವುದಿಲ್ಲ. ದೊಡ್ಡ ಮನಸ್ಸಿದ್ದವನು ದೊಡ್ಡವನಾಗುತ್ತಾನೆ.

ಈ ಭೂಮಿಯ ಮೇಲೆ ಧರ್ಮ ದ್ವೇಷಗಳು, ಜಾತಿ ದ್ವೇಷಗಳು, ಅಣ್ಣ ತಮ್ಮಂದಿರ ದ್ವೇಷಗಳು ಬೇಕಾದಷ್ಟೈತಿ. ಆದರೆ ದ್ವೇಷದಿಂದ ಬದುಕು ಕಟ್ಟಲು ಸಾಧ್ಯವಿಲ್ಲ. ಕೂಡಿ ಬದುಕಬೇಕು. ಎಲ್ಲರೂ ಕೂಡಿ ಬದುಕಿದಾಗ ಮಾತ್ರ ಪ್ರೇಮ ಸೌಧ ನಿರ್ಮಾಣವಾಗುತ್ತದೆ. ಉದ್ಯಾನದಲ್ಲಿ ಒಂದೇ ಜಾತಿಯ ಹೂವುಗಳಿದ್ದರೆ ಅದನ್ನು ಉದ್ಯಾನ ಎನ್ನಲಿಕ್ಕಾಗದು. ಅದು ಕಂಗೊಳಿಸುವುದೂ ಇಲ್ಲ. ನೂರಾರು ಜಾತಿಯ ಹೂವುಗಳಿದ್ದರೆ ಮಾತ್ರ ಉದ್ಯಾನ ಕಂಗೊಳಿಸುತ್ತದೆ. ಹಾಗೆಯೇ ನೂರಾರು ಜಾತಿ ಧರ್ಮದ ಜನರು ಕೂಡಿ ಬಾಳಿದರೆ ಭವ್ಯ ಭಾರತ ನಿರ್ಮಾಣವಾಗುತ್ತದೆ. ಅದೇ ಸ್ವರ್ಗವಾಗುತ್ತದೆ.

ಭೂಮಿ ಸ್ವರ್ಗವಾಗಬೇಕು ಎಂದರೆ ಎಲ್ಲರೂ ಕೂಡಿ ಬಾಳಬೇಕು. ನಾನು ಪೂಜಿಸುವ ದೇವರು ಬೇರೆಯಾಗಿರಬಹುದು. ನೀವು ಪೂಜಿಸುವ ದೇವರು ಭಿನ್ನವಾಗಿರಬಹುದು. ನಾವೂ ದೇವರ ಮುಂದೆ ದೀಪ ಹಚ್ಚತೀವಿ. ನೀವೂ ದೇವರ ಮುಂದೆ ದೀಪ ಹಚ್ಚತೀರಿ. ದೇವರು ಭಿನ್ನ ಆಗಿರಬಹುದು. ಆದರ ದೇವರ ಮುಂದೆ ಹಚ್ಚಿಟ್ಟ ದೀಪದ ಬೆಳಕು ಒಂದೇ ಆಗಿರತೈತಿ. ಅದನ್ನು ನಾವೆಲ್ಲರೂ ಅರಿಯಬೇಕು.

ಒಂದು ಸಲ 9ರ ಅಂಕೆಗೆ ಸೊಕ್ಕು ಬಂತು. ಅಂಕೆಗಳ ಪೈಕಿ ತಾನು ದೊಡ್ಡವ ಅಂತ. ಅದಕ್ಕೆ ಅದು 8ಕ್ಕೆ ಹೊಡೆಯಿತು. ‘ಯಾಕೆ ಹೊಡೆದೆ’ ಎಂದು ಕೇಳಿತು 8. ‘ನಾನು ದೊಡ್ಡವ ಅದಕ್ಕೆ ಹೊಡೆದೆ’ ಎಂತು 9. ಹೊಡೆತ ತಿಂದ 8 ತಾನೇನು ಕಡಿಮೆ ಅಂತ 7ಕ್ಕೆ ಹೊಡೀತು. ‘ಯಾಕೆ ಹೊಡೆದೆ’ ಅಂತ 7 ಪ್ರಶ್ನೆ ಮಾಡಿದಾಗ, ‘ನಾನು ನಿನಗಿಂತ ದೊಡ್ಡವ’ ಅಂತು. 7 ಸುಮ್ಮನಿರಲಿಲ್ಲ 6ಕ್ಕೆ ಹೊಡೀತು. 6, 5ಕ್ಕೆ ಹೊಡೀತು. 5, 4ಕ್ಕೆ ಹೊಡೀತು. ಹೀಗೇ ಆಗಿ ಎರಡು ಒಂದಕ್ಕೆ ಹೊಡೀತು. ಆದರೆ ಒಂದು ಮಾತ್ರ ತನಗಿಂತ ಕೆಳಕ್ಕಿರುವ ಸೊನ್ನೆಗೆ ಹೊಡೆಯಲಿಲ್ಲ. ಇಬ್ಬರೂ ಕೂಡಿ ಇರೋಣ ಅಂತು. ಹೀಗೆ ಒಂದು ಮತ್ತು ಸೊನ್ನೆ ಕೂಡಿದ್ದರಿಂದ ಅದು ಹತ್ತಾತು. ಆಗ 9 ಮೆತ್ತಗಾತು. ಕೂಡಿದ್ದರೆ ಹೆಚ್ಚಾಗುತ್ತದೆ. ಕೂಡಿಬಾಳಿದರೆ ಭೂಮಿ, ಬಾಳು ಸ್ವರ್ಗವಾಗುತ್ತದೆ. ಕಚ್ಚಾಡಿದರೆ ಯಾವುದೂ ಸ್ವರ್ಗವಾಗಲ್ಲ. ಪ್ರೇಮದಿಂದ ಕಟ್ಟಿದ್ದು ಉಳಿಯುತ್ತದೆ. ದ್ವೇಷದಿಂದ ಕಟ್ಟಿದ್ದು ಅಳಿಯುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಸೆಪ್ಟೆಂಬರ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಅಷ್ಟಮಿ ಗಂ. 23-47 ನಕ್ಷತ್ರ: ಜ್ಯೇಷ್ಠ ಗಂ. 21-22 ಯೋಗ: ಪ್ರೀತಿ ಗಂ. 23-55 ಕರಣ: ವಿಷ್ಟಿ ಗಂ. 11-36, ಸಿಂಹ ಮಾಸದ 25 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 4.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-23 **ಸೂರ್ಯಾಸ್ತ:** 06-31
ಮುಸ್ಲಿಂ ದಿನಾಂಕ: 07 ರಬೀಉಲ್ಲಾವಲ್
ಅದೃಷ್ಟ ಸಂಖ್ಯೆ: 9, 1

ಮೇಷ: ಕೆಲಸಗಳಿಗೆ ನೀವು ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಸಾಮಾಜಿಕ ಸಹಕಾರ ಸಿಗುವುದು. ವಿವಾಹ ಪ್ರಸ್ತಾವಗಳು ಆಕರ್ಷಕವಾಗಿ ಕಂಡರೂ ಪರಾಮರ್ಶಿಸದೇ ಒಪ್ಪಿಕೊಳ್ಳಬೇಡಿ.

ವೃಷಭ: ಸಂಗಾತಿಯೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವುದರಿಂದ ನೋವನ್ನು ಮರೆಯುವುದು. ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರವನ್ನು ಮಾಡುವವರಿಗೆ ತಾಪತ್ರಯಗಳು ಕಾಣಿಸಿಕೊಳ್ಳಲಿವೆ.

ಮಿಥುನ: ಅಚ್ಚುಕಟ್ಟಾದ ಕೆಲಸಗಳಿಂದ ಅಧಿಕಾರಿ ವರ್ಗದವರಲ್ಲಿ ನಿಮ್ಮ ಮೇಲಿನ ವಿಶ್ವಾಸವನ್ನು ಇಮ್ಮಡಿಗೊಳಿಸಿಕೊಳ್ಳುವಿರಿ. ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ.

ಕರ್ಕಾಟಕ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ನಂಬುಗೆ ಮತ್ತು ವಿಶ್ವಾಸದಿಂದಾಗಿ ಹಲವಾರು ಅವಕಾಶಗಳು ನಿಮ್ಮದಾಗಲಿವೆ. ಆಟೋಟಗಳಲ್ಲಿ ಹಿಂದಿನಕ್ಕಿಂತ ಉತ್ತಮ ಪ್ರದರ್ಶನ ತೋರುವಿರಿ.

ಸಿಂಹ: ಆರೋಗ್ಯಕ್ಕಿಂತ ಹಣ ಮುಖ್ಯ ಎನ್ನುವ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕಾಗುವುದು. ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷವಿರುವುದು. ಸಾಮರಸ್ಯದಿಂದ ಇರುವಿರಿ.

ಕನ್ಯಾ: ಅನಗತ್ಯ ಖರ್ಚಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಕಾರ್ಯಕ್ಷೇತ್ರದಲ್ಲಿನ ಉನ್ನತ ವ್ಯಕ್ತಿಯನ್ನು ಭೇಟಿಯಾಗುವಿರಿ. ಮಾತುಗಳು ಯಾರ ಮನಸ್ಸನ್ನೂ ನೋಯಿಸದಿರಲಿ.

ತುಲಾ: ಹಣಕಾಸು ಸಂಸ್ಥೆಗಳನ್ನು ನಡೆಸುವವರಿಗೆ ದುಡುಕು ನಿರ್ಧಾರದಿಂದ ನಷ್ಟ ಸಂಭವಿಸಲಿದೆ. ನಿಮ್ಮ ಸಂಬಂಧಿಕರ ಆಗಮನದಿಂದ ಸಂತೋಷ ಆಗುವುದು. ಬೇಸರವಾದಲ್ಲಿ ಅದರ ನಿವಾರಣೆಗಾಗಿ ಸಂಗೀತ ಕೇಳಿ.

ವೃಶ್ಚಿಕ: ನೆಂಟರಿಷ್ಟರ ಸಲಹೆಸೂಚನೆಗಳನ್ನು ಆಲಿಸಿ. ಸನ್ಮಾರ್ಗದಲ್ಲಿ ನಡೆದರೆ ದೈವಬಲ ನಿಮಗೆ ಒದಗಿ ಬಂದು ಅಭಿವೃದ್ಧಿಗೊಳ್ಳುವಿರಿ. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಹಣಕಾಸಿನ ಬಗ್ಗೆ ಚಿಂತೆ ಬೇಡ.

ಧನು: ಪ್ರಸ್ತುತ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವುದರಿಂದ ಅತಿಯಾಗಿ ಬೀಗದಿರುವುದು ಒಳ್ಳೆಯದು. ವಾಹನದಿಂದ ಕೈ ಕಾಲಿಗೆ ಪೆಟ್ಟಾಗುವ ಸಾಧ್ಯತೆ ಇದೆ. ಸಾಧನೆಯ ಮಾರ್ಗದಲ್ಲಿ ಮುಂದುವರಿಯುವಿರಿ.

ಮಕರ: ಗೃಹ ನಿರ್ಮಾಣದಂಥ ಕಾರ್ಯ ಕೈಗೊಂಡವರಿಗೆ ಮಾನಸಿಕ ಒತ್ತಡ ಹೆಚ್ಚಾಗಿರುವುದು. ವಯಸ್ಸಾದವರು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಆಹಾರವನ್ನು ಸ್ವೀಕರಿಸಿ. ಕ್ಷುಲ್ಲಕ ಕಾರಣಗಳಿಗೆ ಕೋಪಿಸಿಕೊಳ್ಳುವಿರಿ.

ಕುಂಭ: ಸಂಸ್ಥೆಯ ಹೊಸ ಆರ್ಥಿಕ ನೀತಿಯಿಂದ ನಿಮಗೆ ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಲಾಭ ಇರುವುದು. ಜವಾಬ್ದಾರಿಯ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಹಣ ಉಳಿಸಲು ಯೋಚಿಸುವಿರಿ.

ಮೀನ: ಮಗಳ ಮಾತಿನಂತೆ ಕೆಲಸದಲ್ಲಿ ಮಾಡಿಕೊಂಡ ಬದಲಾವಣೆಯು ಆರೋಗ್ಯವನ್ನು ಸರಿ ಮಾಡಿಕೊಳ್ಳಲು ಸಹಕಾರಿ. ಎಲ್ಲಾ ಕೆಲಸಗಳನ್ನು ಅತೀವ ಒತ್ತಡದ ನಡುವೆಯೇ ಮಾಡುವಂತೆ ಆಗುವುದು.

ಪದಬಂಧ 5799


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜೀರುಗುಣಿಕೆಯ ಹಗ್ಗ (3)
2.ಉಗ್ರವಾದ ಹೊಡೆದಾಟ (4)
5.ದಾರ ಹಿಡಿದುಕೊಂಡಿರುವ ಬಾಧ್ಯಸ್ಥ (4)
6.ಸಂಬಳವಲ್ಲ!ಮೇಲು ಸಂಪಾದನೆ! (3)
7.ಉಲ್ಟಾಪಲ್ಟಾ ಕಾಣುತ್ತಿರುವ ನೊಸಲು (2)
9.ರಸದಲ್ಲಿನ ವೇಗ (3)
11.ಹವಿಸ್ಸು ನೀಡುವಾಗ ಕಾಣಿಸಿದ ಆಕಳು (2)
13.ಪ್ರಾಣಿಗಳು ಅರ್ಧ ತಿಂದುದನ್ನು ಪುನಃನುರಿಸಿ ತಿನ್ನುವಿಕೆ (3)
14.ಸಂಪೂರ್ಣವಾದುದನ್ನು ಹೀಗೆನ್ನಿ (4)
16.ನಡುವೆ ಧ್ವನಿಯಿದ್ದಾಗಿನ ಆಶ್ವಾಸನೆ! (4)
17.ಬಾಣ ಬಿದ್ದಿರುವ ಸಮುದ್ರ (3)

ಮೇಲಿಂದ ಕೆಳಕ್ಕೆ

1.ದಾಹವಿದ್ದಾಗ ನೀಡಿದ ದೃಷ್ಟಾಂತ! (5)
2.ದನಗಳನ್ನು ಕಟ್ಟುವ ಸ್ಥಳ (2)
3.ಲಲಾಟಲಿಖಿತವಿದು (5)
4.ಪುರದಲ್ಲಿ ದೊರೆತ ಸನ್ಮಾನ (4)
8.ಠಕ್ಕನನ್ನು ಹೀಗೂ ಕರೆವರು (5)
10.ಹಿಂದುಮುಂದಾಗಿರುವ ಭಾಷಣ (4)
12.ಒಳ್ಳೆಯ ಅವಕಾಶವಿದು (5)
15.ಚಿನ್ನ ಬೆಳ್ಳಿ ಮುಂತಾದ ಲೋಹಗಳನ್ನು ಕರಗಿಸುವ ಪಾತ್ರೆ (2)



5798ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ನವಸುಮ 6.ಬೆಣ್ಣೆಮಾತು 7.ವಾಚಾಮಗೋಚರ 9.ಸಾಂಕ್ರಾಮಿಕರೋಗ 14.ಬಲವಂತ 16.ಅಂದಗೇಡಿ

ಮೇಲಿಂದ ಕೆಳಕ್ಕೆ:
1.ಮನಸ್ತಾಪ 2.ಗೊಣ್ಣೆ 3.ಆತುರ 5.ಸುರವಾ 6.ಬೆಸುಂಗೋ 8.ಮಸ್ತಕ 10.ಮಿಡಿತ 11.ಗದ್ಗದ 12.ಗಾರುಡಿಗ 13.ಓಬವ್ವ 15.ವಂದಿ

ಸುಡೊಕು 6184

	9				5		6	
2			4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6183 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

‘ನಾಲ್ಕು ಜಿಲ್ಲೆಗಳಲ್ಲಿ ಭಾರಿ ಮಳೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ನಾಲ್ಕು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಹಗುರ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಉತ್ತರ ಒಳನಾಡಿನ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದ್ದು, ಗಂಟೆಗೆ 30 ಕಿ.ಮೀ.ನಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ.

ಬೆಂಗಳೂರು ನಗರ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಬುಧವಾರ ಮೋಡ ಕವಿದ ವಾತಾವರಣ ಇರಲಿದ್ದು, ಹಗುರ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮಡಿಕೇರಿಯಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ



ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಜೋರಾಗಿ ಸುರಿಯುತ್ತಿರುವ ಮಳೆ ಮಂಗಳವಾರವೂ ಮುಂದುವರಿಯಿತು. ನಗರದಲ್ಲಿ ಮಧ್ಯಾಹ್ನ ಒಂದೂವರೆ ಗಂಟೆವರೆಗೆ ಭಾರಿ ಮಳೆ ಬಿದ್ದಿತು. ದಿನವಿಡೀ ಮೋಡ ಕವಿದ ವಾತಾವರಣವಿತ್ತು.

ಮಂಗಳವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ಭಾಗಮಂಡಲದಲ್ಲಿ 6, ಮಡಿಕೇರಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ 5.5, ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಹಾಗೂ ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲದಲ್ಲಿ ತಲಾ 4 ಸೆಂ.ಮೀ. ಮಳೆ ಸುರಿದಿದೆ.

ಕಾನೂನು ತಜ್ಞರ ಜತೆ ಚರ್ಚಿಸಿ ಕ್ರಮ: ಪೊಲೀಸ್ ಕಮಿಷನರ್ ದಯಾನಂದ

ರೇಣುಕಸ್ವಾಮಿ ಕೊಲೆ: ವಿಶೇಷ ನ್ಯಾಯಾಲಯಕ್ಕೆ?


ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣವನ್ನು ತ್ವರಿತಗತಿ ನ್ಯಾಯಾಲಯ ಅಥವಾ ವಿಶೇಷ ನ್ಯಾಯಾಲಯಕ್ಕೆ ಒಪ್ಪಿಸುವ ಕುರಿತು ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು 3,991 ಪುಟಗಳ ಆರೋಪಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಕಾನೂನು ತಜ್ಞರೊಂದಿಗೆ ಸಮಾಲೋಚಿಸಿದ ಬಳಿಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯದ (ಸಿಎಫ್ಎಲ್) ಪರೀಕ್ಷಾ ವರದಿ ಇನ್ನೂ ಬಂದಿಲ್ಲ. ಬಂದ ಬಳಿಕ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ಈಗಾಗಲೇ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಎಫ್ಎಸ್ಎಲ್, ಸಿಎಫ್ಎಸ್ಎಲ್ ವರದಿಗಳು, ಪ್ರತ್ಯಕ್ಷ ಸಾಕ್ಷಿಗಳು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಉಲ್ಲೇಖಿಸಲಾಗಿದೆ. ಆರೋಪಿಗಳು ಕೃತ್ಯವೆಸಗಿರುವುದಕ್ಕೆ ಪ್ರಮುಖ ಸಾಕ್ಷ್ಯಗಳು ದೊರೆತಿವೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಆರೋಪಿ ದರ್ಶನ್ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿರುವ ವಿಚಾರ ಸಂಬಂಧ ಆಗ್ನೇಯ ವಿಭಾಗ ಡಿಸಿಪಿ ಸಾರಾ ಫಾತಿಮಾ ನೇತೃತ್ವದಲ್ಲಿ ನಡೆಯುತ್ತಿರುವ ತನಿಖೆ ಪ್ರಗತಿಯಲ್ಲಿದೆ. ಅಧಿಕಾರಿಗಳ ಪಾತ್ರ, ಜೈಲಿನಲ್ಲಿರುವ ಲೋಪದೋಷಗಳು, ನಿಯಮ ಉಲ್ಲಂಘಿಸಲು ಏನು ಕಾರಣ, ಜೈಲು ಸುಧಾರಣೆಗೆ ಏನೆಲ್ಲ ಕ್ರಮ ಕೈಗೊಳ್ಳಬೇಕು ಎನ್ನುವುದೂ ಸೇರಿದಂತೆ ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ನೇತೃತ್ವದಲ್ಲಿ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಸರ್ಕಾರ ನಿರ್ದೇಶಿಸಿದೆ. ತನಿಖೆ ಪೂರ್ಣಗೊಂಡ ಬಳಿಕ ವರದಿ ನೀಡಲಾಗುವುದು’ ಎಂದು ಮಾಹಿತಿ ನೀಡಿದರು.

ಪತ್ನಿಗೆ ಕರೆ ಮಾಡಿದ ದರ್ಶನ್



ದರ್ಶನ್

‘ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆಯಾದ ಕಾರಣ ಬಳ್ಳಾರಿ ಜೈಲಿನಿಂದ ನಟ ದರ್ಶನ್ ಅವರು ಪತ್ನಿ ವಿಜಯಲಕ್ಷ್ಮಿ ಅವರಿಗೆ ಮಂಗಳವಾರ ಕರೆ ಮಾಡಿ, ಕಾನೂನು ಹೋರಾಟದ ಬಗ್ಗೆ ಚರ್ಚೆ ನಡೆಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಮುಂದಿನ ಕಾನೂನು ಪ್ರಕ್ರಿಯೆಗಳ ಕುರಿತು ಚರ್ಚಿಸುವ ಸಲುವಾಗಿ ಪತ್ನಿ ವಿಜಯಲಕ್ಷ್ಮಿ ಮತ್ತು ತಾಯಿ ಮೀನಾ ಅವರನ್ನು ಬುಧವಾರ (ಸೆ. 11) ಬಳ್ಳಾರಿ ಜೈಲಿಗೆ ಬರುವಂತೆ ದರ್ಶನ್ ತಿಳಿಸಿದ್ದಾರೆ. ಈ ಬಗ್ಗೆ ಬಳ್ಳಾರಿ ಜೈಲು ಅಧಿಕಾರಿಗಳಿಗೂ ನಟನ ಕುಟುಂಬದ ಸದಸ್ಯರು ಮಾಹಿತಿ ನೀಡಿದ್ದಾರೆ. ‘ಪ್ರಿಸನ್ ಕಾಲ್ ಸಿಸ್ಟಮ್’ ಮೂಲಕ ದೂರವಾಣಿ ಕರೆ ಮಾಡಿ, ಪತ್ನಿ ಜೊತೆ 5 ನಿಮಿಷ ಮಾತನಾಡಿದ್ದಾರೆ’ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ದೋಷಾರೋಪ ಪಟ್ಟಿಯ ವಿವರ ಪ್ರಕಟಣೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿ ಮತ್ತು ಅದಕ್ಕೆ ಪೂರಕವಾದ ಇತರೆ ಯಾವುದೇ ಅಂಶಗಳನ್ನು ಮಾಧ್ಯಮಗಳು ಪ್ರಸಾರ ಅಥವಾ ಪ್ರಕಟ ಮಾಡಬಾರದು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯೂ ಆದ ನಟ ದರ್ಶನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಮಧ್ಯಂತರ ಆದೇಶ ಹೊರಡಿಸಿತು.

‘ಅರ್ಜಿದಾರರು ಕೋರಿರುವ ಮನವಿಯು ಮೇಲ್ನೋಟಕ್ಕೆ ಸೂಕ್ತವಾಗಿದೆ. ಹೀಗಾಗಿ ಮಾಧ್ಯಮಗಳು, ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿಯಲ್ಲಿನ ಗೋಪ್ಯ ಮಾಹಿತಿಯನ್ನು ಮುಂದಿನ ಆದೇಶದವರೆಗೆ ಮುದ್ರಿಸಬಾರದು, ಪ್ರಸಾರ ಮಾಡಕೂಡದು, ಹಂಚಿಕೊಳ್ಳಬಾರದು. ಈ ಆದೇಶವನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಪ್ರಕರಣದ ಪ್ರತಿವಾದಿಗಳಾಗಿರುವ 37 ಮಾಧ್ಯಮ ಸಂಸ್ಥೆಗಳಿಗೆ ರವಾನಿಸಬೇಕು. ನ್ಯಾಯಾಲಯದ ಆದೇಶ ಮತ್ತು ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ಮಾಧ್ಯಮ ಸಂಸ್ಥೆಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು‘ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ದರ್ಶನ್ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಈಗಾಗಲೇ ದರ್ಶನ್ ಅವರ ಪತ್ನಿ ಮಾಧ್ಯಮಗಳ ವಿರುದ್ಧ ಸಿವಿಲ್ ದಾವೆ ಹೂಡಿ ತಾತ್ಕಾಲಿಕ ಪ್ರತಿಬಂಧಕ ಆದೇಶ ಪಡೆದಿದ್ದಾರೆ. ಆದಾಗ್ಯೂ, ಮಾಧ್ಯಮಗಳು ದಿನದಲ್ಲಿ ಕನಿಷ್ಠ 8 ತಾಸುಗಳನ್ನು ದರ್ಶನ್‌ಗೆ ಸಂಬಂಧಿಸಿದ ಸುದ್ದಿ ಪ್ರಸಾರ ಮಾಡುತ್ತಿವೆ. ಇದು ದರ್ಶನ್ ಅವರ ಮೂಲಭೂತ ಹಕ್ಕಿಗೆ ಧಕ್ಕೆ ಉಂಟು ಮಾಡಿದೆ. ಆದ್ದರಿಂದ, ನಿರ್ಬಂಧ ವಿಧಿಸಬೇಕು’ ಎಂದು ಕೋರಿದ್ದರು. ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ವಾದ ಮಂಡಿಸಿದರು.

‘ಗೋಪ್ಯವಲ್ಲ’

ಬೆಂಗಳೂರು: ‘ದೋಷಾರೋಪ ಪಟ್ಟಿ ಗೋಪ್ಯ ದಾಖಲಾತಿ ಅಲ್ಲ. ಅದರಲ್ಲಿನ ಮಾಹಿತಿ ಸಹಜವಾಗಿ ಹೊರಗೆ ಬರುತ್ತದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆಯಾಗಿ ಹೇಳಿದರು.

ವಾಲ್ಮೀಕಿ ನಿಗಮದ ಅಕ್ರಮ ಬ್ಯಾಂಕ್ ಅಧಿಕಾರಿಗಳ ಹೆಸರಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದ ದೋಷಾರೋಪ ಪಟ್ಟಿಯಲ್ಲಿ ಯೂನಿಯನ್ ಬ್ಯಾಂಕ್ ಅಧಿಕಾರಿಗಳ ಹೆಸರು ಇಲ್ಲ. ಅಕ್ರಮದ ಕುರಿತು ತನಿಖೆ ನಡೆಸಿದ್ದ ಜಾರಿ ನಿರ್ದೇಶನಾಲಯವು, ಸೋಮವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.

‘ಯೂನಿಯನ್ ಬ್ಯಾಂಕ್ ಸಿಬಿಐಗೆ ನೀಡಿದ್ದ ದೂರಿನ ಆಧಾರದಲ್ಲೇ ಜಾರಿ ನಿರ್ದೇಶನಾಲಯವು (ಇ.ಡಿ) ಇಸಿಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಆದರೆ ಈಗ ಇ.ಡಿ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಬ್ಯಾಂಕ್‌ನ ಅಧಿಕಾರಿಗಳ ಹೆಸರಿಲ್ಲ’ ಎಂದು ಮೂಲಗಳು ತಿಳಿಸಿವೆ.

ಸಿಬಿಐಗೆ ನೀಡಿದ್ದ ದೂರಿನಲ್ಲಿ ಯೂನಿಯನ್ ಬ್ಯಾಂಕ್, ‘ಎಂ.ಜಿ.ರಸ್ತೆ ಶಾಖೆಯ ಮುಖ್ಯಸ್ಥೆ ಸುಚಿಸ್ಮಿತಾ ರೌಲ್, ಶಾಖಾ ಉಪಮುಖ್ಯಸ್ಥೆ ದೀಪಾ ಡಿ ಮತ್ತು ಸಾಲ ವ್ಯವಹಾರಗಳ ಅಧಿಕಾರಿ ವಿ.ಕೃಷ್ಣಮೂರ್ತಿ ಅವರು ಕರ್ತವ್ಯಲೋಪ ಎಸಗಿದ್ದಾರೆ. ಅಕ್ರಮದಲ್ಲಿ ಅವರೂ ಭಾಗಿಯಾಗಿದ್ದಾರೆಯೇ ಎಂಬುದನ್ನು ಪತ್ತೆ ಮಾಡಬೇಕು’ ಎಂದು ಕೋರಿತ್ತು. ಸಿಬಿಐ ಇದನ್ನು ತನ್ನ ಎಫ್ಐಆರ್‌ನಲ್ಲೂ ದಾಖಲಿಸಿತ್ತು.

ಜುಲೈ 11-12ರ ಅವಧಿಯಲ್ಲಿ ಇ.ಡಿ ರಾಜ್ಯದಲ್ಲಿ ಶೋಧ ಕಾರ್ಯ ನಡೆಸಿದಾಗ, ಬ್ಯಾಂಕ್‌ನ ಅಧಿಕಾರಿಗಳ ಮನೆಗಳಲ್ಲೂ ಶೋಧ ನಡೆಸಿತ್ತು. ಆದರೆ ಈಗಿನ ಆರೋಪ ಪಟ್ಟಿಯಲ್ಲಿ ಈ ಮೂವರ ಹೆಸರೂ ಇಲ್ಲ ಎನ್ನಲಾಗಿದೆ.

ಪ್ರಕರಣ–ತನಿಖೆಯ ಹಾದಿ

- **ಮೇ 26:** ನಿಗಮದ ಅಧೀಕ್ಷಕ ಚಂದ್ರಶೇಖರನ್ ಆತ್ಮಹತ್ಯೆ
- **ಮೇ 28–29:** ನಿಗಮದ ಹಣವನ್ನು ಯೂನಿಯನ್ ಬ್ಯಾಂಕ್‌ನ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನಿಗಮದ ಪ್ರಧಾನ ವ್ಯವಸ್ಥಾಪಕ ಎ.ರಾಜಶೇಖರನ್ ಅವರಿಂದ ಹೈಗ್ರೌಂಡ್ಸ್ ಪೊಲೀಸರಿಗೆ ದೂರು
- **ಜೂನ್ 6:** ಯೂನಿಯನ್ ಬ್ಯಾಂಕ್‌ನಿಂದ ತನ್ನ ಅಧಿಕಾರಿಗಳು ಮತ್ತು ಕೆಲ ಅಪರಿಚಿತ ವ್ಯಕ್ತಿಗಳ ವಿರುದ್ಧ ಸಿಬಿಐಗೆ ದೂರು
- **ಮೇ 31:** ಪ್ರಕರಣದ ತನಿಖೆಗೆ ಎಸ್ಐಟಿ ರಚಿಸಿದ ರಾಜ್ಯ ಸರ್ಕಾರ
- **ಜೂನ್ 1:** ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರುಗಣ್ಣವರ್ ಬಂಧಿಸಿದ ಎಸ್ಐಟಿ
- **ಜೂನ್ 6:** ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಸ್ಥಾನಕ್ಕೆ ಬಿ.ನಾಗೇಂದ್ರ ರಾಜೀನಾಮೆ
- **ಜೂನ್ 14–24:** ನಿಗಮದ ಹಣ ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳುವಲ್ಲಿ ನೆರವಾಗಿದ್ದ ಸತ್ಯನಾರಾಯಣ ವರ್ಮಾ ಮತ್ತು ಚಂದ್ರಮೋಹನ್ ಬಂಧನ. ಸತ್ಯನಾರಾಯಣ ಸಹಚರ ಸಾಯಿತೇಜ್ ಬಂಧನ
- **ಜೂನ್ 29:** ಅಕ್ರಮವಾಗಿ ವರ್ಗಾವಣೆಯಾಗಿತ್ತು ಎನ್ನಲಾದ ₹94.5 ಕೋಟಿಯಲ್ಲಿ ಆರೋಪಿಗಳಿಂದ ₹28 ಕೋಟಿ ವಶಕ್ಕೆ. ವಿವಿಧ ಬ್ಯಾಂಕ್ ಖಾತೆಗಳಲ್ಲಿ ಇದ್ದ ₹45 ಕೋಟಿ ಮುಟ್ಟುಗೋಲು
- **ಜೂನ್ 11:** ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರ ಸಂಖ್ಯೆ 11ಕ್ಕೆ. ಶಾಸಕ ಬಿ.ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ವಿಚಾರಣೆ ನಡೆಸಿದ ಎಸ್ಐಟಿ
- **ಜುಲೈ 10–12:** ಪ್ರಕರಣ ದಾಖಲಿಸಿಕೊಂಡ ಜಾರಿ ನಿರ್ದೇಶನಾಲಯದಿಂದ ರಾಜ್ಯದ ಹಲವೆಡೆ ಶೋಧ. ಬಿ.ನಾಗೇಂದ್ರ ಮತ್ತು ಬಸನಗೌಡ ದದ್ದಲ್, ಆಪ್ತರು ಮತ್ತು ಸಂಬಂಧಿಕರ ದೀರ್ಘ ವಿಚಾರಣೆ
- **ಜುಲೈ 12:** ನಾಗೇಂದ್ರ ಬಂಧನ. ನಿಗಮದ ಹಣವನ್ನು ಲೋಕಸಭೆ ಚುನಾವಣೆ ಬಳಸಿಕೊಳ್ಳಲಾಗಿದೆ. ₹20 ಕೋಟಿ ಮೌಲ್ಯದ ಮದ್ಯ ಖರೀದಿಸಲಾಗಿದೆ: ಇ.ಡಿ ಹೇಳಿಕೆ
- **ಆಗಸ್ಟ್ 5:** ಎಸ್ಐಟಿಯಿಂದ ಆರೋಪ ಪಟ್ಟಿ ಸಲ್ಲಿಕೆ. ನಿಗಮದ ಪ್ರಧಾನ ವ್ಯವಸ್ಥಾಪಕ ಮತ್ತು ಇತರ ಅಧಿಕಾರಿಗಳಿಂದಲೇ ಕೃತ್ಯ ಎಂದ ಎಸ್ಐಟಿ. ಆರೋಪ ಪಟ್ಟಿಯಲ್ಲಿ ನಾಗೇಂದ್ರ ಮತ್ತು ಬಸನಗೌಡ ದದ್ದಲ್ ಹೆಸರಿಲ್ಲ
- **ಸೆಪ್ಟೆಂಬರ್ 9:** ಜಾರಿ ನಿರ್ದೇಶನಾಲಯದಿಂದ ಆರೋಪ ಪಟ್ಟಿ ಸಲ್ಲಿಕೆ

ಸುದ್ದಿ 2 ನಿಮಿಷ

ನಿನ್ನೆಯ ದರ್ಶನ್ ಆಗಲು ಅವಕಾಶವಿದೆ: ರಮೇಶ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ನಟ ದರ್ಶನ್ ಕುರಿತಂತೆ ಪ್ರತಿಕ್ರಿಯೆ ನೀಡಿರುವ ನಟ ರಮೇಶ್ ಅರವಿಂದ್, ‘ತಿದ್ದಿಕೊಂಡು ನಿನ್ನೆಯ ದರ್ಶನ್ ಆಗಲು ಅವರಿಗೆ ಅವಕಾಶವಿದೆ’ ಎಂದಿದ್ದಾರೆ.

‘ಗೊತ್ತಿರುವ ವ್ಯಕ್ತಿ ತಪ್ಪು ಮಾಡಿದಾಗ, ಆ ವ್ಯಕ್ತಿ ಗೊತ್ತು ಎನ್ನುವ ಕಾರಣಕ್ಕೆ ಆ ತಪ್ಪನ್ನು ತಪ್ಪು ಅಲ್ಲ ಎನ್ನಲು ಸಾಧ್ಯವಿಲ್ಲ. ಹಾಗೆಯೇ ತಪ್ಪು ಎನ್ನುವ ಒಂದೇ ಕಾರಣಕ್ಕೆ ಆ ವ್ಯಕ್ತಿಯೇ ಗೊತ್ತಿಲ್ಲ ಎನ್ನಲೂ ಸಾಧ್ಯವಿಲ್ಲ. ನಾವು ಕಲಾವಿದರಾಗಿ ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಸಿಲುಕಿದ್ದೇವೆ’ ಎಂದು ರಮೇಶ್ ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

‘ದರ್ಶನ್ ಬಗ್ಗೆ ನಾನು ಇಷ್ಟು ದಿನ ಮಾತನಾಡಿಲ್ಲ. ಸಾಮಾನ್ಯವಾಗಿ ಇಂತಹ ವಿಷಯಗಳ ಬಗ್ಗೆ ನಾನು ಮಾತನಾಡುವುದೂ ಇಲ್ಲ. ಇಲ್ಲಿ ಮೂರು ದರ್ಶನ್ ಇದ್ದಾರೆ. ಒಬ್ಬರು ನಿನ್ನೆಯ ದರ್ಶನ್. ಅವರು ಚಿತ್ರಗಳ ಮೂಲಕ ಬಹಳ ಮಜಾ ಕೊಟ್ಟ ಸೂಪರ್‌ಸ್ಟಾರ್. ವೀಕೆಂಡ್ ವಿದ್ ರಮೇಶ್‌ನಲ್ಲಿ ಆ ದರ್ಶನ್ ನೋಡಿದ್ದೆ. ಇನ್ನು ಇವತ್ತಿನ ದರ್ಶನ್ ಒಬ್ಬರು ಇದ್ದಾರೆ. ಈ ಘಟನೆಯಿಂದ ನಮಗೆಲ್ಲರಿಗೂ ಸ್ವಲ್ಪ ಬೇಜಾರಾಗಿದೆ. ಒಂದು ದೊಡ್ಡ ತಪ್ಪು ಆಗಿದೆ. ಆ ತಪ್ಪನ್ನು ಯಾರು ಮಾಡಿದ್ದಾರೋ ಆ ವ್ಯಕ್ತಿಗೆ ಶಿಕ್ಷೆ ಆಗಲೇಬೇಕು. ಅದು ಕಾನೂನು ನೋಡಿಕೊಳ್ಳುತ್ತದೆ. ಇನ್ನೊಂದು ನಾಳೆಯ ದರ್ಶನ್. ಈ ಘಟನೆಯ ಶಿಕ್ಷೆಯನ್ನು ಅನುಭವಿಸಿ ಹೊರಬಂದಾಗ ಆ ನಾಳೆಯ ದರ್ಶನ್ ಏನು ಮಾಡುತ್ತಾರೆ ಎನ್ನುವುದು ನನಗೆ ಬಹಳ ಕುತೂಹಲಕಾರಿಯಾಗಿದೆ. ರಸ್ತೆಯಲ್ಲಷ್ಟೇ ಯೂಟರ್ನ್ ಇಲ್ಲ ಎನ್ನುವ ಎಚ್ಚರಿಕೆ ಇರುತ್ತದೆ. ಜೀವನದಲ್ಲಿ ಅದು ಇರುವುದಿಲ್ಲ. ಶಿಕ್ಷೆ ಅನುಭವಿಸಿದ ಮೇಲೆ ಒಂದು ಅವಕಾಶವಿದೆ. ತಿದ್ದಿಕೊಂಡು ನಿನ್ನೆಯ ದರ್ಶನ್ ಆಗಲು ಅವಕಾಶವಿರುತ್ತದೆ. ಅದನ್ನು ಕಾದುನೋಡಬೇಕು. ಆ ದರ್ಶನ್ ಏನು ಮಾಡುತ್ತಾರೆ ಎನ್ನುವುದೇ ನನಗೆ ಈಗ ಇರುವ ಕುತೂಹಲ’ ಎಂದಿದ್ದಾರೆ.



22ರಂದು ಪಂಚಮಸಾಲಿ ವಕೀಲರ ರಾಜ್ಯ ಸಮಾವೇಶ

ಮೂಡಲಗಿ (ಬೆಳಗಾವಿ): ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಬೇಡಿಕೆಗೆ ಶಾಸಕಾಂಗ ಸ್ಪಂದಿಸದ ಕಾರಣ ಕಾನೂನಾತ್ಮಕ ಬೆಂಬಲ ಪಡೆಯಲು ಸೆಪ್ಟೆಂಬರ್ 22ರಂದು ಬೆಳಗಾವಿಯಲ್ಲಿ ಲಿಂಗಾಯತ ಪಂಚಮಸಾಲಿ ವಕೀಲರ ಪ್ರಥಮ ರಾಜ್ಯ ಸಮಾವೇಶ ಆಯೋಜಿಸಲಾಗಿದೆ’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ಮೂರೂವರೆ ವರ್ಷದಿಂದ ಪಂಚಮಸಾಲಿ ಮೀಸಲಾತಿಗಾಗಿ ನಿರಂತರ ಹೋರಾಟ ನಡೆಸಿದರೂ ಸ್ಪಂದನ ಸಿಗದ ಕಾರಣ ಈಗ 7ನೇ ಹಂತದ ಹೋರಾಟ ಆರಂಭಿಸಿದ್ದೇವೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಎಲ್ಲ ಕಡೆ ಪಂಚಮಸಾಲಿ ನೂತನ ಘಟಕಗಳನ್ನು ಮಾಡಲಾಗುತ್ತಿದ್ದು, ಹಿರಿಯ ವಕೀಲರನ್ನು ಸಲಹಾ ಸಮಿತಿಗೆ ಆಯ್ಕೆ ಮಾಡಿದ್ದೇವೆ. ಬೆಳಗಾವಿ ಸಮಾವೇಶದಲ್ಲಿ ಕಿತ್ತೂರ ಮತ್ತು ಕಲ್ಯಾಣ ಕರ್ನಾಟಕದಿಂದ 5 ಸಾವಿರ ವಕೀಲರು ಭಾಗವಹಿಸುವರು. ವಕೀಲರ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವುದು’ ಎಂದರು.

ಮರಾಠ ಮೀಸಲಾತಿ: 16ರಿಂದ ಉಪವಾಸ ಸತ್ಯಾಗ್ರಹ

ಛತ್ರಪತಿ ಸಂಭಾಜಿನಗರ (ಪಿಟಿಐ): ಮರಾಠ ಮೀಸಲಾತಿಗೆ ಆಗ್ರಹಿಸಿ ಇದೇ 16ರ ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿಯ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಹೋರಾಟಗಾರ ಮನೋಜ್ ಜರಾಂಗೆ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸೆ.17 ಮುಕ್ತಿ ಸಂಗ್ರಾಮ ದಿನ (ಮರಾಠವಾಡ ವಿಮೋಚನಾ ದಿನ). ಅದೇ ದಿನದಂದು ಮೀಸಲಾತಿಗಾಗಿ ಉಪವಾಸ ಸತ್ಯಾಗ್ರಹ ಆರಂಭಿಸುತ್ತೇವೆ’ ಎಂದು ತಿಳಿಸಿದರು.

ಮರಾಠ ಮೀಸಲಾತಿಯ ಬೇಡಿಕೆ ಮತ್ತು ಎಲ್ಲ ಮರಾಠರಿಗೆ ಕುಣಬಿ ಪ್ರಮಾಣ ಪತ್ರಗಳನ್ನು ನೀಡುವ ಕುರಿತಂತೆ ಅಲ್ಪ-ಸಂಖ್ಯಾತರ ಅಭಿವೃದ್ಧಿ ಖಾತೆಯ ರಾಜ್ಯ ಸಚಿವ ಅಬ್ದುಲ್ ಸತ್ತಾರ್ ಅವರೊಂದಿಗೆ ಸೋಮವಾರ ಜರಾಂಗೆ ದೂರವಾಣಿ ಮೂಲಕ ಮಾತನಾಡಿದರು. ಈ ಬಗ್ಗೆ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಮಾಹಿತಿ ನೀಡಿರುವುದಾಗಿ ಸಚಿವರು ಹೇಳಿದರು.

ಲೈಂಗಿಕ ಕಿರುಕುಳ: ಬಿಜೆಪಿ ಮುಖಂಡ ಬಂಧನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಮಹಿಳೆ ಜೊತೆ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ ಪ್ರಕರಣ ದಾಖಲಾಗುತ್ತಲೇ ತಲೆ ಮರೆಸಿಕೊಂಡಿದ್ದ ಚನ್ನಪಟ್ಟಣ ಬಿಜೆಪಿ ಗ್ರಾಮಾಂತರ ಮಂಡಳದ ಮಾಜಿ ಅಧ್ಯಕ್ಷ ಟಿ.ಎಸ್. ರಾಜುನನ್ನು ಅಕ್ಕೂರು ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.



ಟಿ.ಎಸ್. ರಾಜು

ಆರೋಪಿಯನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸೆ.7ರಂದು ತೂಬಿನಕೆರೆ ಗ್ರಾಮದಲ್ಲಿ ತಡರಾತ್ರಿ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ನೋಡಲು ನಿಂತಿದ್ದ ಮಹಿಳೆ ಜೊತೆ ರಾಜು ಅಸಭ್ಯವಾಗಿ ವರ್ತಿಸಿದ್ದ. ಸಂತ್ರಸ್ತ ಮಹಿಳೆ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಾಗಿತ್ತು. ಕೂಡಲೇ ಆರೋಪಿ ತಲೆ ಮರೆಸಿಕೊಂಡಿದ್ದ. ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗುತ್ತಿದ್ದಂತೆ ಬಿಜೆಪಿ ಜಿಲ್ಲಾ ಘಟಕ, ಆತನನ್ನು ಪಕ್ಷದಿಂದ ಅಮಾನತು ಮಾಡಿದೆ.

ಬೂದಿ ಮುಚ್ಚಿದ ಕೆಂಡವಾದ ಮಣಿಪುರ • 2 ಜಿಲ್ಲೆಗಳಲ್ಲಿ ಕರ್ಫ್ಯೂ • 15ರವರೆಗೆ ಇಂಟರ್‌ನೆಟ್ ಬಂದ್

ಹಿಂಸೆಗೆ ತಿರುಗಿದ ವಿದ್ಯಾರ್ಥಿಗಳ ಪ್ರತಿಭಟನೆ

ಇಂಫಾಲ್ (ಪಿಟಿಐ): ಸಂಘರ್ಷಪೀಡಿತ ಮಣಿಪುರದಲ್ಲಿ ಶಾಂತಿಸ್ಥಾಪನೆಗೆ ಒತ್ತಾಯಿಸಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆ ಹಿಂಸೆಗೆ ತಿರುಗಿದ ಬೆನ್ನಲ್ಲೇ ಮುಂಜಾಗ್ರತೆ ಕ್ರಮವಾಗಿ ರಾಜ್ಯದ 2 ಜಿಲ್ಲೆಗಳಲ್ಲಿ ಕರ್ಫ್ಯೂ, ಒಂದು ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಅಲ್ಲದೆ, ರಾಜ್ಯದಾದ್ಯಂತ ಇಂಟರ್‌ನೆಟ್ ಸಂಪರ್ಕ ಸೇವೆಯನ್ನು 5 ದಿನ ಸ್ಥಗಿತಗೊಳಿಸಲಾಗಿದೆ. ಜಾಲತಾಣಗಳ ಮೂಲಕ ದ್ವೇಷ ಹರಡುವುದು, ಪ್ರತಿಭಟನೆ ಸಂಬಂಧಿತ ಚಿತ್ರಗಳ ಹಂಚಿಕೆಗೆ ತಡೆ, ದ್ವೇಷ ಭಾಷಣ, ವಿಡಿಯೊಗಳ ಹಂಚಿಕೆಗೆ ತಡೆಯೊಡ್ಡುವುದು ಇದರ ಉದ್ದೇಶವಾಗಿದೆ ಎಂದು ಗೃಹ ಇಲಾಖೆಯು ಈ ಕುರಿತ ಆದೇಶದಲ್ಲಿ ತಿಳಿಸಿದೆ.

ಮೊಬೈಲ್ ಫೋನ್ ಡಾಟಾ ಬಳಕೆ ಸೇರಿದಂತೆ ಎಲ್ಲ ರೀತಿಯ ಇಂಟರ್‌ನೆಟ್ ಸಂಪರ್ಕ ಸೇವೆಯನ್ನು ನಿರ್ಬಂಧಿಸಲಾಗಿದೆ ಈ ನಿರ್ಬಂಧವು ಸೆ.15ರ ಮಧ್ಯಾಹ್ನ 3 ಗಂಟೆಯವರೆಗೆ ಜಾರಿಯಲ್ಲಿರಲಿದೆ.

ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಅನಿರ್ದಿಷ್ಟ ಅವಧಿವರೆಗೂ ಕರ್ಫ್ಯೂ ಜಾರಿಗೊಳಿಸಲಾಗಿದೆ. ನಿವಾಸಿಗಳಿಗೆ ಮನೆಯಿಂದ ಹೊರಗೆ ಬಾರದಂತೆಯೂ ನಿರ್ಬಂಧ ಹೇರಲಾಗಿದೆ. ತೌಬಾಲ್ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆ ಹೇರಲಾಗಿದೆ.

'ಕಾನೂನು ಸ್ಥಿತಿ ಹದಗೆಡುತ್ತಿರುವ ಹಾಗೂ ನಿಯಂತ್ರಣ ತಪ್ಪುತ್ತಿರುವ ಕಾರಣ ಮುಂದಿನ ಆದೇಶದವರೆಗೆ ಎರಡು ಜಿಲ್ಲೆಗಳಲ್ಲಿ ಪೂರ್ಣ ಕರ್ಫ್ಯೂ ಇರಲಿದೆ' ಎಂದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ನೂರಾರು ವಿದ್ಯಾರ್ಥಿಗಳು ಇಂಫಾಲ್‌ನ ಖ್ವೈರಾಂಬಾದ್ ಮಾರುಕಟ್ಟೆ ಆವರಣದಲ್ಲಿಯೇ ಸೋಮವಾರ ರಾತ್ರಿ ಬಿಡಾರ ಹೂಡಿದ್ದರು. ಸಮವಸ್ತ್ರದಲ್ಲಿದ್ದ ಈ ವಿದ್ಯಾರ್ಥಿಗಳಿಗೆ ಸ್ಥಳೀಯ ವರ್ತಕರೇ ರಾತ್ರಿ ವಾಸ್ತವ್ಯಕ್ಕೆ ನೆರವಾಗಿದ್ದರು.

ವಿದ್ಯಾರ್ಥಿಗಳ ಪ್ರತಿಭಟನೆ ಸೋಮವಾರ ಹಿಂಸೆಗೆ ತಿರುಗಲು ರಾಜ್ಯದಲ್ಲಿನ ದೀರ್ಘಕಾಲದ ಬಿಕ್ಕಟ್ಟಿನ ಕುರಿತು ಸಮುದಾಯದಲ್ಲಿದ್ದ ಆಕ್ರೋಶವೇ ಕಾರಣ ಎಂದು ವಿದ್ಯಾರ್ಥಿ ನಾಯಕರೊಬ್ಬರು ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಎನ್.ಬೀರೇನ್ ಸಿಂಗ್ ಮತ್ತು ರಾಜ್ಯಪಾಲ ಆಚಾರ್ಯ ಅವರನ್ನೂ ವಿದ್ಯಾರ್ಥಿಗಳು ಭೇಟಿಯಾಗಿದ್ದರು. ಡ್ರೋನ್, ಕ್ಷಿಪಣಿ ದಾಳಿ, ಈಚಿನ ಹಿಂಸಾಚಾರ ಕೃತ್ಯಗಳಲ್ಲಿ 8 ಮಂದಿ ಸತ್ತಿದ್ದು, 12ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.

ರಾಜ್ಯದಲ್ಲಿ ಜನಾಂಗೀಯ ಘರ್ಷಣೆಯಿಂದಾಗಿ ಕಳೆದ ವರ್ಷದ ಮೇ ತಿಂಗಳಿನಿಂದ ಇಲ್ಲಿಯವರೆಗೂ 200ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ಅತಂತ್ರರಾಗಿದ್ದಾರೆ.

ಮಣಿಪುರಕ್ಕೆ ಸಿಆರ್‌ಪಿಎಫ್‌ನ 2000 ಸಿಬ್ಬಂದಿ: (ನವದೆಹಲಿ ವರದಿ): ಜನಾಂಗೀಯ ಸಂಘರ್ಷ ಬಾಧಿತ ಮಣಿಪುರಕ್ಕೆ, ಸಿಆರ್‌ಪಿಎಫ್‌ನ 2000 ಸಿಬ್ಬಂದಿಯುಳ್ಳ ಎರಡು ತುಕಡಿಗಳನ್ನು ಕೇಂದ್ರ ಕಳುಹಿಸಿಕೊಟ್ಟಿದೆ ಎಂದು ಮೂಲಗಳು ತಿಳಿಸಿವೆ.

58ನೇ ಸಂಖ್ಯೆಯ ತುಕಡಿಯು ತೆಲಂಗಾಣದ ವಾರಂಗಲ್‌ನಿಂದ, 112ನೇ ಸಂಖ್ಯೆಯ ತುಕಡಿಯನ್ನು ಜಾರ್ಖಂಡ್‌ನ ಲತೇಹರ್‌ನಿಂದ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಇಂಫಾಲ್‌ನಲ್ಲಿ ಮಂಗಳವಾರ ವಿದ್ಯಾರ್ಥಿಗಳು, ಮಹಿಳೆಯರು ಪ್ರತಿಭಟನಾ ಮೆರವಣಿಗೆ ನಡೆಸಿದರು —ಎಎಫ್‌ಪಿ ಚಿತ್ರ

ಗುಂಪು ಘರ್ಷಣೆ ಮಹಿಳೆ ಸಾವು

ಮಣಿಪುರದ ಕಂಗ್‌ಪೋಕ್ಪಿ ಜಿಲ್ಲೆ ತಾಂಗ್‌ಬುಹ್ ಗ್ರಾಮದಲ್ಲಿ ಎರಡು ಶಸ್ತ್ರಸಜ್ಜಿತ ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಮಹಿಳೆ ಮೃತಪಟ್ಟಿದ್ದಾರೆ. ಮನೆಗಳಿಗೆ ಬೆಂಕಿ ಹಚ್ಚಲಾಗಿದೆ.

ಭಾನುವಾರ ರಾತ್ರಿ ಇದು ನಡೆದಿದೆ. ಮನೆಗಳಿಗೆ ಬೆಂಕಿ ಬಿದ್ದಂತೆಯೇ ಹಲರು ರಕ್ಷಣೆಗಾಗಿ ಸಮೀಪದ ಅರಣ್ಯ ಪ್ರದೇಶದತ್ತ ಓಡಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಗ್ರೆಸ್ 15 ವರ್ಷಗಳಲ್ಲಿ ಮಾಡಲಾಗದ್ದನ್ನು ನಾನು 15 ತಿಂಗಳಲ್ಲಿ ಮಾಡಿ ತೋರಿಸುತ್ತೇನೆ ಎಂದಿದ್ದರು. ಈಗ, ಮಣಿಪುರದ ಎಲ್ಲ ವರ್ಗದವರ ಜನಾದೇಶ ಪಡೆದ 15 ತಿಂಗಳಲ್ಲೇ ಮಣಿಪುರ ಹೊತ್ತಿ ಉರಿಯಲು ಅನುವು ಮಾಡಿಕೊಟ್ಟಿದ್ದಾರೆ
ಜೈರಾಮ್ ರಮೇಶ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಅಶ್ರುವಾಯು ಶೆಲ್ ಪ್ರಯೋಗ'

ರಾಜಭವನಕ್ಕೆ ಜಾಥಾ ತೆರಳುತ್ತಿದ್ದ ವಿದ್ಯಾರ್ಥಿಗಳು, ಮಹಿಳೆಯರ ಗುಂಪು ಚದುರಿಸಲು ಪೊಲೀಸರು ಮಂಗಳವಾರ ಅಶ್ರುವಾಯು ಶೆಲ್ ಸಿಡಿಸಿದರು.

ಡಿಜಿಪಿ ಮತ್ತು ಸರ್ಕಾರದ ಭದ್ರತಾ ಸಲಹೆಗಾರರ ಪದಚ್ಯುತಿಗೆ ಒತ್ತಾಯಿಸಲು ವಿದ್ಯಾರ್ಥಿಗಳು, ಮಹಿಳೆಯರು ರಾಜಭವನಕ್ಕೆ ಜಾಥಾ ತೆರಳುತ್ತಿದ್ದರು. ಮಣಿಪುರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಪ್ರತ್ಯೇಕವಾಗಿ ರ‍್ಯಾಲಿ ನಡೆಸಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

'ಅತ್ಯಾಧುನಿಕ ರಾಕೆಟ್ ಪತ್ತೆ'

ಮಣಿಪುರದಲ್ಲಿ ಡ್ರೋನ್, ಕ್ಷಿಪಣಿಗಳ ದಾಳಿ ಬಳಿಕ ಈಗ ಆಧುನಿಕ ರಾಕೆಟ್‌ಗಳು ಪತ್ತೆಯಾಗಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಳಿಯಲ್ಲಿ ಡ್ರೋನ್, ರಾಕೆಟ್ ಬಳಕೆಯಾಗಿಲ್ಲ ಎಂದು ನಿವೃತ್ತ ಡಿ.ಜಿ, ಲೆಫ್ಟಿನಂಟ್ ಜನರಲ್ ಪಿ.ಸಿ.ನಾಯರ್ ಅವರು ನೀಡಿದ್ದ ಹೇಳಿಕೆಯನ್ನು ಅಧಿಕಾರಿ ತಳ್ಳಿಹಾಕಿದ್ದಾರೆ. ಸುದ್ದಿಗಾರರ ಜೊತೆಗೆ ಮಾತನಾಡಿದ ಐಜಿಪಿ (ಆಡಳಿತ) ಕೆ.ಜಯಂತ ಸಿಂಗ್, ನಿವೃತ್ತ ಡಿಜಿ ಅವರದ್ದು ಅಪಕ್ವವಾದ ಹೇಳಿಕೆ. ಡ್ರೋನ್, ಕ್ಷಿಪಣಿ ದಾಳಿ ನಡೆದಿರುವುದಕ್ಕೆ ಸಾಕ್ಷ್ಯಗಳಿವೆ. ಡ್ರೋನ್ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

24 ಗಂಟೆ ಗಡುವು

'ವಿದ್ಯಾರ್ಥಿ ಸಮುದಾಯದ ಆರು ಬೇಡಿಕೆಗಳ ಕುರಿತು ಪ್ರತಿಕ್ರಿಯಿಸಲು ರಾಜ್ಯಪಾಲ ಲಕ್ಷ್ಮಣನ್ ಪ್ರಸಾದ್ ಆಚಾರ್ಯ ಅವರಿಗೆ 24 ಗಂಟೆ ಗಡುವು ನೀಡಲಾಗಿದೆ. ಗಡುವು ಮುಗಿದ ಬಳಿಕ ಮುಂದಿನ ನಡೆ ನಿರ್ಧರಿಸುತ್ತೇವೆ' ಎಂದು ವಿದ್ಯಾರ್ಥಿ ಮುಖಂಡ ವಿಕ್ಟರ್ ಸಿಂಗ್ ತಿಳಿಸಿದ್ದಾರೆ.

ಡ್ರೋನ್, ಕ್ಷಿಪಣಿ ದಾಳಿ ನಡೆಸಿದವರ ವಿರುದ್ಧ ಕ್ರಮಜರುಗಿಸಬೇಕು, ಸಮಗ್ರ ರಕ್ಷಣೆ ಒದಗಿಸಬೇಕು ಎಂಬುದು ವಿದ್ಯಾರ್ಥಿಗಳ ಬೇಡಿಕೆಯಾಗಿದೆ.

'ನ್ಯಾ.ಹೇಮಾ ಸಮಿತಿ ವರದಿ: ಕ್ರಮ ಜರುಗಿಸದಿರುವುದು ಆಘಾತಕಾರಿ'



ಕೊಚ್ಚಿ (ಪಿಟಿಐ): ಮಲಯಾಳ ಚಿತ್ರೋದ್ಯಮದಲ್ಲಿ ಮಹಿಳೆಯರ ಶೋಷಣೆ ಮತ್ತು ಅವರಿಗೆ ನೀಡಲಾಗುತ್ತಿರುವ ಕಿರುಕುಳ ಕುರಿತು ನ್ಯಾಯಮೂರ್ತಿ ಹೇಮಾ ನೇತೃತ್ವದ ಸಮಿತಿ ಸಲ್ಲಿಸಿರುವ ವರದಿಗೆ ಸಂಬಂಧಿಸಿ ಕ್ರಮ ಕೈಗೊಳ್ಳದಿರುವುದು 'ಆಘಾತಕಾರಿ' ಎಂದಿರುವ ಕೇರಳ ಹೈಕೋರ್ಟ್, ರಾಜ್ಯ ಸರ್ಕಾರವನ್ನು ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ.

'ಕೆಲ ವರ್ಷಗಳ ಹಿಂದೆಯೇ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ವರದಿಯಲ್ಲಿನ ವಿಚಾರಗಳ ಕುರಿತು ಅವಾಗಲೇ ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕಿತ್ತು' ಎಂದ ಹೈಕೋರ್ಟ್, 'ಸೂಕ್ತ ಕ್ರಮ ಜರುಗಿಸುವುದಕ್ಕಾಗಿ ವರದಿಯನ್ನು ಕೂಡಲೇ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಹಸ್ತಾಂತರಿಸುವಂತೆ' ನಿರ್ದೇಶನ ನೀಡಿತು.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಎ.ಕೆ.ಜಯಶಂಕರನ್ ನಂಬಿಯಾರ್ ಮತ್ತು ಸಿ.ಎಸ್.ಸುಧಾ ಅವರಿದ್ದ ವಿಶೇಷ ವಿಭಾಗೀಯ ಪೀಠ, 'ಇಷ್ಟು ದಿನಗಳ ಕಾಲ ರಾಜ್ಯ ಸರ್ಕಾರ ಸುಮ್ಮನೆ ಇದ್ದದ್ದು ಏಕೆ' ಎಂದು ಪ್ರಶ್ನಿಸಿತು.

'ಮಲಯಾಳ ಚಿತ್ರೋದ್ಯಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಈ ಮಹಿಳೆಯರು ಸಾಮಾಜಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ' ಎಂದು ಪ್ರಶ್ನಿಸಿದ ಪೀಠ, 'ಈ ವಿಚಾರ ಕುರಿತು ಸಮಗ್ರವಾದ ಶಾಸನ ರೂಪಿಸುವ ಅಗತ್ಯ ಇದೆ' ಎಂದು ಪ್ರತಿಪಾದಿಸಿದೆ.

ತಾನು ಕೈಗೊಂಡ ಕ್ರಮಗಳ ಕುರಿತು ಮುಂದಿನ ವಿಚಾರಣೆ ವೇಳೆ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ಮುಂದೂಡಿತು.

ಹೈಕೋರ್ಟ್ ಹೇಳಿದ್ದೇನು

- ನ್ಯಾ.ಹೇಮಾ ನೇತೃತ್ವದ ಸಮಿತಿ ವರದಿ ಸಲ್ಲಿಸಿ ನಾಲ್ಕು ವರ್ಷಗಳು ಕಳೆದ ನಂತರ ಸರ್ಕಾರ ಕ್ರಮಕ್ಕೆ ಮುಂದಾಗಿದೆ
- ನ್ಯಾ.ಹೇಮಾ ಸಮಿತಿ ವರದಿ ಆಧರಿಸಿ ಎಸ್‌ಐಟಿ ಕ್ರಮ ತೆಗೆದುಕೊಳ್ಳಬಹುದು. ಎಸ್‌ಐಟಿ ತೆಗೆದುಕೊಂಡ ಕ್ರಮಗಳ ಬಗ್ಗೆ ಮುಂದಿನ ವಿಚಾರಣೆ ವೇಳೆ ನ್ಯಾಯಾಲಯ ಪರಿಶೀಲನೆ ನಡೆಸುವುದು
- ಸಂತ್ರಸ್ತೆಯರ ಕುರಿತ ವಿವರಗಳನ್ನು ಎಸ್‌ಐಟಿ ಬಹಿರಂಗಪಡಿಸಬಾರದು
- ಸಂತ್ರಸ್ತೆಯರು ನೀಡಿರುವ ದೂರುಗಳ ವಿಚಾರವಾಗಿ ಎಸ್‌ಐಟಿ ಅವಸರದಲ್ಲಿ ಕ್ರಮ ಜರುಗಿಸಬಾರದು
- ಸುದ್ದಿ ಪ್ರಕಟಣೆ/ಪ್ರಸಾರ ನಿರ್ಬಂಧಿಸಿ ಆದೇಶ ಹೊರಡಿಸುವುದಿಲ್ಲ. ಈ ಕುರಿತು ಮಾಧ್ಯಮಗಳೇ ಸ್ವಯಂ ನಿಯಂತ್ರಣ ಹೊಂದಬೇಕು

ಮಾಧವಿ ಬುಚ್ ಅವರ ಹಿತಾಸಕ್ತಿ ಸಂಘರ್ಷದ ಕುರಿತು ಮುಂದುವರಿದ ಕಾಂಗ್ರೆಸ್ ಆರೋಪ

'ಮಹೀಂದ್ರಾಗೆ ಅನುಕೂಲ ಮಾಡಿದ ಸೆಬಿ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): 'ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ತಮ್ಮ ಕನ್ಸಲ್ಟೆನ್ಸಿ ಸರ್ವಿಸ್ ಸಂಸ್ಥೆ 'ಅರೋರಾ ಅಡ್ವೈಸರಿ ಪ್ರೈವೆಟ್ ಲಿ.'ನಲ್ಲಿ ಶೇ 99ರಷ್ಟು ಷೇರು ಹೊಂದಿದ್ದಾರೆ. 'ಮಹೀಂದ್ರಾ ಆ್ಯಂಡ್ ಮಹೀಂದ್ರಾ ಸಮೂಹ'ಕ್ಕೂ ತಮ್ಮ ಸಂಸ್ಥೆಯ ಮೂಲಕ ಸೇವೆ ನೀಡಿದ್ದಾರೆ. ಮಾಧವಿ ಅವರ ಪತಿ ಧವಳ್ ಬುಚ್ ಅವರು ಇದೇ ಕಂಪನಿಯಿಂದ ₹4.78 ಕೋಟಿ ಆದಾಯ ಗಳಿಸಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ.

ಸೆಬಿ ಅಧ್ಯಕ್ಷೆ ಮಾಧವಿ ಅವರ ಕುರಿತು ಕಾಂಗ್ರೆಸ್ ತನ್ನ ಸರಣಿ ಮಾಧ್ಯಮಗೋಷ್ಠಿಯನ್ನು ಮುಂದುವರಿಸಿದ್ದು, ಕಾಂಗ್ರೆಸ್‌ನ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಮಂಗಳವಾರ ಮತ್ತೊಂದು ಮಾಧ್ಯಮಗೋಷ್ಠಿಯ ಮೂಲಕ ಹಲವು ಆರೋಪಗಳನ್ನು ಮಾಡಿದರು.

'ಸೆಬಿ ಅಧ್ಯಕ್ಷೆಯಾದ ಬಳಿಕವೂ ಮಾಧವಿ ಅವರು ಅರೋರಾ ಸಂಸ್ಥೆಯಲ್ಲಿ ಶೇ 99ರಷ್ಟು ಷೇರು ಹೊಂದಿದ್ದಾರೆ ಎಂದು ಹಿಂಡೆನ್‌ಬರ್ಗ್ ಹೇಳಿತ್ತು. ಈ ಆರೋಪ ತಳ್ಳಿಹಾಕಿದ್ದ ಮಾಧವಿ, 'ನಾನು ಅಧ್ಯಕ್ಷೆಯಾದ ಬಳಿಕ ಈ ಸಂಸ್ಥೆ ನಿಷ್ಕ್ರಿಯವಾಗಿದೆ' ಎಂದಿದ್ದರು. ವಾಸ್ತವಾಂಶ ಏನೆಂದರೆ, 2024ರ ಮಾರ್ಚ್ 31ರವರೆಗಿನ ಮಾಹಿತಿಯ ಪ್ರಕಾರ ಮಾಧವಿ ಅವರು ಸಂಸ್ಥೆಯಲ್ಲಿ ಷೇರು ಹೊಂದಿದ್ದಾರೆ ಮತ್ತು ಈ ದಿನದವರೆಗೂ ಸಂಸ್ಥೆ ಚಾಲ್ತಿಯಲ್ಲಿದೆ' ಎಂದರು.

'2016-17ರಿಂದ 2023-24ರವರೆಗೆ (2017-18 ಮತ್ತು 2018-19 ಹೊರತುಪಡಿಸಿ) ಮಾಧವಿ ಅವರಿಗೆ ಅರೋರಾ ಸಂಸ್ಥೆಯ ಮೂಲಕ ₹2.95 ಕೋಟಿ ಆದಾಯ ಬಂದಿದೆ. ಈ ವರ್ಷಗಳಲ್ಲಿ ಮಾಧವಿ ಅವರು ಕೆಲವು ವರ್ಷ ಸೆಬಿಯ ಪೂರ್ಣಾವಧಿ ಸದಸ್ಯೆಯಾಗಿದ್ದರು, ನಂತರ ಸೆಬಿ ಅಧ್ಯಕ್ಷೆಯಾದರು' ಎಂದು ಹೇಳಿದರು.

'ಈ ₹2.95 ಕೋಟಿಯಲ್ಲಿ ₹2.59 ಕೋಟಿ ಆದಾಯವು ಮಹೀಂದ್ರಾ ಆ್ಯಂಡ್ ಮಹೀಂದ್ರಾ ಕಂಪನಿ ಒಂದರಿಂದಲೇ ಸಂದಿದೆ. ಧವಳ್ ಬುಚ್ ಅವರಿಗೂ ವೈಯಕ್ತಿಕವಾಗಿ ₹4.78 ಕೋಟಿಯನ್ನು ಕಂಪನಿಯು ನೀಡಿದೆ. ಈ ಎಲ್ಲ ಬೆಳವಣಿಗೆಗಳೂ ಮಾಧವಿ ಅವರು ಸೆಬಿಯ ಪೂರ್ಣಾವಧಿ ಸದಸ್ಯೆ, ಅಧ್ಯಕ್ಷೆಯಾಗಿರುವ ಕಾಲಘಟ್ಟದಲ್ಲಿ ನಡೆದಿವೆ' ಎಂದು ಆರೋಪಿಸಿದರು.

'ಮಾಧವಿ ಅವರು ಮಹೀಂದ್ರಾ ಆ್ಯಂಡ್ ಮಹೀಂದ್ರಾ ಕಂಪನಿ ಪರವಾಗಿ 5 ಆದೇಶಗಳನ್ನು ಅಥವಾ ಅನುಮೋದನೆಗಳನ್ನು ನೀಡಿದ ಅವಧಿಯಲ್ಲಿಯೇ ಧವಳ್ ಬುಚ್ ಅವರಿಗೆ ಇದೇ ಕಂಪನಿಯಿಂದ ಆದಾಯ ಸಂದಿದೆ. ಪೆಗಾಸಸ್ ಮೂಲಕ ಮಾಹಿತಿ ಸಂಗ್ರಹಿ ಸುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಧವಿ ಅವರ ಈ ಎಲ್ಲ ವ್ಯವಹಾರದ ಕುರಿತ ಮಾಹಿತಿಗಳು ಸಿಗಲಿಲ್ಲವೇ' ಎಂದು ಪವನ್ ಖೇರಾ ಪ್ರಶ್ನಿಸಿದರು.

'ಮಹೀಂದ್ರಾ ಆ್ಯಂಡ್ ಮಹೀಂದ್ರಾ ಲಿಮಿಟೆಡ್, ಡಾ. ರೆಡ್ಡೀಸ್, ಐಸಿಐಸಿಐ, ಸೆಂಬ್‌ಕಾರ್ಪ್ ಆ್ಯಂಡ್ ವಿಷ್ಣು ಲೀಸಿಂಗ್ ಆ್ಯಂಡ್ ಫೈನಾನ್ಸ್, ಪಿಡಿಲೈಟ್- ಇವು ಅರೋರಾ ಸಂಸ್ಥೆಯಿಂದ ಸೇವೆ ಪಡೆದಿವೆ' ಎಂದು ಕಾಂಗ್ರೆಸ್ ಹೇಳಿದೆ.

ತಮ್ಮ ಸ್ನೇಹಿತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಮೋದಿ–ಶಾ ಸಮಿತಿ ಮಾಧವಿ ಅವರನ್ನು ಸೆಬಿ ಅಧ್ಯಕ್ಷೆಯನ್ನಾಗಿ ನೇಮಿಸಿದೆಯೇ ಅಥವಾ ಮಾಧವಿ ಅವರ ಅಕ್ರಮ ಹಣಕಾಸಿನ ವ್ಯವಹಾರದ ಕುರಿತು ಅವರಿಗೆ ಮಾಹಿತಿ ಇರಲಿಲ್ಲವೇ? ನೋಂದಾಯಿತ ಕಂಪನಿಗಳ ಕುರಿತು ಮಾಧವಿ ಅವರು ನೀಡಿದ ಅನುಮೋದನೆಗಳು, ಆದೇಶಗಳು ಅವರ ಗ್ರಾಹಕ ಕಂಪನಿಗಳಿಂದ ಪಡೆದ ಆದಾಯದ ಆಧಾರದಲ್ಲಿ ತೆಗೆದುಕೊಂಡಿರುವುದೇ?
ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಈ ಹಿಂದಿನ ಪತ್ರಿಕಾಗೋಷ್ಠಿಗಳಲ್ಲಿ ನಾನು ಇದೊಂದು ಹಿತಾಸಕ್ತಿ ಸಂಘರ್ಷದ ವಿಚಾರ ಎಂದಿದ್ದೆ. ಈಗ ಇದೊಂದು ಭ್ರಷ್ಟಾಚಾರದ ವಿಚಾರ ಎಂದು ಹೇಳಿದ ರಷ್ಟೇ ಸಾಲುವುದಿಲ್ಲ. ಬದಲಿಗೆ ಇದೊಂದು ಕ್ರಿಮಿನಲ್ ಸಂಚು. ಉದ್ದೇಶ ಪೂರ್ವಕವಾಗಿಯೇ ಹಲವು ಮಾಹಿತಿಗಳನ್ನು ಮಾಧವಿ ಅವರು ಮುಚ್ಚಿಟ್ಟಿದ್ದಾರೆ. ಉದ್ದೇಶಪೂರ್ವಕವಾಗಿಯೇ ಅವರು ಹಲವು ಸುಳ್ಳು ಹೇಳಿದ್ದಾರೆ
ಪವನ್ ಖೇರಾ, ಕಾಂಗ್ರೆಸ್‌ನ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ

ಆರೋಪ ಸುಳ್ಳು : ಮಹೀಂದ್ರಾ ಕಂಪನಿ

ನಮ್ಮ ಕಂಪನಿಗೆ ಅನುಕೂಲ ಮಾಡಿಕೊಡಿ ಎಂದು ನಾವು ಸೆಬಿಗೆ ಎಂದಿಗೂ ಮನವಿ ಮಾಡಿಲ್ಲ. ಪೂರೈಕೆ ವ್ಯವಸ್ಥೆಯಲ್ಲಿ ಧವಳ್ ಬುಚ್ ಅವರಿಗೆ ಇರುವ ಪರಿಣತಿಯ ಕಾರಣಕ್ಕಾಗಿ ಅವರನ್ನು 2019ರಲ್ಲಿ ನೇಮಕ ಮಾಡಿಕೊಂಡೆವು. ಮಾಧವಿ ಅವರು ಸೆಬಿಯ ಅಧ್ಯಕ್ಷೆಯಾಗುವ ಮೂರು ವರ್ಷ ಮೊದಲೇ ಧವಳ್ ಅವರು ನಮ್ಮ ಕಂಪನಿ ಸೇರಿಕೊಂಡಿದ್ದರು. ಅವರ ಕೆಲಸಕ್ಕಾಗಿ ನಾವು ಅವರಿಗೆ ಸಂಬಳ ನೀಡಿದ್ದೇವೆಯಷ್ಟೇ. ಕಂಪನಿ ಪರವಾಗಿ ಸೆಬಿಯು ಐದು ಅನುಮೋದನೆಗಳನ್ನು ನೀಡಿದೆ ಎಂದು ಆರೋಪಿಸಲಾಗಿದೆ. ಆದರೆ, ಇವೆಲ್ಲವೂ ಸುಳ್ಳು. ಐದರಲ್ಲಿ ಮೂರು ಅನುಮೋದನೆಗಳು ನಮ್ಮ ಕಂಪನಿಗೆ ಅಥವಾ ನಮ್ಮ ಸಮೂಹದ ಇತರೆ ಕಂಪನಿಗಳಿಗೆ ಸಂಬಂಧಿಸಿದವಲ್ಲ. ಸೆಬಿ ನೀಡಿದ ಒಂದು ಅನುಮೋದನೆಯು 2018ರ ಮಾರ್ಚ್‌ನಲ್ಲಿ ಬಂದಿತು. ಆಗಿನ್ನು ಧವಳ್ ಅವರು ನಮ್ಮ ಕಂಪನಿಯೊಂದಿಗೆ ಇರಲೇ ಇಲ್ಲ
ಮಹೀಂದ್ರಾ ಆ್ಯಂಡ್ ಮಹೀಂದ್ರಾ ಸಮೂಹ

'ಸಾರ್ವಜನಿಕ ಲೆಕ್ಕ ಸಮಿತಿಗೆ ವಿಚಾರಣೆ ನಡೆಸುವ ಅಧಿಕಾರವಿಲ್ಲ'

'ಸಾರ್ವಜನಿಕ ಲೆಕ್ಕ ಸಮಿತಿಯ (ಪಿಎಸಿ) ಮುಂದೆ ವಿಚಾರಣೆಗೆ ಸೆಬಿ ಅಧ್ಯಕ್ಷೆ ಮಾಧವಿ ಅವರನ್ನು ಕರೆಸಬೇಕು' ಎಂದು ಟಿಎಂಸಿ ಸಂಸದ ಸೌಗತ ರಾಯ್ ಅವರು ಮಂಗಳವಾರ ಆಗ್ರಹಿಸಿದರು. ಆದರೆ, ಬಿಜೆಪಿ ನಾಯಕ ನಿಶಿಕಾಂತ್ ದುಬೆ ಅವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು.

ಜಲ ಜೀವನ ಮಿಷನ್‌ನ ಕಾರ್ಯಸಾಧನೆ ಕುರಿತ ಲೆಕ್ಕಪರಿಶೋಧನಾ ಸಭೆಯಲ್ಲಿ ಸೌಗತ ರಾಯ್ ಅವರು ಈ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ದುಬೆ, 'ಸಿಎಜಿಯ ಪ್ರಧಾನ ಲೆಕ್ಕಪರಿಶೋಧಕನಿಗೇ ಸೆಬಿಯ ಲೆಕ್ಕಪರಿಶೋಧನೆ ಮಾಡಲು ಅಧಿಕಾರವಿಲ್ಲ. ಹೀಗೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕು. ಆದ್ದರಿಂದ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೂ ಸೆಬಿಯ ಅಧಿಕಾರಿಗಳಿಗೆ ಸಮಿತಿಯ ಮುಂದೆ ಹಾಜರಾಗುವಂತೆ ನೋಟಿಸ್ ನೀಡುವ ಅಧಿಕಾರವಿಲ್ಲ. ಒಂದೊಮ್ಮೆ ಸರ್ಕಾರ ಸೆಬಿಗೆ ಒದಗಿಸಿದ ಹಣದಲ್ಲಿ ಅವ್ಯವಹಾರವಾಗಿದ್ದಲ್ಲಿ, ಇದಕ್ಕೆ ಸೂಕ್ತ ಸಾಕ್ಷ್ಯಗಳಿದ್ದಲ್ಲಿ ಮಾತ್ರವೇ ಸಮಿತಿಯು ಸೆಬಿ ಅಧಿಕಾರಿಗಳಿಗೆ ನೋಟಿಸ್ ನೀಡಬಹುದು' ಎಂದರು.

ಸಂಕ್ಷಿಪ್ತ ಸುದ್ದಿ

11 ವಂದೇ ಭಾರತ್ ರೈಲುಗಳಿಗೆ ಸೆ.15ರಂದು ಚಾಲನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ವಂದೇ ಭಾರತ್ ಎಕ್ಸ್‌ಪ್ರೆಸ್‌ನ 11 ರೈಲುಗಳಿಗೆ ಸೆ.15ರಂದು ಜೆಮ್‌ಶೆಡ್‌ಪುರದಲ್ಲಿ ಚಾಲನೆ ನೀಡಲಿದ್ದಾರೆ.

ಹುಬ್ಬಳ್ಳಿ–ಪುಣೆ, ಪುಣೆ- ನಾಗ್ಪುರ, ಗಯಾ–ಹೌರಾ, ಬಾಗಲ್‌ಪುರ–ಹೌರಾ, ನಾಗ್ಪುರ–ಸಿಕಂದರಾಬಾದ್, ಆಗ್ರಾ–ಬನಾರಸ್, ರಾಯಪುರ–ವಿಶಾಖಪಟ್ಟಣ, ಟಾಟಾನಗರ–ಪಟ್ನಾ. ದಿಯೋಘರ್–ವಾರಾಣಸಿ ಮತ್ತು ಟಾಟಾನಗರ–ಬೆರ್ಹಾಂಪುರ (ಒಡಿಶಾ) ಮಾರ್ಗಗಳಲ್ಲಿ ನೂತನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಸಂಚರಿಸಲಿವೆ.

ಇದೇ ವೇಳೆ, ವಾರಾಣಸಿ–ದೆಹಲಿ ಮಾರ್ಗದಲ್ಲಿ ಪ್ರಸ್ತುತ ಸಂಚರಿಸುತ್ತಿರುವ 16 ಬೋಗಿಗಳ ವಂದೇಭಾರತ್ ರೈಲಿನ ಬದಲಾಗಿ 20 ಬೋಗಿಗಳ ನೂತನ ವಂದೇ ಭಾರತ್ ರೈಲಿಗೂ ಮೋದಿ ಅವರು ಚಾಲನೆ ನೀಡಲಿದ್ದಾರೆ.

ಒಟಿಟಿ ಕಾರ್ಯಕ್ರಮ: ಪಿಐಎಲ್



ನವದೆಹಲಿ (ಪಿಟಿಐ): ಒಟಿಟಿ ಮತ್ತು ಇತರ ಆನ್‌ಲೈನ್ ವೇದಿಕೆಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ವಿಡಿಯೊಗಳ ನಿಯಂತ್ರಣಕ್ಕೆ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಲಾಗಿದೆ.

'ಚಲನಚಿತ್ರಗಳ ಪ್ರಸಾರದ ಕುರಿತು ನಿರ್ಧಾರ ತೆಗೆದುಕೊಳ್ಳಲು ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಇದೆ. ಒಟಿಟಿಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಿಗೆ ಪ್ರಮಾಣಪತ್ರ ನೀಡಲು ಅಂತಹ ಯಾವುದೇ ಪ್ರಾಧಿಕಾರ ಇಲ್ಲ. ಆದ್ದರಿಂದ ಒಟಿಟಿಯಲ್ಲಿ ವಿವಾದಾತ್ಮಕ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ತೋರಿಸಲಾಗುತ್ತಿದೆ' ಎಂದು ವಕೀಲರಾದ ಶಶಾಂಕ್ ಶೇಖರ್ ಮತ್ತು ಅಪೂರ್ವ ಅರ್ಹತಿಯಾ ಸಲ್ಲಿಸಿರುವ ಪಿಐಎಲ್‌ನಲ್ಲಿ ಹೇಳಿದ್ದಾರೆ.

'ಭಾರತದಲ್ಲಿ ಆನ್‌ಲೈನ್ ವೇದಿಕೆಗಳಲ್ಲಿ ವೀಕ್ಷಿಸಲು ಲಭ್ಯವಿರುವ ವಿಡಿಯೊಗಳನ್ನು ಪರಿಶೀಲಿಸಲು ಮತ್ತು ಒಟಿಟಿಯಲ್ಲಿ ಏನು ಪ್ರಸಾರ ಮಾಡಬೇಕು, ಮಾಡಬಾರದು ಎಂಬುದನ್ನು ನಿರ್ಧರಿಸಲು 'ಸೆಂಟ್ರಲ್ ಬೋರ್ಡ್ ಫಾರ್ ರೆಗ್ಯುಲೇಷನ್ ಆ್ಯಂಡ್ ಮಾನಿಟರಿಂಗ್ ಆಫ್ ಆನ್‌ಲೈನ್ ವಿಡಿಯೊ ಕಂಟೆಂಟ್ಸ್' ಹೆಸರಿನ ಮಂಡಳಿ ಸ್ಥಾಪಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದಾರೆ.

ಲೈಂಗಿಕ ದೌರ್ಜನ್ಯ; ವಿಂಗ್ ಕಮಾಂಡರ್ ವಿರುದ್ಧ ಆರೋಪ

ಶ್ರೀನಗರ: ಭಾರತೀಯ ವಾಯುಪಡೆಯ ಮಹಿಳಾ ಅಧಿಕಾರಿಯೊಬ್ಬರು ಶ್ರೀನಗರ ವಾಯುನೆಲೆಯ ವಿಂಗ್ ಕಮಾಂಡರ್ ವಿರುದ್ಧ ಲೈಂಗಿಕ ದೌರ್ಜನ್ಯದ ಗಂಭೀರ ಆರೋಪ ಮಾಡಿದ್ದು, ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ವಿಂಗ್ ಕಮಾಂಡರ್ ಪಿ.ಕೆ. ಶೆಹರವಾತ್ ಅವರು ಅತ್ಯಾಚಾರವೆಸಗಿ, ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಮಹಿಳಾ ಅಧಿಕಾರಿ ಆರೋಪಿಸಿದ್ದಾರೆ. ಅವರು ನೀಡಿದ ದೂರು ಆಧರಿಸಿ ವಿಂಗ್ ಕಮಾಂಡರ್ ವಿರುದ್ಧ ಐಪಿಸಿ ಸೆಕ್ಷನ್ 376 -2 (ಮಹಿಳೆ ಮೇಲೆ ಬಲವಂತದಿಂದ ನಿರಂತರ ಅತ್ಯಾಚಾರ) ಅಡಿಯಲ್ಲಿ ಬುದ್ಗಾಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'2023ರ ಡಿಸೆಂಬರ್ 31ರಂದು ಅಧಿಕಾರಿಗಳ ಮೆಸ್‌ನಲ್ಲಿ ಆಯೋಜಿಸಿದ್ದ ಹೊಸ ವರ್ಷದ ಔತಣ ಕೂಟದಲ್ಲಿ ಈ ಘಟನೆ ನಡೆದಿತ್ತು' ಎಂದು ಸ್ಥಳೀಯ ಸುದ್ದಿಸಂಸ್ಥೆ 'ಕೆಡಿಸಿ' ವರದಿ ಮಾಡಿದೆ.

'ಉಡುಗೊರೆ ಸ್ವೀಕರಿಸುವಂತೆ ತನ್ನ ಕೊಠಡಿಗೆ ಕರೆಸಿಕೊಂಡಿದ್ದ ಅಧಿಕಾರಿಯು ಲೈಂಗಿಕ ದೌರ್ಜನ್ಯ ಎಸಗಿದ್ದರು. ಇದಕ್ಕೆ ಸಾಕಷ್ಟು ಆಕ್ಷೇಪ ವ್ಯಕ್ತಪಡಿಸಿದರೂ, ಬಲವಂತವಾಗಿ ಕಿರುಕುಳ ನೀಡಿದರು' ಎಂದು ಮಹಿಳಾ ಅಧಿಕಾರಿ ಆರೋಪಿಸಿದ್ದಾರೆ.

ತರೂರ್ ವಿರುದ್ಧದ ಪ್ರಕರಣಕ್ಕೆ ತಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ 'ಶಿವಲಿಂಗದ ಮೇಲಿನ ಚೇಳು' ಎಂಬ ಹೇಳಿಕೆ ನೀಡಿದ್ದ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರ ವಿರುದ್ಧ ವಿಚಾರಣಾ ನ್ಯಾಯಾಲಯವೊಂದರಲ್ಲಿ ನಡೆಯುತ್ತಿರುವ ಮಾನನಷ್ಟ ಮೊಕದ್ದಮೆಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ. ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಆರ್. ಮಹಾದೇವನ್ ಅವರು ಇದ್ದ ವಿಭಾಗೀಯ ಪೀಠವು ದೆಹಲಿ ಪೊಲೀಸರಿಗೆ ಹಾಗೂ ದೂರುದಾರ, ಬಿಜೆಪಿ ಮುಖಂಡ ರಾಜೀವ್ ಬಬ್ಬರ್ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿದೆ.

ತರೂರ್ ಅವರು ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ 'ಮೋದಿ ಅವರು ಶಿವಲಿಂಗದ ಮೇಲೆ ಕುಳಿತಿರುವ ಚೇಳು ಇದ್ದಂತೆ' ಎಂದು ಹೇಳಿದ್ದರು ಎನ್ನಲಾಗಿದೆ.

ಭೂಕುಸಿತ: ಮೃತರ ಸಂಖ್ಯೆ 5ಕ್ಕೆ ಏರಿಕೆ

ರುದ್ರಪ್ರಯಾಗ (ಉತ್ತರಾಖಂಡ) (ಪಿಟಿಐ): ಕೇದಾರನಾಥ ಹೆದ್ದಾರಿಯಲ್ಲಿ ಸೋಮವಾರ ರಾತ್ರಿ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿ ಮೃತಪಟ್ಟವರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಮೂವರು ಮಹಿಳೆಯರು ಸೇರಿದಂತೆ ನಾಲ್ಕು ಯಾತ್ರಾರ್ಥಿಗಳ ಮೃತದೇಹಗಳನ್ನು ಭಗ್ನಾವಶೇಷಗಳಿಂದ ಮಂಗಳವಾರ ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸೋನ್‌ಪ್ರಯಾಗ ಮತ್ತು ಗೌರಿಕುಂಡದ ನಡುವಿನ ಐದು ಕಿ.ಮೀ ಪ್ರದೇಶದಲ್ಲಿ ಸೋಮವಾರ ರಾತ್ರಿ 7.20ರ ಸುಮಾರಿಗೆ ಭೂಕುಸಿತ ಸಂಭವಿಸಿತ್ತು. ಈ ಸಂದರ್ಭದಲ್ಲಿ ಯಾತ್ರಾರ್ಥಿಗಳ ಗುಂಪೊಂದು ಕೇದಾರನಾಥದಿಂದ ಕಾಲ್ನಡಿಗೆಯ ಮೂಲಕ ವಾಪಸಾಗುತ್ತಿತ್ತು.

ಸುಪ್ರೀಂ ಕೋರ್ಟ್ ನಿರ್ದೇಶನ ಧಿಕ್ಕರಿಸಿದ ಕಿರಿಯ ವೈದ್ಯರು

ಪ್ರತಿಭಟನೆನಿರತರನ್ನು ಮಾತುಕತೆಗೆ ಆಹ್ವಾನಿಸಿದ ಮಮತಾ

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಘಟನೆ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರು ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಧಿಕ್ಕರಿಸಿದ್ದಾರೆ.

'ಪ್ರತಿಭಟನೆನಿರತ ವೈದ್ಯರು ಮಂಗಳವಾರ ಸಂಜೆ 5ರ ಒಳಗಾಗಿ ಕರ್ತವ್ಯಕ್ಕೆ ಮರಳಬೇಕು. ಇಲ್ಲದಿದ್ದರೆ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಎಚ್ಚರಿಸಿತ್ತು. ಆದರೆ ಮಂಗಳವಾರ ಸಂಜೆ 5ರ ಬಳಿಕವೂ ಕಿರಿಯ ವೈದ್ಯರು ಪ್ರತಿಭಟನೆ ಮುಂದುವರಿಸಿದರು. ತಮ್ಮ ಎಲ್ಲ ಬೇಡಿಕೆಗಳು ಈಡೇರುವ ಮತ್ತು ಸಂತ್ರಸ್ತೆಗೆ ನ್ಯಾಯ ದೊರೆಯುವವರೆಗೂ ಮುಷ್ಕರ ಕೈಬಿಡುವುದಿಲ್ಲ ಎಂದು ಪಟ್ಟುಹಿಡಿದಿದ್ದಾರೆ.

ಇದೇ ವೇಳೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರತಿಭಟನನಿರತ ವೈದ್ಯರನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ.'ನಿಮ್ಮ ಸಣ್ಣ ನಿಯೋಗವು ಸರ್ಕಾರದ ಪ್ರತಿನಿಧಿಗಳೊಂದಿಗೆ ಮಾತನಾಡಲು ಸಚಿವಾಲಯಕ್ಕೆ ಬರಬಹುದು' ಎಂದು ಆರೋಗ್ಯ ಇಲಾಖೆ ಕಾರ್ಯದರ್ಶಿ ಎನ್. ಎಸ್.ನಿಗಮ್ ಅವರು ಇ-ಮೇಲ್ ಮೂಲಕ ವೈದ್ಯರಿಗೆ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕಿರಿಯ ವೈದ್ಯರೊಬ್ಬರು, 'ನಿಗಮ್ ಅವರ ರಾಜೀನಾಮೆಗೆ ನಾವು ಆಗ್ರಹಿಸುತ್ತಾ ಬಂದಿದ್ದೇವೆ. ಇದೀಗ ಅವರಿಂದ ಇ-ಮೇಲ್ ಕಳುಹಿಸಿ ನಮಗೆ ಅವಮಾನ ಮಾಡಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕೋಲ್ಕತ್ತ ಪೊಲೀಸ್ ಆಯುಕ್ತರು, ಆರೋಗ್ಯ ಇಲಾಖೆ ಕಾರ್ಯದರ್ಶಿ, ಆರೋಗ್ಯ ಸೇವೆಗಳ ನಿರ್ದೇಶಕರು ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರನ್ನು ಮಂಗಳವಾರ ಸಂಜೆ 5ರ ಒಳಗಾಗಿ ಅಮಾನತು ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಂಡಿದ್ದೆವು' ಎಂದು ಮುಷ್ಕರ ನಿರತ ವೈದ್ಯರು ಹೇಳಿದ್ದಾರೆ.

51 ವೈದ್ಯರಿಗೆ ನೋಟಿಸ್: ಭಯದ ವಾತಾವರಣ ಸೃಷ್ಟಿಸಿದ ಮತ್ತು ಸಂಸ್ಥೆಯ ಪ್ರಜಾಸತ್ತಾತ್ಮಕ ವಾತಾವರಣಕ್ಕೆ ಧಕ್ಕೆ ತಂದ ಆರೋಪದಲ್ಲಿ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯು ತನ್ನ 51 ವೈದ್ಯರಿಗೆ ನೋಟಿಸ್ ಜಾರಿಗೊಳಿಸಿದ್ದು, ಸೆಪ್ಟೆಂಬರ್ 11 ರಂದು ತನಿಖಾ ಸಮಿತಿ ಮುಂದೆ ಹಾಜರಾಗಲು ಸೂಚಿಸಿದೆ.



ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ (ಮಧ್ಯದಲ್ಲಿ) ಅವರನ್ನು ಸಿಬಿಐ ಅಧಿಕಾರಿಗಳು ಮಂಗಳವಾರ ಕೋಲ್ಕತ್ತದ ನ್ಯಾಯಾಲಯಕ್ಕೆ ಹಾಜರುಪಡಿಸಿದರು —ಪಿಟಿಐ ಚಿತ್ರ

ಘೋಷ್‌ಗೆ 23ರ ವರೆಗೆ ನ್ಯಾಯಾಂಗ ಬಂಧನ

ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅಕ್ರಮ ಪ್ರಕರಣದಲ್ಲಿ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರಿಗೆ ಸಿಬಿಐ ವಿಶೇಷ ನ್ಯಾಯಾಲಯ ಸೆಪ್ಟೆಂಬರ್ 23ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ. ಘೋಷ್ ಅವರ ಭದ್ರತಾ ಸಿಬ್ಬಂದಿ ಅಫ್ಸರ್ ಅಲಿ ಮತ್ತು ಇತರ ಇಬ್ಬರು ಆಪ್ತರಾದ ವಿಪ್ಲವ್ ಸಿನ್ಹಾ ಹಾಗೂ ಸುಮನ್ ಹಜ್ರಾ ಅವರಿಗೂ 23ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಯೆಚೂರಿ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ



ಸೀತಾರಾಂ ಯೆಚೂರಿ

ನವದೆಹಲಿ: ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಅವರಿಗೆ ಕೃತಕ ಉಸಿರಾಟದ ವ್ಯವಸ್ಥೆ ಕಲ್ಪಿಸಲಾಗಿದೆ.

'ನಿಮೋನಿಯಾ ರೀತಿಯ ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ 72 ವರ್ಷದ ಯೆಚೂರಿ ಅವರನ್ನು ಆಗಸ್ಟ್ 19ರಂದು ದೆಹಲಿಯ ಏಮ್ಸ್‌ಗೆ ದಾಖಲಿಸಲಾಗಿತ್ತು. ತಜ್ಞ ವೈದ್ಯರ ತಂಡವು ಯೆಚೂರಿ ಅವರಿಗೆ ಚಿಕಿತ್ಸೆ ನೀಡುತ್ತಿದೆ' ಎಂದು ಪಕ್ಷ ಮಂಗಳವಾರ ಮಾಹಿತಿ ನೀಡಿದೆ.

ಜಮ್ಮು ಮತ್ತು ಕಾಶ್ಮೀರ: ಸಂಸದ ರಶೀದ್‌ಗೆ ಮಧ್ಯಂತರ ಜಾಮೀನು

ಬದಲಾಗಲಿದೆಯೇ ರಾಜಕೀಯ ಲೆಕ್ಕಾಚಾರ?

ಪ್ರಜಾವಾಣಿ ವಾರ್ತೆ

ಶ್ರೀನಗರ: ಲೋಕಸಭಾ ಸದಸ್ಯ ಎಂಜಿನಿಯರ್ ರಶೀದ್ ಅವರಿಗೆ ದೆಹಲಿ ನ್ಯಾಯಾಲಯವು ಮಧ್ಯಂತರ ಜಾಮೀನು ನೀಡಿರುವುದು, ಮುಂಬರುವ ಜಮ್ಮು ಮತ್ತು ಕಾಶ್ಮೀರ ವಿಧಾನ ಸಭಾ ಚುನಾವಣೆಯ ಲೆಕ್ಕಾಚಾರಗಳನ್ನು ಬದಲಿಸಲಿದೆ ಎಂದು ವಿಶ್ಲೇಷಿಸಲಾಗಿದೆ.

ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ ಬಂಧನಕ್ಕೊಳಗಾಗಿರುವ ರಶೀದ್ 2019ರಿಂದ ತಿಹಾರ್ ಜೈಲಿನಲ್ಲಿದ್ದಾರೆ. ದೆಹಲಿಯ ನ್ಯಾಯಾಲಯ ಅಕ್ಟೋಬರ್ 2ರ ವರೆಗೆ ಮಧ್ಯಂತರ ಜಾಮೀನು ನೀಡಿದ್ದರಿಂದ ಅವರು ಮಂಗಳವಾರ ಜೈಲಿನಿಂದ ಹೊರಬಂದರು.

ಅವಾಮಿ ಇತ್ತೆಹಾದ್ ಪಾರ್ಟಿಯ (ಎಐಪಿ) ಪ್ರಭಾವಿ ನಾಯಕರಾಗಿರುವ ರಶೀದ್ ಅವರು ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಉತ್ತರ ಕಾಶ್ಮೀರದ ಬಾರಾಮುಲ್ಲಾ ಕ್ಷೇತ್ರದಿಂದ ಸ್ಪರ್ಧಿಸಿ, ಮಾಜಿ ಮುಖ್ಯಮಂತ್ರಿಯೂ ಆಗಿರುವ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಅವರನ್ನು ಸೋಲಿಸಿದ್ದರು. ಎರಡು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಸಾಧಿಸಿದ ಗೆಲುವು, ಅವರ ಪ್ರಭಾವ ಏನೆಂಬುದನ್ನು ತೋರಿಸಿಕೊಟ್ಟಿತ್ತು.

ವಿಧಾನಸಭಾ ಚುನಾವಣೆಯ ಮತದಾನಕ್ಕೆ ಕೆಲವೇ ದಿನಗಳಿರುವಾಗ ರಶೀದ್ ಅವರು ಜೈಲಿನಿಂದ ಹೊರಬಂದಿರುವುದು ರಾಜಕೀಯ ಸಮೀಕರಣದ ಮೇಲೆ ಗಮನಾರ್ಹ ಪರಿಣಾಮ ಬೀರಲಿದೆ ಎಂದು ರಾಜಕೀಯ ವಿಶ್ಲೇಷಕ ಜಾವಿದ್ ತ್ರಾಲಿ ಹೇಳಿದ್ದಾರೆ.

'ಪ್ರಚಾರ ಕಣದಲ್ಲಿ ಅವರ ಉಪಸ್ಥಿತಿಯು ಬೆಂಬಲಿಗರಿಗೆ ಹೆಚ್ಚಿನ ಶಕ್ತಿ ತುಂಬಲಿದೆಯಲ್ಲದೆ, ಮತದಾರರ ಕ್ರೋಡೀಕರಣಕ್ಕೆ ಕಾರಣವಾಗಬಹುದು. ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿಯಂತಹ ಪ್ರಮುಖ ಪಕ್ಷಗಳ ಪ್ರಾಬಲ್ಯಕ್ಕೆ ಅಡ್ಡಿಯಾಗಲೂಬಹುದು' ಎಂದಿದ್ದಾರೆ.

ಕಾಶ್ಮೀರದಲ್ಲಿ ಭದ್ರತಾ ಪಡೆಗಳಿಂದ ನಡೆದಿದೆ ಎನ್ನಲಾದ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ನಿರಂತರ ಧ್ವನಿಯೆತ್ತಿದ್ದ ರಶೀದ್ ಅವರು ಕೆಲ ವರ್ಷಗಳಿಂದ ಜೈಲಿನಲ್ಲಿದ್ದರೂ, ಜನ ಬೆಂಬಲವನ್ನು ಉಳಿಸಿಕೊಂಡಿದ್ದಾರೆ. 'ಜೈಲು ಮುಕ್ತ ಜಮ್ಮು ಮತ್ತು ಕಾಶ್ಮೀರ' ಹಾಗೂ ಯುಎಪಿಎ ರದ್ದತಿಯ ಭರವಸೆಯನ್ನು ಎಐಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವುದರಿಂದ ಯುವ ಮತದಾರರು ಪಕ್ಷವನ್ನು ಬೆಂಬಲಿಸುವ ಸಾಧ್ಯತೆಯಿದೆ.

ಎಐಪಿ ನಾಯಕ ಮತ್ತು ಮಾಜಿ ಶಾಸಕ ಶೋಯೆಬ್ ಲೋನ್ ಅವರು ರಶೀದ್ ಅವರ ಮಧ್ಯಂತರ ಜಾಮೀನು ಮುಂಬರುವ ಚುನಾವಣೆಯಲ್ಲಿ 'ಗೇಮ್- ಚೇಂಜರ್' ಆಗಲಿದೆ ಎಂದು ಬಣ್ಣಿಸಿದ್ದಾರೆ. 'ಹುಲಿ ಮರಳಿ ಬಂದಿದೆ. ಅವರಿಗೆ ಅದ್ದೂರಿ ಸ್ವಾಗತ ನೀಡಲಾಗುವುದು. ಒಮ್ಮೆ ಅವರು ಪ್ರಚಾರ ಕಣಕ್ಕಿಳಿದರೆ, ಇಡೀ ಚುನಾವಣಾ ವಾತಾವರಣ ಬದಲಾಗುವುದನ್ನು ನೀವು ನೋಡುವಿರಿ' ಎಂದಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ

ವಿನೇಶ್ ವಿರುದ್ಧ ಯೋಗೇಶ್ ಕಣಕ್ಕೆ

ಚಂಡೀಗಢ (ಎಎಪಿ): ಬಿಜೆಪಿಯು ಹರಿಯಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 21 ಅಭ್ಯರ್ಥಿಗಳನ್ನು ಒಳಗೊಂಡ ಎರಡನೇ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಜುಲಾನಾ ಕ್ಷೇತ್ರದಲ್ಲಿ ಕುಸ್ತಿಪಟು ವಿನೇಶ್ ಫೋಗಟ್ ಅವರ ವಿರುದ್ಧ ಕ್ಯಾ.ಯೋಗೇಶ್ ಬೈರಾಗಿ ಅವರನ್ನು ಬಿಜೆಪಿಯು ಕಣಕ್ಕೆ ಇಳಿಸಿದೆ. ಮಾಜಿ ಸಚಿವರಾದ ಕೃಷ್ಣ ಕುಮಾರ್ ಬೇಡಿ ಮತ್ತು ಮನೀಶ್ ಗ್ರೋವರ್ ಮತ್ತು ಓಂ ಪ್ರಕಾಶ್ ಯಾದವ್ ಅವರನ್ನು ಕ್ರಮವಾಗಿ ನರವಾನಾ, ರೋಹ್ಟಕ್ ಮತ್ತು ನಾರನೌಲ್ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ವಿನೇಶ್ ಈ ಹಂತದಲ್ಲಿ ರಾಜಕೀಯಕ್ಕೆ ಸೇರಬಾರದಿತ್ತು. ಆಕೆ 2028ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲಬೇಕು ಎಂಬುದು ನನ್ನ ಆಸೆ
ಮಹಾವೀರ್ ಫೋಗಟ್, ವಿನೇಶ್ ಅವರ ಚಿಕ್ಕಪ್ಪ, ಕುಸ್ತಿ ಕೋಚ್


ಹರಿಯಾಣ: ಎಎಪಿ 2ನೇ ಪಟ್ಟಿ ಬಿಡುಗಡೆ

ನವದೆಹಲಿ: ಆಮ್ ಆದ್ಮಿ ಪಕ್ಷವು (ಎಎಪಿ) ಹರಿಯಾಣ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಒಂಬತ್ತು ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಕಾಂಗ್ರೆಸ್- ಎಎಪಿ ಮೈತ್ರಿ ಮಾತುಕತೆ ವಿಫಲವಾದ ನಂತರ ಎರಡನೇ ಪಟ್ಟಿಯನ್ನೂ ಬಿಡುಗಡೆ ಮಾಡಿದೆ.

ಸೋಮವಾರ ಪಕ್ಷವು 20 ಅಭ್ಯರ್ಥಿಗಳನ್ನು ಒಳಗೊಂಡ ಮೊದಲ ಪಟ್ಟಿ ಬಿಡುಗಡೆ ಮಾಡಿತ್ತು. ಇದರೊಂದಿಗೆ ಕಾಂಗ್ರೆಸ್ ಈಗಾಗಲೇ ಅಭ್ಯರ್ಥಿಗಳನ್ನು ಘೋಷಿಸಿದ 14 ಕ್ಷೇತ್ರಗಳಲ್ಲಿಯೂ ಎಎಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಷೇರುಪೇಟೆ ವಹಿವಾಟು 361



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,936
ಇಂದಿನ ಅಂತ್ಯ	25,041
▲	104
ದಿನದ ಗರಿಷ್ಠ	25,130

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹227
ಆರ್‌ಎಸ್‌ಎಸ್-5	₹221
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹206

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹545
12 ಕ್ಕೆ	₹75
ಮೈಸೂರು 100ಕ್ಕೆ	₹550

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹395-551
ದ್ವಿತಳಿ (ಬಿ.ವಿ)	₹380-755

ಎಫ್‌ಎಟಿಎಫ್ ಷರತ್ತು ಪಾಲಿಸಿದ ಭಾರತ

ನವದೆಹಲಿ (ಪಿಟಿಐ): ಉಗ್ರರಿಗೆ ಹಣಕಾಸಿನ ನೆರವು ಹಾಗೂ ಹಣ ಅಕ್ರಮ ವರ್ಗಾವಣೆಗೆ ಕಡಿವಾಣ ಹಾಕುವಲ್ಲಿ ಅಮೆರಿಕ, ಜಪಾನ್, ಚೀನಾ ಮತ್ತು ಜರ್ಮನಿ ದಿಟ್ಟ ಕ್ರಮಕೈಗೊಂಡಿವೆ. ಭಾರತ ಕೂಡ ಇದಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನೀತಿ ರೂಪಿಸಿದ್ದು, ಈ ರಾಷ್ಟ್ರಗಳ ಪಟ್ಟಿಗೆ ಸೇರ್ಪಡೆಯಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ, ಭಯೋತ್ಪಾದಕರಿಗೆ ಹಣಕಾಸು ಪೂರೈಕೆಗೆ ತಡೆ ಮತ್ತು ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಸಮಗ್ರತೆಗೆ ಬೆದರಿಕೆ ಒಡ್ಡುವ ಕೃತ್ಯ ತಡೆಯುವ ಕೆಲಸವನ್ನು ಅಂತರರಾಷ್ಟ್ರೀಯ ಕಾರ್ಯಪಡೆ (ಎಫ್‌ಎಟಿಎಫ್) ಮಾಡುತ್ತದೆ.

ಸಿಂಗಪುರದಲ್ಲಿ ಜೂನ್‌ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಭಾರತ ಸಲ್ಲಿಸಿದ್ದ ಪರಸ್ಪರ ಮೌಲ್ಯಮಾಪನ ವರದಿಯನ್ನು ಈ ಕಾರ್ಯಪಡೆಯು ಸ್ವೀಕರಿಸಿದ್ದು, ಭಾರತವನ್ನು 'ರೆಗ್ಯುಲರ್ ಫಾಲೋಅಪ್' ವರ್ಗಕ್ಕೆ ಸೇರ್ಪಡೆಗೊಳಿಸಿದೆ. ಕಾರ್ಯಪಡೆಯು ಸೆಪ್ಟೆಂಬರ್ 19ರಂದು ಈ ವರದಿಯನ್ನು ಬಿಡುಗಡೆ ಮಾಡಲಿದೆ.

'ರೆಗ್ಯುಲರ್ ಫಾಲೋಅಪ್' ವರ್ಗಕ್ಕೆ ಸೇರ್ಪಡೆಯಾಗಲು ಪ್ರತಿ ಮೂರು ವರ್ಷಕ್ಕೊಮ್ಮೆ ದೇಶವೊಂದು ಸ್ವಯಂಪ್ರೇರಿತವಾಗಿ ವರದಿ ಸಲ್ಲಿಸಬೇಕಿದೆ. ಈ ವರದಿಯನ್ನು ಕಾರ್ಯಪಡೆಯು ಮೌಲ್ಯಮಾಪನ ಮಾಡಲಿದೆ.'ಅಂತರರಾಷ್ಟ್ರೀಯ ಕಾರ್ಯಪಡೆ ವಿಧಿಸಿರುವ 40 ಷರತ್ತುಗಳ ಪೈಕಿ ಭಾರತವು 37 ಷರತ್ತುಗಳನ್ನು ಪೂರೈಸಿದೆ' ಎಂದು ಮೂಲಗಳು ತಿಳಿಸಿವೆ.

ಉಗ್ರರಿಗೆ ಹಣಕಾಸು ನೆರವು ನೀಡುವುದನ್ನು ತಡೆಗಟ್ಟುವಲ್ಲಿ ವಿಫಲವಾಗುವ ದೇಶಗಳನ್ನು ಕಪ್ಪುಪಟ್ಟಿಗೆ ಸೇರ್ಪಡೆಗೊಳಿಸಲಾಗುತ್ತದೆ.

ಸಂಕ್ಷಿಪ್ತ ಸುದ್ದಿ

120 ಜಿಎಸ್‌ಕೆ ಬಯೊಮೆಟ್ರಿಕ್ ಕೇಂದ್ರ ಕಾರ್ಯಾರಂಭ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯಿಂದ ರಾಜ್ಯದಲ್ಲಿ 120 ಜಿಎಸ್‌ಕೆ (ಜಿಎಸ್‌ಟಿ ಸೇವಾ ಕೇಂದ್ರ) ಬಯೊಮೆಟ್ರಿಕ್ ಕೇಂದ್ರಗಳು ಮಂಗಳವಾರ ಕಾರ್ಯಾರಂಭ ಮಾಡಿವೆ.

ಅರ್ಜಿದಾರರಿಗೆ ಈ ಕೇಂದ್ರಗಳಿಗೆ ಭೇಟಿ ನೀಡುವ ಸಮಯವನ್ನು ಮುಂಗಡವಾಗಿ ನಿಗದಿಗೊಳಿಸುವ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಈ ಕೇಂದ್ರಗಳಲ್ಲಿ ಆಧಾರ್ ಬಯೊಮೆಟ್ರಿಕ್ ದೃಢೀಕರಣದ ಮೂಲಕ ಹೊಸದಾಗಿ ನೋಂದಣಿ ಪಡೆಯಲು ಇಚ್ಛಿಸುವ ಅರ್ಜಿದಾರರ ಬಯೊಮೆಟ್ರಿಕ್ ದೃಢೀಕರಣ ಮತ್ತು ದಾಖಲೆಗಳ ಪರಿಶೀಲನೆ ಮಾಡಲಾಗುತ್ತದೆ. ಈ ಹಂತದ ಪ್ರಕ್ರಿಯೆಯು ಅಮಾಯಕರ ದಾಖಲೆಗಳನ್ನು ಬಳಸಿಕೊಂಡು ಮಾಡುವ ನಕಲಿ ಜಿಎಸ್‌ಟಿ ನೋಂದಣಿ ತಡೆಯಲು ನೆರವಾಗುತ್ತದೆ ಎಂದು ವಾಣಿಜ್ಯ ತೆರಿಗೆಗಳ ಆಯುಕ್ತರು ತಿಳಿಸಿದ್ದಾರೆ.

ಈಕ್ವಿಟಿ ಮ್ಯೂಚುವಲ್ ಫಂಡ್ ₹38,239 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಿನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ₹38,239 ಕೋಟಿ ಬಂಡವಾಳ ಹೂಡಿಕೆಯಾಗಿದೆ.

ಜುಲೈನಲ್ಲಿ ₹37,113 ಕೋಟಿ ಬಂಡವಾಳ ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 3ರಷ್ಟು ಏರಿಕೆಯಾಗಿದೆ. ಎಸ್‌ಐಪಿ ಮೂಲಕ ₹23,547 ಕೋಟಿ ಹೂಡಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಂಗಳವಾರ ತಿಳಿಸಿದೆ.

ಕೈಗಾರಿಕಾ ಅಭಿವೃದ್ಧಿ: ಮೂವರು ಸಚಿವರೊಂದಿಗೆ ಚರ್ಚೆ

ಕೇಂದ್ರದ ನೆರವಿಗೆ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕೈಗಾರಿಕೆ, ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದಲ್ಲಿ ಕೇಂದ್ರ ಸರ್ಕಾರದ ಸಹಕಾರ ಕೋರಿ ಹಾಗೂ ಅಗತ್ಯ ಬಂಡವಾಳ ಹೂಡಿಕೆ ನಿರೀಕ್ಷಿಸಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು.

2025ರ ಫೆಬ್ರುವರಿ 12ರಿಂದ 14ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದ ಹಿನ್ನೆಲೆಯಲ್ಲಿ ಪಾಟೀಲ ಅವರು, ಸಚಿವರನ್ನು ಭೇಟಿ ಮಾಡಿದರು.

ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ ಅವರು, ರಕ್ಷಣಾ ಸಾಧನಗಳ ಉತ್ಪಾದನೆ ಮತ್ತು ಅವುಗಳ ರಫ್ತಿನ ಮೇಲೆ ಇರುವ ನಿರ್ಬಂಧದ ತೆರವು, ರಕ್ಷಣಾ ಕಾರಿಡಾರ್ ಸ್ಥಾಪನೆಯ ಜರೂರು, ರಾಜ್ಯದಲ್ಲಿರುವ ಬಿಎಚ್‌ಇಎಲ್ ಮತ್ತು ಬಿಇಎಂಎಲ್ ತರಹದ ಉದ್ಯಮಗಳಲ್ಲಿ ಹೂಡಿಕೆ ಹೆಚ್ಚಳಕ್ಕೆ ಉತ್ತೇಜನ ಮತ್ತು ಕಾರವಾರದ ನೌಕಾ ವೈಮಾನಿಕ ನಿಲ್ದಾಣದ ರನ್-ವೇಯನ್ನು ಈಗಿರುವ 2 ಕಿ.ಮೀ.ನಿಂದ 2.7 ಕಿ.ಮೀ.ವರೆಗೆ ವಿಸ್ತರಿಸಲು ಬೇಕಾಗಿರುವ ನೆರವಿನ ಬಗ್ಗೆ ಚರ್ಚಿಸಿದರು.

ಬಳಿಕ ಕುಮಾರಸ್ವಾಮಿ ಅವರನ್ನು ಭೇಟಿಯಾದ ಪಾಟೀಲ, ಕರ್ನಾಟಕದ ಕೈಗಾರಿಕಾ ವಲಯದ ಬೆಳವಣಿಗೆಗೆ ಅಗತ್ಯವಿರುವ ನೆರವಿನ ಕುರಿತು ವಿಚಾರ ವಿನಿಮಯ ನಡೆಸಿದರು.

ಇ.ವಿ. ವಲಯದಲ್ಲಿ ನವೋದ್ಯಮಗಳಿಗೆ ₹10 ಸಾವಿರ ಕೋಟಿ ಪೂರೈಸಲು ಎದುರಾಗಿರುವ ಸವಾಲು, ಫೇಮ್-3 ಯೋಜನೆಯ ಜಾರಿಯಲ್ಲಿ ಆಗುತ್ತಿರುವ ವಿಳಂಬ, ರಕ್ಷಣಾ ತಂತ್ರಜ್ಞಾನ ಹಬ್‌ಗಳ ಸ್ಥಾಪನೆ, ಬೆಂಗಳೂರು ಗ್ರಾಮಾಂತರದಲ್ಲಿ ಇಎಂಸಿ ಕ್ಲಸ್ಟರ್ ಸ್ಥಾಪನೆಗೆ ಬಾಕಿ ಇರುವ ಅನುಮೋದನೆ ಬಗ್ಗೆ ಚರ್ಚಿಸಿದರು.

ಹಾರೋಹಳ್ಳಿ, ಕುಡುತಿನಿ ಮತ್ತು ದೇವಕತ್ತಿಕೊಪ್ಪದಲ್ಲಿ ಕೈಗಾರಿಕಾ ಯೋಜನೆಗಳಿಗೆ ಬಾಕಿ ಇರುವ ಪರಿಸರ ಮತ್ತು ಅರಣ್ಯ ಇಲಾಖೆಯ ಅನುಮತಿ, ಸೆಮಿಕಂಡಕ್ಟರ್ ಕಂಪನಿ ಸ್ಥಾಪನೆಯ ತುರ್ತು ಮತ್ತು ಕೇಂದ್ರವು ಇತ್ತೀಚೆಗೆ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಯೋಜನೆಯಡಿ ರೂಪಿಸಿರುವ 12 ಸ್ಮಾರ್ಟ್ ಸಿಟಿ ಯೋಜನೆಯಿಂದ ಕರ್ನಾಟಕವನ್ನು ಹೊರಗಿಟ್ಟಿರುವುದರ ಬಗ್ಗೆಯೂ ಮಾತುಕತೆ ನಡೆಸಿದರು.

ಬೇಗನೆ ಹಾಳಾಗುವಂತಹ ಪದಾರ್ಥಗಳನ್ನು ವಿಮಾನದ ಮೂಲಕ ಹೊರ ದೇಶಗಳಿಗೆ ಕಳುಹಿಸುತ್ತಿರುವ ಸಣ್ಣ ಪ್ರಮಾಣದ ರಫ್ತುದಾರರ ಮೇಲೆ ಹೇರಿರುವ ಜಿಎಸ್‌ಟಿಯನ್ನು ರದ್ದುಪಡಿಸಬೇಕು ಮತ್ತು ಎಲೆಕ್ಟ್ರಾನಿಕ್ ವಸ್ತುಗಳ ಆಮದಿನ ಮೇಲೆ ಈಗ ಇರುವ ಭಾರಿ ಆಮದು ತೆರಿಗೆ ಮತ್ತು ಸುಂಕವನ್ನು ಕಡಿಮೆ ಮಾಡಬೇಕು ಎಂದು ನಿರ್ಮಲಾ ಅವರಿಗೆ ಮನವಿ ಮಾಡಿದರು.

ಇದಕ್ಕೂ ಮುನ್ನ ಎಂ.ಬಿ. ಪಾಟೀಲ, ಸಿಂಗಪುರ ಹೈಕಮಿಷನರ್ ಸೈಮನ್ ವಾಂಗ್ ಅವರನ್ನು ಭೇಟಿಯಾಗಿ, ಫೆಬ್ರುವರಿಯಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಿದರು.



ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಕೇಂದ್ರ ಸಚಿವರಾದ ರಾಜನಾಥ ಸಿಂಗ್ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿಯಾಗಿ ರಾಜ್ಯದ ಯೋಜನೆಗಳ ಬಗ್ಗೆ ಮಾತುಕತೆ ನಡೆಸಿದರು

ದ್ವೇಷ ರಾಜಕಾರಣ: ಎಚ್‌ಡಿಕೆ ಕಿಡಿ

'ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಸಂಘರ್ಷ ಬೇಡ. ರಾಜಕೀಯ ಮೀರಿ ಅಭಿವೃದ್ಧಿ ಪರವಾಗಿ ಕೆಲಸ ಮಾಡಲು ನಾನು ಮುಕ್ತ ಮನಸ್ಸು ಹೊಂದಿದ್ದೇನೆ. ರಾಜ್ಯದ ಒಳಿತಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಪರಸ್ಪರ ಸಹಕಾರ ಮನೋಭಾವದಿಂದ ಕೆಲಸ ಮಾಡಬೇಕು' ಎಂದು ಎಚ್‌.ಡಿ. ಕುಮಾರಸ್ವಾಮಿ ಸಲಹೆ ನೀಡಿದರು.

ರಾಜ್ಯದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗಬೇಕು ಹಾಗೂ ವಿದೇಶಿ ನೇರ ಬಂಡವಾಳ ಹೂಡಿಕೆ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಈ ನಿಟ್ಟಿನಲ್ಲಿ ರಾಜ್ಯಕ್ಕೆ ಪೂರ್ಣ ಸಹಕಾರ ನೀಡುವುದಾಗಿ ಕೇಂದ್ರ ಸಚಿವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಎಚ್‌ಎಂಟಿ ಭೂಮಿ ವಿವಾದ ಹಾಗೂ ದೇವದಾರಿ ಗಣಿಗಾರಿಕೆ ಯೋಜನೆಗಳ ಬಗ್ಗೆಯೂ ಅವರು ಎಂ.ಬಿ. ಪಾಟೀಲ ಜತೆ ಚರ್ಚೆ ನಡೆಸಿದರು. ರಾಜ್ಯ ಸರ್ಕಾರ ದ್ವೇಷದ ರಾಜಕಾರಣದಲ್ಲಿ ತೊಡಗಿದೆ ಎಂದು ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ

20 ಕಿ.ಮೀ.ವರೆಗೆ ಶುಲ್ಕ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ (ಜಿಎನ್‌ಎಸ್‌ಎಸ್) ಅಳವಡಿಸಿಕೊಳ್ಳುವ ಖಾಸಗಿ ವಾಹನಗಳು ರಾಷ್ಟ್ರೀಯ ಹೆದ್ದಾರಿ ಹಾಗೂ ಎಕ್ಸ್‌ಪ್ರೆಸ್ ವೇನಲ್ಲಿ ಶುಲ್ಕ ಪಾವತಿಸದೆ ಪ್ರತಿದಿನ 20 ಕಿ.ಮೀ.ವರೆಗೆ ಸಂಚರಿಸಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅವಕಾಶ ಕಲ್ಪಿಸಿದೆ.

ಈ ಕುರಿತು ಮಂಗಳವಾರ ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ದರಗಳು ಮತ್ತು ಸಂಗ್ರಹಣೆಯ ನಿರ್ಣಯ) ನಿಯಮಗಳು 2008ಕ್ಕೆ ತಿದ್ದುಪಡಿ ತಂದಿದೆ. ಇದರಿಂದ ಹೆದ್ದಾರಿ ಬದಿಯ ಗ್ರಾಮಗಳ ವಾಹನ ಚಾಲಕರಿಗೂ ಅನುಕೂಲವಾಗಲಿದೆ. ಹೊಸ ನಿಯಮಾವಳಿ ಪ್ರಕಾರ, ಖಾಸಗಿ ವಾಹನ ಚಾಲಕರು ರಾಷ್ಟ್ರೀಯ ಹೆದ್ದಾರಿ, ಬೈಪಾಸ್ ಅಥವಾ ಸುರಂಗ ಮಾರ್ಗದಲ್ಲಿ ನಿಗದಿಪಡಿಸಿರುವ ದೂರದವರೆಗೆ ಎರಡೂ ಬದಿಯಲ್ಲಿ ಉಚಿತವಾಗಿ ಸಂಚರಿಸಬಹುದಾಗಿದೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275 ಮತ್ತು ಹರಿಯಾಣದ ಪಾಣಿಪತ್–ಹಿಸಾರ್ ರಾಷ್ಟ್ರೀಯ ಹೆದ್ದಾರಿ 709ರಲ್ಲಿ ಟೋಲ್ ಪ್ಲಾಜಾಗಳ ಬದಲಾಗಿ ಪ್ರಾಯೋಗಿಕವಾಗಿ ಉಪಗ್ರಹ ಆಧಾರಿತ ಟೋಲ್ ವ್ಯವಸ್ಥೆ ಜಾರಿಗೊಳಿಸಲು ಸಚಿವಾಲಯ ನಿರ್ಧರಿಸಿದೆ.



ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ)–ಇಟಿಸಿ ವ್ಯವಸ್ಥೆಯು ಅನುಷ್ಠಾನಗೊಳ್ಳಲಿದೆ. ಕೆಲವು ದಿನಗಳವರೆಗೆ ಹಾಲಿ ಇರುವ ಆರ್‌ಎಫ್‌ಐಡಿ– ಇಟಿಸಿ (ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್) ಮತ್ತು ಹೊಸ ವ್ಯವಸ್ಥೆ ಎರಡೂ ಜಾರಿಯಲ್ಲಿ ಇರುತ್ತವೆ.

ಬಳಿಕ ದೇಶದ ಆಯ್ದ ಹೆದ್ದಾರಿಗಳಲ್ಲಿ ಹಂತ ಹಂತವಾಗಿ ಜಿಎನ್‌ಎಸ್‌ಎಸ್ ಆಧಾರಿತ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ (ಇಟಿಸಿ) ಅನುಷ್ಠಾನಗೊಳಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

ವಾಹನಗಳಿಗೆ ಶುಲ್ಕ ನಿಗದಿ ಹೇಗೆ?

ಜಿಎನ್‌ಎಸ್‌ಎಸ್ ಸಕ್ರಿಯಗೊಳಿಸಿದ ಆನ್ ಬೋರ್ಡ್ ಯೂನಿಟ್‌ಗಳನ್ನು (ಒಬಿಯು) ಹೊಂದಿದ ವಾಹನಗಳಿಗೆ ಅವು ಹೆದ್ದಾರಿಯಲ್ಲಿ ಪ್ರಯಾಣಿಸುವ ದೂರ ಆಧರಿಸಿ ಶುಲ್ಕ ವಿಧಿಸಲಾಗುತ್ತದೆ.

ವಾಹನಕ್ಕೆ ಆನ್ ಬೋರ್ಡ್ ಯೂನಿಟ್‌ಗಳನ್ನು ಅಳವಡಿಸಿಕೊಂಡರೆ ಹೆದ್ದಾರಿಯಲ್ಲಿ ವಾಹನದ ಸಂಚಾರವನ್ನು ಟ್ರ್ಯಾಕ್ ಮಾಡಿ ಉಪಗ್ರಹಕ್ಕೆ ಮಾಹಿತಿ ರವಾನಿಸಲಿದೆ. ನೀವು ಎಷ್ಟು ದೂರ ಸಂಚರಿಸಿದ್ದೀರಿ ಎಂಬುದನ್ನು ಜಿಎನ್‌ಎಸ್‌ಎಸ್ ಲೆಕ್ಕ ಹಾಕಲಿದೆ. ಈ ವ್ಯವಸ್ಥೆ ಅಳವಡಿಸಿಕೊಂಡ ವಾಹನಗಳ ಸಂಚಾರಕ್ಕೆ ಪ್ರತ್ಯೇಕ ಮಾರ್ಗದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಒಂದು ವೇಳೆ ಈ ವ್ಯವಸ್ಥೆ ಅಳವಡಿಸಿಕೊಳ್ಳದಿರುವ ವಾಹನಗಳು ಈ ಮಾರ್ಗದಲ್ಲಿ ಸಂಚರಿಸಿದರೆ ದುಪ್ಪಟ್ಟು ಶುಲ್ಕ ಪಾವತಿಸಬೇಕಾಗುತ್ತದೆ ಎಂದು ಸಚಿವಾಲಯವು ತಿಳಿಸಿದೆ.

ಆದರೆ, ಜಿಎನ್‌ಎಸ್‌ಎಸ್ ಸಕ್ರಿಯಗೊಳಿಸಿದ ಆನ್ ಬೋರ್ಡ್ ಯೂನಿಟ್‌ಗಳನ್ನು ಹೊಂದಿಲ್ಲದಿರುವ ವಾಹನಗಳ ಚಾಲಕರು ಟೋಲ್ ಪ್ಲಾಜಾದಲ್ಲಿ ನೇರವಾಗಿ ಅಥವಾ ಆರ್‌ಎಫ್‌ಐಡಿ–ಇಟಿಸಿ ಮೂಲಕ ಶುಲ್ಕ ಪಾವತಿಸಬೇಕಾಗುತ್ತದೆ.

'ಇ.ವಿ ಮಾರುಕಟ್ಟೆ ಐದು ಕೋಟಿ ಉದ್ಯೋಗ ಸೃಷ್ಟಿ'

ನವದೆಹಲಿ (ಪಿಟಿಐ): '2030ರ ವೇಳೆಗೆ ದೇಶದ ವಿದ್ಯುತ್‌ಚಾಲಿತ ವಾಹನಗಳ ಮಾರುಕಟ್ಟೆಯಲ್ಲಿ 5 ಕೋಟಿ ಉದ್ಯೋಗಗಳು ಸೃಷ್ಟಿಯಾಗಲಿವೆ. ವಾರ್ಷಿಕವಾಗಿ ಇ.ವಿ ವಾಹನಗಳ ಮಾರಾಟವು ಒಂದು ಕೋಟಿಗೆ ತಲುಪಲಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಮಂಗಳವಾರ ನಡೆದ ಭಾರತೀಯ ವಾಹನ ತಯಾರಕರ ಒಕ್ಕೂಟದ ವಾರ್ಷಿಕ ಸಮಾವೇಶದಲ್ಲಿ ಮಾತನಾಡಿದ ಅವರು, 'ಇದೇ ವೇಳೆಗೆ ಇ.ವಿ ವಾಹನಗಳ ತಯಾರಿಕೆಯಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಅಗ್ರಸ್ಥಾನಕ್ಕೇರಲಿದೆ' ಎಂದರು.

ಮುಂದಿನ ಆರು ವರ್ಷದಲ್ಲಿ ವಿದ್ಯುತ್‌ಚಾಲಿತ ವಾಹನಗಳ ಮಾರುಕಟ್ಟೆ ಮೌಲ್ಯವು ₹20 ಲಕ್ಷ ಕೋಟಿಗೆ ಮುಟ್ಟಲಿದೆ. ಇ.ವಿ ಫೈನಾನ್ಸ್ ಮಾರುಕಟ್ಟೆಯ ಮೌಲ್ಯವು ₹4 ಲಕ್ಷ ಕೋಟಿ ತಲುಪಿದೆ ಎಂದು ಹೇಳಿದರು.

ಪ್ರಸ್ತುತ ದೇಶದಲ್ಲಿ 30 ಲಕ್ಷಕ್ಕೂ ಹೆಚ್ಚು ವಿದ್ಯುತ್‌ಚಾಲಿತ ವಾಹನಗಳು ನೋಂದಣಿಯಾಗಿವೆ. ಇ.ವಿ ವಾಹನಗಳ ಮಾರಾಟದಲ್ಲಿ ದ್ವಿಚಕ್ರ ವಾಹನಗಳ ಪಾಲು ಶೇ 56ರಷ್ಟಿದೆ ಎಂದು ತಿಳಿಸಿದರು.

2023–24ನೇ ಸಾಲಿನಲ್ಲಿ ಇ.ವಿ ವಾಹನಗಳ ಮಾರಾಟದಲ್ಲಿ ಶೇ 45ರಷ್ಟು ಏರಿಕೆಯಾಗಿದೆ. ದೇಶದಲ್ಲಿ 400 ನವೋದ್ಯಮಗಳು ವಿದ್ಯುತ್‌ಚಾಲಿತ ದ್ವಿಚಕ್ರ ವಾಹನಗಳ ತಯಾರಿಕೆಯಲ್ಲಿ ತೊಡಗಿವೆ ಎಂದರು.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹17100
ಎಸಿ	₹10665
ಆರ್‌ಪಿ	₹19000
ಆರ್‌ಸಿ	₹10190

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪಾಪು, ಶಿವಮೊಗ್ಗ.

- **ಪ್ರಶ್ನೆ: ನನ್ನ ವಯಸ್ಸು 61. ಅನುದಾನಿತ ಕಾಲೇಜೊಂದರಲ್ಲಿ ಅಧ್ಯಾಪಕನಾಗಿ ಹಾಗೂ ವಿಭಾಗದ ಮುಖ್ಯಸ್ಥನಾಗಿ ನಿವೃತ್ತಿಯಾಗಿದ್ದೇನೆ (2022-23ನೇ ಸಾಲಿನಲ್ಲಿ). ಪ್ರಸ್ತುತ ನನಗೆ ಪಿಂಚಣಿ ಬರುತ್ತಿಲ್ಲ. ನಿವೃತ್ತಿ ಬಳಿಕ ಭವಿಷ್ಯ ನಿಧಿಯಿಂದ ನನ್ನ ಪಾಲಿನ ಹಣ ₹8.72 ಲಕ್ಷ ಹಾಗೂ ಗಳಿಕೆ ರಜಾದ ಬಾಬ್ತು ₹5.26 ಲಕ್ಷ ಬಂದಿದೆ. 2023-24ರಲ್ಲಿ ಈ ಹಣ ನನ್ನ ಖಾತೆಗೆ ಜಮೆ ಆಗಿದೆ.**

ನಾನು 2023-24 ಮತ್ತು 2022-23ನೇ ಸಾಲಿನ ಆದಾಯ ತೆರಿಗೆ ಪಾವತಿಸಿರುತ್ತೇನೆ. 2023-24ನೇ ಸಾಲಿನಲ್ಲಿ ಜಮೆ ಆದ ಭವಿಷ್ಯ ನಿಧಿ ಹಾಗೂ ಗಳಿಕೆ ರಜಾದ ಮೊತ್ತಕ್ಕೆ ಆದಾಯ ತೆರಿಗೆ ಪಾವತಿಸಿರುವುದಿಲ್ಲ. ಇದರಿಂದ ಏನಾದರೂ ತೊಂದರೆಯಾಗುತ್ತದೆಯೇ? ನಾನು ಹಿರಿಯ ನಾಗರಿಕನಾಗಿರುವುದರಿಂದ ನನಗೆ ತೆರಿಗೆ ವಿನಾಯಿತಿ ಇದೆಯೇ? ಮೇಲಾಗಿ ನನಗೆ 2023-24ರಿಂದ ಇಲ್ಲಿಯವರೆಗೂ ಯಾವುದೇ ರೀತಿಯ ನಿಶ್ಚಿತ ಆದಾಯವಿಲ್ಲ. ದಯವಿಟ್ಟು, ನನ್ನ ಸಂದೇಹಗಳಿಗೆ ಸೂಕ್ತ ಉತ್ತರ ನೀಡಿ.

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 15ರ ಅನ್ವಯ ವೇತನ ಆದಾಯಕ್ಕೆ ಸಂಬಂಧಿಸಿದ ತೆರಿಗೆಯನ್ನು ವೇತನ 'ಗಳಿಕೆ'ಯಾದ ವರ್ಷದಲ್ಲಿ ಪಾವತಿ ಮಾಡಬೇಕಾಗುತ್ತದೆ. ಉದಾಹರಣೆಗೆ ತಿಂಗಳ ವೇತನ ಆಯಾ ತಿಂಗಳ ಕೊನೆಯ ದಿನ ಗಳಿಕೆ ಆಗುತ್ತದೆ. ಆದರೆ, ಪಾವತಿ ಕೆಲವು ದಿನಗಳ ಅಥವಾ ಮುಂದಿನ ತಿಂಗಳು ಪಾವತಿಯಾದರೂ ತೆರಿಗೆ, ಗಳಿಕೆಗೆ ಸಂಬಂಧಿಸಿದ ಆರ್ಥಿಕ ವರ್ಷಕ್ಕೆ ಅನ್ವಯಿಸಿ ನಿರ್ಣಯವಾಗುತ್ತದೆ. ಆದರೆ, ಕೆಲವೊಮ್ಮೆ ವಾರ್ಷಿಕ ಪಾವತಿಗಳು ಅಥವಾ ನಿವೃತ್ತಿಗೆ ಸಂಬಂಧಿಸಿದ ಪಾವತಿಗಳು ಇದ್ದಾಗ ಗಳಿಕೆ ಆಧಾರದಲ್ಲಿ ತೆರಿಗೆಗೆ ಒಳಪಡದಿದ್ದರೆ ಹಾಗೂ ಅವು ವಿನಾಯಿತಿಗೊಳಪಡದಿದ್ದರೆ, ಅವನ್ನು ಪಾವತಿಯಾದ ವರ್ಷದಲ್ಲಿ ತೆರಿಗೆಗೆ ಪರಿಗಣಿಸಬೇಕಾಗುತ್ತದೆ.

ನಿಮ್ಮ ವಿಚಾರದಲ್ಲಿ ನೀವು ಈಗಾಗಲೇ 2022-23ನೇ ಸಾಲಿನ ವೇತನಕ್ಕೆ ಸಂಬಂಧಿಸಿದ ಆದಾಯಕ್ಕೆ ತೆರಿಗೆ ಪಾವತಿ ಮಾಡಿರುವುದಾಗಿ ತಿಳಿಸಿರುತ್ತೀರಿ. ಆದರೆ, ನಿಮ್ಮ ಭವಿಷ್ಯ ನಿಧಿ ಹಾಗೂ ಗಳಿಕೆ ರಜಾದ ಮೊತ್ತ ನಿಮ್ಮ ಖಾತೆಗೆ ಜಮೆ ಆಗಿರುವುದು 2023-24ನೇ ಆರ್ಥಿಕ ವರ್ಷದಲ್ಲಿ ಎಂಬುದಾಗಿ ತಿಳಿಸಿದ್ದೀರಿ. ಮೊದಲನೆಯದಾಗಿ ಇವೆರಡೂ ನಿಮ್ಮ ನಿವೃತ್ತಿಯ ಕಾರಣದಿಂದ ಬಂದ ಮೊತ್ತ.

ಭವಿಷ್ಯ ನಿಧಿ ಮೊತ್ತ ಸೆಕ್ಷನ್ 10(12)ರ ಪ್ರಕಾರ ಸಂಪೂರ್ಣ ವಿನಾಯಿತಿಗೆ ಅರ್ಹವಾಗಿದೆ. ರಜಾ ಗಳಿಕೆ ಮೊತ್ತ ಸೆಕ್ಷನ್ 10(10ಎ ಎ) ಇದರಡಿ 2023ರ ಮಾರ್ಚ್ 31ರ ತನಕ ₹3 ಲಕ್ಷ ವಿನಾಯಿತಿಗೆ ಅರ್ಹ. ತದನಂತರ ನಿವೃತ್ತಿ ಹೊಂದಿದವರಿಗೆ ಸಂಬಂಧಿಸಿ ₹25 ಲಕ್ಷದ ತನಕ ವಿನಾಯಿತಿ ಸಿಗುತ್ತದೆ.

ನೀವು ಈ ವಿಚಾರಕ್ಕೆ ಸಂಬಂಧಿಸಿ ನಿಮ್ಮ ಫಾರಂ 16 ಅನ್ನು ಗಮನಿಸಿ. ಅದರಂತೆ ತೆರಿಗೆ ಕಟ್ಟಿರುವ ವಿಚಾರವನ್ನು ಖಚಿತಪಡಿಸಿಕೊಳ್ಳಿ. ರಜಾ ನಗದೀಕರಣಕ್ಕೆ ಸಂಬಂಧಿಸಿ ₹3 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ತೆರಿಗೆ ಅನ್ವಯಿಸುವುದಿದ್ದರೂ ನಿಮ್ಮ ಒಟ್ಟಾರೆ ಆದಾಯ ಗರಿಷ್ಠ ವಿನಾಯಿತಿ ಮಿತಿಗಿಂತ ಕಡಿಮೆ ಇರುವುದರಿಂದ ತೆರಿಗೆಗೊಳಪಡುವ ಸಾಧ್ಯತೆ ಇಲ್ಲ. ಹಳೆಯ ತೆರಿಗೆ ವಿಧಾನದಡಿ ಹಿರಿಯ ನಾಗರಿಕರಿಗೆ ₹3 ಲಕ್ಷದ ತನಕ ವಾರ್ಷಿಕ ಆದಾಯಕ್ಕೆ ತೆರಿಗೆ ಇರುವುದಿಲ್ಲ.

ಕೆ.ಪಿ.ನಾಯಕ್, ಮಂಗಳೂರು.

- **ಪ್ರಶ್ನೆ: ನಾನು ಮಂಗಳೂರಿನ ನಿವಾಸಿಯಾಗಿದ್ದು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ನಲ್ಲಿ ವೃತ್ತಿ ನಿರ್ವಹಿಸಿ ಇತ್ತೀಚೆಗೆ ನಿವೃತ್ತಿಯಾಗಿದ್ದೇನೆ. ಪ್ರಸ್ತುತ ನಾವು ಸ್ವಂತ ಮನೆಯಲ್ಲಿ ವಾಸವಿದ್ದು, ಕೆಲವು ವರ್ಷ ಹಿಂದೆ ಮಂಗಳೂರಿನಲ್ಲಿ ಖರೀದಿಸಿದ 30x60 ಅಳತೆಯ ನಿವೇಶನ ಹೊಂದಿದ್ದೇವೆ. ಇದನ್ನು ಮಾರಾಟ ಮಾಡುವ ಯೋಜನೆಯಲ್ಲಿದ್ದೇವೆ.**

2005 ಮಾರ್ಚ್‌ನಲ್ಲಿ ಇದನ್ನು ನಾವು ಖರೀದಿಸಿದ್ದೇವೆ. ಪ್ರಸಕ್ತ ಆರ್ಥಿಕ ವರ್ಷದ ಯಾವುದೇ ಸಂದರ್ಭದಲ್ಲಿ ಇದು ಮಾರಾಟ ಆಗಬಹುದು. ಇದರ ಖರೀದಿ ಮೊತ್ತ ಅಂದಾಜು ₹11.50 ಲಕ್ಷ. ಇತ್ತೀಚಿನ ಅಂದಾಜಿನಂತೆ ನಮ್ಮ ನಿವೇಶನಕ್ಕೆ ಸುಮಾರು ₹85 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದೇವೆ. ಆದರೆ, ₹75 ಲಕ್ಷಕ್ಕೆ ಖರೀದಿದಾರರಿದ್ದಾರೆ. ಒಂದು ವೇಳೆ ಈ ಮೌಲ್ಯಕ್ಕೆ ಮಾರಾಟವಾದರೆ ನಮಗೆ ಬರಬಹುದಾದ ತೆರಿಗೆ ಎಷ್ಟು. ನಾವು ಮುಂದೆ ಮಗನ ಮನೆಯಲ್ಲಿ ವಾಸ್ತವ್ಯ ಹೂಡುವ ಕಾರಣ ಹಾಗೂ ಈಗಾಗಲೇ ನಮಗೆ ಒಂದು ಮನೆ ಇರುವ ಕಾರಣ ಹೊಸ ಮನೆ ಕಟ್ಟುವ ಅಥವಾ ಖರೀದಿಸುವ ಉದ್ದೇಶ ಇಲ್ಲ. ನಮಗೆ ₹50 ಲಕ್ಷದ ಬಾಂಡ್ ಖರೀದಿಸಿ ತೆರಿಗೆ ವಿನಾಯಿತಿ ಪಡೆಯುವ ಅವಕಾಶ ಇರುವುದಾದರೆ ಅದನ್ನು ಬಳಸಿಕೊಳ್ಳುವುದು ಉತ್ತಮವೇ ಅಥವಾ ಅಂಚೆ ಇಲಾಖೆಯ ಅಥವಾ ಬ್ಯಾಂಕ್ ಠೇವಣಿ ಇರಿಸಿ ಹಿರಿಯ ನಾಗರಿಕರಿಗೆ ಇರುವ ಹೆಚ್ಚುವರಿ ಬಡ್ಡಿಯ ಲಾಭ ಪಡೆಯುವ ಆಯ್ಕೆ ಇರುವಾಗ ಯಾವುದು ಉತ್ತಮ ತೀರ್ಮಾನ ಎಂಬ ಬಗ್ಗೆ ತಿಳಿಸಿ.

ಉತ್ತರ: ಪ್ರಸ್ತುತ ಬದಲಾದ ತೆರಿಗೆ ನಿಯಮದ ಸನ್ನಿವೇಶದಲ್ಲಿ ಇಂತಹ ಯಾವುದೇ ನಿರ್ಣಯ ಕೈಗೊಳ್ಳುವ ಮೊದಲು ಯಾವ ಪದ್ಧತಿಯಡಿ ತೆರಿಗೆ ಉಳಿತಾಯ ಅಧಿಕ ಎಂಬುದನ್ನು ನೋಡಬೇಕಾಗುತ್ತದೆ.

ನೀವು ಕೊಟ್ಟ ಮಾಹಿತಿಯಂತೆ ಇನ್‌ಡೆಕ್ಸೇಷನ್ ಸಹಿತ ತೆರಿಗೆ ಲೆಕ್ಕ ಹಾಕಿದಾಗ ಶೇ 20ರ ದರದಂತೆ ₹7.61 ಲಕ್ಷ ಬರುವುದಾದರೆ ಹೊಸ ನಿಯಮದ ಅನುಸಾರ ಇನ್‌ಡೆಕ್ಸೇಷನ್ ರಹಿತ ಶೇ 12.5ರ ದರದಲ್ಲಿ ತೆರಿಗೆ ಮೊತ್ತ ₹7.94 ಲಕ್ಷ ಆಗಿರುತ್ತದೆ. ಇಲ್ಲಿ ಬರುವ ಲಾಭದ ಮೊತ್ತ ಕ್ರಮವಾಗಿ ₹38.05 ಲಕ್ಷ ಹಾಗೂ ₹63.50 ಲಕ್ಷ ಆಗಿರುತ್ತದೆ. ಬಾಂಡ್‌ಗಳಲ್ಲಿ 5 ವರ್ಷ ಕಾಲ ನಿಮ್ಮ ಹಣವನ್ನು ಹೂಡಿಕೆ ಮಾಡಬೇಕಾಗುತ್ತದೆ. ಇದಕ್ಕೆ ಶೇ 5.25ರ ವಾರ್ಷಿಕ ಬಡ್ಡಿ ಸಿಗುತ್ತದೆ. ಹೀಗಾಗಿ, ನೀವು ಇನ್‌ಡೆಕ್ಸೇಷನ್ ಸಹಿತ ಇರುವ ತೆರಿಗೆ ವಿಧಾನ ಆಯ್ಕೆ ಮಾಡಿ ₹38.05 ಲಕ್ಷದಷ್ಟು ಮೊತ್ತ ಬಾಂಡ್‌ಗಳಲ್ಲಿ ಹೂಡಿ ತೆರಿಗೆ ಶೂನ್ಯ ಮಾಡಬಹುದು. ಹೆಚ್ಚುವರಿ ಉಳಿತಾಯ ಮೊತ್ತವನ್ನು ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಅಥವಾ ಅದಕ್ಕಿಂತ ಅಧಿಕ ಲಾಭ ನೀಡುವ ಕಡೆ ಹೂಡಿಕೆ ಮಾಡಬಹುದು.

ಇಲ್ಲಿ ಗಮನಿಸಬೇಕಾದ ಇನ್ನೂ ಒಂದು ಬಹು ಬಹುಮುಖ್ಯ ಅಂಶವೆಂದರೆ, ಬಾಂಡ್‌ಗಳಲ್ಲಿ ಹೂಡಿಕೆ ಮಾಡಿ ತೆರಿಗೆ ಏನೋ ಶೂನ್ಯ ಮಾಡಬಹುದು. ಆದರೆ, ಇವೆಲ್ಲಾ ಶೇ 5.25ರ ಬಡ್ಡಿದರ ನೀಡುವ ದೀರ್ಘಾವಧಿ ಹೂಡಿಕೆಗಳು. ಒಂದು ವೇಳೆ ನೀವು ಯಾವುದೇ ಬಾಂಡ್ ಖರೀದಿಸದೆ ಸಂಪೂರ್ಣ ಮೊತ್ತದ ತೆರಿಗೆ ಪಾವತಿಸಿ, ಉಳಿದ ಮೊತ್ತವನ್ನು ಅದಕ್ಕಿಂತ ಅಧಿಕ ಲಾಭ ನೀಡುವ ಯಾವುದೇ ಹೂಡಿಕೆಗಳಲ್ಲಿ ಹಣ ತೊಡಗಿಸಿದಾಗ ಒಟ್ಟಾರೆ ನಿಮ್ಮ ಹಣ 5 ವರ್ಷದಲ್ಲಿ ಇನ್ನಷ್ಟು ವೃದ್ಧಿಸುವಂತೆ ಮಾಡಬಹುದು. ಈಕ್ವಿಟಿ ಉಳಿತಾಯ ಮ್ಯೂಚುವಲ್ ಫಂಡ್‌ಗಳು ವಾರ್ಷಿಕವಾಗಿ ಶೇ 9 ರಿಂದ ಶೇ 16ರಷ್ಟು ಲಾಭ ನೀಡಿದ ಉದಾಹರಣೆಗಳಿವೆ. ಹೀಗಾಗಿ, ಈ ಸಂದರ್ಭದಲ್ಲಿ ನಿಮ್ಮ ವೃತ್ತಿ ಅನುಭವ ಬಳಸಿ ಸರಿಯಾದ ನಿರ್ಧಾರ ಕೈಗೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:businessdesk@prajavani.co.in

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	46919-47329
ಬೆಟ್ಟೆ	32639-33099
ಕೆಂಪುಗೋಟು	26610-27059
ರಾಶಿ	46449-46889
ಕಾರ್ಕಳ	
ಹೊಸತು	25000-40500
ಹಳತು	30000-48000
ಸಾಗರ	
ಬಿಳಿಗೋಟು	19388-22999
ಚಾಲಿ	31109-31800
ಕೋಕ	10699-17989
ಕೆಂಪುಗೋಟು	29699-29699
ರಾಶಿ	32899-46009
ಸಿಪ್ಪೆಗೋಟು	14269-15169
ಪುತ್ತೂರು	
ಹೊಸತು	21000-27500
ಹಳತು	32000-40500
ಶಿವಮೊಗ್ಗ	
ಬೆಟ್ಟೆ	32159-54989
ಗೊರಬಲು	18009-34669
ರಾಶಿ	30138-48389
ಸರಕು	48899-79410
ಸಿದ್ದಾಪುರ	
ಬಿಳಿಗೋಟು	26089-29500
ಚಾಲಿ	32000-35899
ಕೋಕ	23289-23289
ಕೆಂಪುಗೋಟು	16399-16699
ರಾಶಿ	39089-44599
ತಟ್ಟಿಬೆಟ್ಟೆ	24609-25499
ಶಿರಸಿ	
ಬೆಟ್ಟೆ	27299-39609
ಬಿಳಿಗೋಟು	21099-30200
ಚಾಲಿ	31508-36301
ರಾಶಿ	40010-45499
ಯಲ್ಲಾಪುರ	
ಬಿಳಿಗೋಟು	21899-27691
ಚಾಲಿ	30989-35699
ಕೋಕ	5900-22899
ಕೆಂಪುಗೋಟು	18299-26890
ರಾಶಿ	40109-52894
ತಟ್ಟಿಬೆಟ್ಟೆ	27090-38169

ಬ್ರಿಟಿಷ್ ಅಕಾಡೆಮಿ ಬುಕ್ ಪ್ರಶಸ್ತಿ ಅಂತಿಮ ಸುತ್ತಿಗೆ ಅಮಿತಾವ್ ಘೋಷ್

ಲಂಡನ್ (ಪಿಟಿಐ): 2024ನೇ ಸಾಲಿನ ಬ್ರಿಟಿಷ್ ಅಕಾಡೆಮಿ ಬುಕ್ ಪ್ರಶಸ್ತಿಗಾಗಿ ಅಂತಿಮಗೊಳಿಸಲಾದ ಲೇಖಕರ ಪಟ್ಟಿಯಲ್ಲಿ ಭಾರತೀಯ ಲೇಖಕ ಅಮಿತಾವ್ ಘೋಷ್ ಸ್ಥಾನ ಪಡೆದಿದ್ದಾರೆ.

ಸೃಜನೇತರ ಕೃತಿಗಳಿಗಾಗಿ ನೀಡುವ ಈ ಅಂತರರಾಷ್ಟ್ರೀಯ ಪ್ರಶಸ್ತಿಯು ಒಟ್ಟು 25 ಸಾವಿರ ಪೌಂಡ್ (₹27.40 ಲಕ್ಷ) ಮೊತ್ತವನ್ನು ಒಳಗೊಂಡಿದೆ. ಕೋಲ್ಕತ್ತ ಮೂಲದ ಲೇಖಕ ಘೋಷ್ ಸದ್ಯ ಅಮೆರಿಕದಲ್ಲಿ ನೆಲಸಿದ್ದಾರೆ.

ಅಮಿತಾವ್ ಘೋಷ್ ಅವರ, 'ಸ್ಮೋಕ್ ಅಂಡ್ ಆ್ಯಷಸ್: ಒಪಿಯಮ್ಸ್ ಹಿಡನ್ ಹಿಸ್ಟರೀಸ್' ಕೃತಿಯು ಪ್ರಶಸ್ತಿಗಾಗಿ ಅಂತಿಮಗೊಂಡಿರುವ ಆರು ಕೃತಿಗಳಲ್ಲಿ ಸೇರಿದೆ. ಇಂಗ್ಲಿಷ್ ಭಾಷೆಯಲ್ಲಿಯೂ ಲಭ್ಯವಿರುವ, ಜಗತ್ತಿನ ಯಾವುದೇ ಭಾಷೆಯ ಕೃತಿಗಳು ಪ್ರಶಸ್ತಿಗೆ ಅರ್ಹವಾಗಿದ್ದು, ಸ್ಪರ್ಧೆಯು ಮುಕ್ತವಾಗಿದೆ.

'ಸ್ಮೋಕ್ ಅಂಡ್ ಆ್ಯಷಸ್...' ಸರಾಗವಾಗಿ ಓದಿಸಿಕೊಳ್ಳುವ ಪ್ರವಾಸ ಕಥನವಾಗಿದೆ. ಕಥನ ಹೇಳುವ ಲೇಖಕರ ಕೌಶಲ ಗಮನಸೆಳೆಯಲಿದೆ' ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ತೀರ್ಪುಗಾರರು ಬಣ್ಣಿಸಿದ್ದಾರೆ.

'18ನೇ ಶತಮಾನದದಿಂದ ಇಲ್ಲಿಯವರೆಗೆ ಅಫೀಮಿನ ಜಾಗತಿಕ ವಹಿವಾಟನ್ನು ಬಿಚ್ಚಿಡುವ, ಆರ್ಥಿಕತೆ ಮತ್ತು ಸಂಸ್ಕೃತಿಯ ಮೇಲೆ ಅದರ ಪರಿಣಾಮವನ್ನು ನಿರೂಪಿಸುವ ಸಮಗ್ರ ಅಧ್ಯಯನ ಆಧರಿತ ಕೃತಿ ಇದಾಗಿದೆ' ಎಂದು ಬ್ರಿಟಿಷ್ ಅಕಾಡೆಮಿ ಬುಕ್ ಪ್ರೈಸ್‌ನ ಹೇಳಿಕೆಯು ತಿಳಿಸಿದೆ.

ಭಾರತದ ಯೋಜನೆ ಬಾಂಗ್ಲಾದಲ್ಲಿ ಮುಂದುವರಿಕೆ

ಢಾಕಾ (ಪಿಟಿಐ): 'ಭಾರತ ನೆರವಿನ ಯೋಜನೆಗಳು ಅತ್ಯಂತ ಮಹತ್ವದ್ದಾಗಿವೆ. ಹೊಸ ಆಡಳಿತದಲ್ಲಿಯೂ ಈ ಯೋಜನೆಗಳು ಬಾಗ್ಲಾದೇಶದಲ್ಲಿ ಮುಂದುವರಿಯಲಿವೆ' ಎಂದು ಇಲ್ಲಿನ ಮಧ್ಯಂತರ ಸರ್ಕಾರದ ಉನ್ನತ ಸಲಹೆಗಾರರು ತಿಳಿಸಿದ್ದಾರೆ.

'ಭಾರತದೊಡನೆ ಸಹಕಾರವರ್ಧನೆಗೆ ಢಾಕಾ ಎದುರುನೋಡುತ್ತಿರುವುದಾಗಿ ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಜತೆಗೆ ನಡೆದ ಸಭೆಯಲ್ಲಿ ಬಾಂಗ್ಲಾದೇಶದ ಹಣಕಾಸು ಸಲಹೆಗಾರ ಸಲೇಹುದ್ದೀನ್ ಅಹಮ್ಮದ್ ತಿಳಿಸಿದ್ದಾರೆ' ಎಂದು ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

'ಭಾರತದೊಂದಿಗೆ ಸಂಬಂಧ ವೃದ್ಧಿಗೆ ಅಮೆರಿಕ ಹೂಡಿಕೆ'

ವಾಷಿಂಗ್ಟನ್ (ಪಿಟಿಐ): ಭಾರತದೊಂದಿಗಿನ ಕಾರ್ಯತಂತ್ರ ಪಾಲುದಾರಿಕೆಯನ್ನು ವಿಸ್ತರಿಸುವ ಮತ್ತು ದ್ವಿಪಕ್ಷೀಯ ಸಂಬಂಧ ವೃದ್ಧಿಸುವ ಉದ್ದೇಶದಿಂದ ಅಮೆರಿಕ ಗಮನಾರ್ಹ ಹೂಡಿಕೆ ಮಾಡಿದೆ ಎಂದು ಅಮೆರಿಕ ವಿದೇಶಾಂಗ ಉಪ ಕಾರ್ಯದರ್ಶಿ ಕುರ್ಟ್ ಕ್ಯಾಂಪ್‌ಬೆಲ್ ತಿಳಿಸಿದರು.

ಭಾರತ-ಅಮೆರಿಕ ರಕ್ಷಣಾ ವೇಗವರ್ಧಕ ಪರಿಸರ ವ್ಯವಸ್ಥೆ (ಇಂಡಸ್-ಎಕ್ಸ್) ಶೃಂಗಸಭೆ ಉದ್ದೇಶಿಸಿ ಸೋಮವಾರ ಮಾತನಾಡಿದರು.

ನಿರಾಶ್ರಿತ ಪ್ಯಾಲೆಸ್ಟೀನಿಯರಿದ್ದ ಕ್ಯಾಂಪ್ ಮೇಲೆ ದಾಳಿ

ಇಸ್ರೇಲ್ ಸೇನೆ ದಾಳಿ: 40 ಜನ ಸಾವು

ಡೀರ್ ಅಲ್ ಬಲಾಹ್ (ಎ.ಪಿ): ಯುದ್ಧ ಬಾಧಿತ ಗಾಜಾಪಟ್ಟಿಯಿಂದ ಗುಳೆ ಹೋಗಿದ್ದ, ನಿರಾಶ್ರಿತ ಪ್ಯಾಲೆಸ್ಟೀನಿಯರು ನೆಲೆಯೂರಿದ್ದ ಬಿಡಾರದ ಮೇಲೆ ಇಸ್ರೇಲ್ ಸೇನೆ ವಾಯುದಾಳಿ ನಡೆಸಿದ್ದು, ಕನಿಷ್ಠ 40 ಮಂದಿ ಮೃತಪಟ್ಟಿದ್ದಾರೆ.

'ಗಾಜಾಪಟ್ಟಿಯ ಮವಾಸಿ ಖಾನ್ ಯೂನಿಸ್ ನಗರದಲ್ಲಿ, ಜನದಟ್ಟಣೆಯಿದ್ದ ಬಿಡಾರದ ಮೇಲೆ ಮಂಗಳವಾರ ಬೆಳಗಿನ ಜಾವ ದಾಳಿ ನಡೆದಿದೆ. ಕನಿಷ್ಠ 60 ಮಂದಿ ಗಾಯಗೊಂಡಿದ್ದಾರೆ' ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ಹೇಳಿದ್ದಾರೆ. ನಲವತ್ತು ಮಂದಿ ಸತ್ತಿದ್ದಾರೆ ಎಂಬ ಹೇಳಿಕೆಯನ್ನು ತಳ್ಳಿಹಾಕಿರುವ ಇಸ್ರೇಲ್‌ನ ಸೇನೆಯು, ತಾನು ಹಮಾಸ್‌ನ ಬಂಡುಕೋರರನ್ನು ಗುರಿಯಾಗಿಸಿ ಈ ದಾಳಿ ನಡೆಸಿದ್ದಾಗಿ ಸ್ಪಷ್ಟಪಡಿಸಿದೆ.

ಗಾಜಾ ಪಟ್ಟಿಗೆ ಹೊಂದಿಕೊಂಡಂತೆ ಇದ್ದ ಈ ಬಿಡಾರದ ಮೇಲೆ ನಡೆದ ದಾಳಿ ಭೀಕರ ಸ್ವರೂಪದ್ದಾಗಿದೆ. ಸಾವಿರಾರು ನಾಗರಿಕರು ನೆಲೆಯೂರಿದ್ದ ಸ್ಥಳವನ್ನೇ ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದೆ ಎಂದು ಹೇಳಲಾಗಿದೆ.

'ದಾಳಿ ಸ್ಥಳದಿಂದ 40 ಶವಗಳನ್ನು ಪತ್ತೆ ಮಾಡಲಾಗಿದೆ. ನಾಪತ್ತೆ ಆದವರಿಗಾಗಿ ಶೋಧ ನಡೆದಿದೆ. ಬಿಡಾರದಲ್ಲಿದ್ದ ಎಲ್ಲ ಕುಟುಂಬಗಳೇ ನಾಶವಾಗಿವೆ' ಎಂದು ಗಾಜಾದ ರಕ್ಷಣಾ ಇಲಾಖೆಯು ತಿಳಿಸಿದೆ.



ಗಾಜಾಪಟ್ಟಿಯ ಮವಾಸಿ ಖಾನ್ ಯೂನಿಸ್‌ನಲ್ಲಿ ಇಸ್ರೇಲ್‌ನ ಸೇನೆಯ ವಾಯುದಾಳಿಯಿಂದ ತೀವ್ರ ವಿರೂಪಗೊಂಡಿರುವ, ನಿರಾಶ್ರಿತ ಪ್ಯಾಲೆಸ್ಟೀನಿಯರು ವಾಸ್ತವ್ಯ ಹೂಡಿದ್ದ ಬಿಡಾರದ ಸ್ಥಳವನ್ನು ಜನರು ವೀಕ್ಷಿಸಿದರು —ಎಎಫ್‌ಪಿ ಚಿತ್ರ

ಕೂಟದಾಖಲೆ ಮುರಿದ ಹಾಷಿಕಾ

ರಾಷ್ಟ್ರೀಯ ಸೀನಿಯರ್ ಈಜು: ಕರ್ನಾಟಕಕ್ಕೆ ಮೊದಲ ದಿನ 6 ಚಿನ್ನ 3 ಬೆಳ್ಳಿ

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಕರ್ನಾಟಕದ ಹಾಷಿಕಾ ರಾಮಚಂದ್ರ ಅವರು 77ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 4 ನಿಮಿಷ 24.70 ಸೆಕೆಂಡ್‌ಗಳಲ್ಲಿ ಗುರಿ ತಲುಪುವ ಮೂಲಕ 13 ವರ್ಷ ಹಳೆಯ ದಾಖಲೆಯನ್ನು ಮುರಿದರು.

ಇಲ್ಲಿನ ಎಮ್ಮೆಕೆರೆಯ ಅಂತರರಾಷ್ಟ್ರೀಯ ಈಜುಕೊಳದಲ್ಲಿ ಮಂಗಳವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಮೊದಲ ದಿನದ ಸ್ಪರ್ಧೆಗಳಲ್ಲಿ ರಾಜ್ಯದ ಈಜುಪಟುಗಳು ಪಾರಮ್ಯ ಮೆರೆದರು. ಒಟ್ಟು 6 ಚಿನ್ನ ಹಾಗೂ ಮೂರು ಬೆಳ್ಳಿಯ ಪದಕಗಳನ್ನು ಗೆಲ್ಲುವ ಮೂಲಕ ಕರ್ನಾಟಕವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ.

ಪುರುಷರ 400 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ರಾಜ್ಯದ ಅನೀಶ್ ಎಸ್.ಗೌಡ, 100 ಮೀ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ಆಕಾಶ್ ಮಣಿ, ಮಹಿಳೆಯರ 200 ಮೀ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ತಾನ್ಯಾ ಷಡಕ್ಷರಿ ಚಿನ್ನದ ಪದಕ ಗೆದ್ದರು. ಪುರುಷರ 4X200 ಮೀ ಫ್ರೀಸ್ಟೈಲ್ ರಿಲೇ ಹಾಗೂ ಮಹಿಳೆಯರ 4X200 ಫ್ರೀಸ್ಟೈಲ್ ರಿಲೇ ಸ್ಪರ್ಧೆಗಳಲ್ಲೂ ಕರ್ನಾಟಕದ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ಪುರುಷರ ರಿಲೇ ತಂಡವನ್ನು ಅನೀಶ್ ಎಸ್. ಗೌಡ, ದರ್ಶನ್ ಎಸ್., ಕಾರ್ತಿಕೇಯನ್ ನಾಯರ್, ದಕ್ಷಣ್ ಎಸ್. ಹಾಗೂ ಮಹಿಳೆಯರ ರಿಲೇ ತಂಡವನ್ನು ಶಿರಿನ್, ಶಾಲಿನಿ ಆರ್. ದೀಕ್ಷಿತ್, ನೈಷಾ, ಹಾಷಿಕಾ ರಾಮಚಂದ್ರ ಪ್ರತಿನಿಧಿಸಿದ್ದರು.

ಮೊದಲ ದಿನವೇ ಕೂಟ ದಾಖಲೆ: 400 ಮೀ. ಫ್ರೀಸ್ಟೈಲ್



400ಮೀ ಮಹಿಳೆಯರ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ದಾಖಲೆಯೊಡನೆ ಚಿನ್ನ ಗೆದ್ದ ಕರ್ನಾಟಕದ ಹಾಷಿಕಾ ರಾಮಚಂದ್ರ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಸ್ಪರ್ಧೆಯಲ್ಲಿ ರಾಜ್ಯದ ಹಾಷಿಕಾ ರಾಮಚಂದ್ರ ಅವರು 2011ರಲ್ಲಿ ರಾಂಚಿಯಲ್ಲಿ ರಿಚಾ ಮಿಶ್ರಾ ಸ್ಥಾಪಿಸಿದ್ದ ಕೂಟ ದಾಖಲೆಯನ್ನು (4 ನಿ. 25.76 ಸೆ) ಅಳಿಸಿ ಹಾಕಿದರು. ಹಾಷಿಕಾ ಅವರಿಗೆ ತೆಲಂಗಾಣದ ವೃತ್ತಿ ಅಗರ್ವಾಲ್ ಅವರು ನಿಕಟ ಪೈಪೋಟಿ (4 ನಿ. 25.09 ಸೆ) ಒಡ್ಡಿದ್ದರು. ಎದುರಾಳಿಗಿಂತ 39 ಸೆಕೆಂಡ್ ಮೊದಲೇ ಹಾಶಿಕಾ ಗುರಿ ತಲುಪಿ ದಾಖಲೆ ನಿರ್ಮಿಸಿ ಸಂಭ್ರಮಿಸಿದರು.

ಇತರ ಫಲಿತಾಂಶಗಳು ಇಂತಿವೆ: ಪುರುಷರ ವಿಭಾಗ: 50 ಮೀ. ಬಟರ್‌ಫ್ಲೈ: ಬಿ.ಬೆನೆಡಿಕ್ಟನ್ ರೋಹಿತ್ (ತಮಿಳುನಾಡು)–1; ಮಿಹಿರ್ ಆಮ್ರೆ (ಮಹಾರಾಷ್ಟ್ರ)–2; ಆದಿತ್ಯಾ ದಿನೇಶ್ (ತ.ನಾ)–3, ಕಾಲ: 24.22 ಸೆ.; 100 ಮೀ ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಕರ್ನಾಟಕ)–1; ರಿಷಬ್ ಅನುಪಮ್ ದಾಸ್ (ಮಹಾರಾಷ್ಟ್ರ)–2; ವಿನಾಯಕ ವಿಜಯ್ (ಎಸ್‌ಎಸ್‌ಸಿಬಿ)-3, ಕಾಲ: 56.15ಸೆ.; 200 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ ಸುರೇಶ್ (ತಮಿಳುನಾಡು)–1; ಮಣಿಕಂಠ ಎಲ್ (ಕರ್ನಾಟಕ)–2; ಅನೂಪ್ ಆಗಸ್ಟಿನ್ (ರೈಲ್ವೇಸ್)–3, ಕಾಲ: 2ನಿ.18.85 ಸೆ.; 400 ಮೀ ಫ್ರೀಸ್ಟೈಲ್: ಅನೀಶ್ ಎಸ್ ಗೌಡ (ಕರ್ನಾಟಕ)–1; ದರ್ಶನ್ ಎಸ್. (ಕರ್ನಾಟಕ)–2; ದೇವಾಂಶ್ ಮಹೇಶ್‌ಕುಮಾರ್ ಪಿ. (ರೈಲ್ವೆಸ್)–3, ಕಾಲ: 3ನಿ. 56.59 ಸೆ.; 4X200 ಮೀ ಫ್ರೀಸ್ಟೈಲ್ ರಿಲೇ: ಕರ್ನಾಟಕ (ಅನೀಶ್ ಗೌಡ, ದರ್ಶನ್ ಎಸ್., ಕಾರ್ತಿಕೇಯನ್ ನಾಯರ್, ದಕ್ಷಣ್ ಎಸ್.)–1, ಕಾಲ: 7ನಿ.42.90ಸೆ.; ಆರ್‌ಎಸ್‌ಪಿಬಿ–2, ಕಾಲ: 7ನಿ.47.64 ಸೆ.–2; ಎಸ್‌ಎಸ್‌ಸಿಬಿ– 3, ಕಾಲ: 7 ನಿ.50.45ಸೆ.

ಮಹಿಳೆಯರ ವಿಭಾಗ: 50 ಮೀ. ಬಟರ್‌ಫ್ಲೈ: ಮಹಿ ಶ್ವೇತರಾಜ್ (ಬಿಹಾರ)–1; ಮಾನ್ವಿ ವರ್ಮಾ (ಕರ್ನಾಟಕ)–2; ರುಜುತಾ ಪ್ರಸಾದ್ ರಾಜಾಡ್ನ್ಯಾ (ಮಹಾರಾಷ್ಟ್ರ)–3, ಕಾಲ: 28.33 ಸೆ.; 100 ಮೀ ಬ್ಯಾಕ್‌ಸ್ಟ್ರೋಕ್: ಸೌಬ್ರಿತಿ ಮಂಡಲ್ (ಪ.ಬಂಗಾಳ)–1, ಪ್ರತ್ಯಸಾ ರೇ (ಒಡಿಶಾ)–2; ರುಜುತಾ ಪ್ರಸಾದ್ ರಾಜಾಡ್ನ್ಯಾ (ಮಹಾರಾಷ್ಟ್ರ)–3, ಕಾಲ: 1 ನಿ.05.51 ಸೆ.; 200 ಮೀ ಬ್ರೆಸ್ಟ್‌ಸ್ಟ್ರೋಕ್: ತಾನ್ಯಾ ಷಡಕ್ಷರಿ (ಕರ್ನಾಟಕ)–1; ಜ್ಯೋತಿ ಬಾಜಿರಾವ್ ಪಾಟೀಲ (ಮಹಾರಾಷ್ಟ್ರ)–2, ಹರ್ಷಿತಾ ಜಯರಾಮ್ (ಆರ್‌ಎಸ್‌ಪಿಬಿ)–3, ಕಾಲ: 2 ನಿ.40.54; 400 ಮೀ ಫ್ರೀಸ್ಟೈಲ್: ಹಾಷಿಕಾ ರಾಮಚಂದ್ರ (ಕರ್ನಾಟಕ)–1, ವೃತ್ತಿ ಅಗರ್ವಾಲ್ (ತೆಲಂಗಾಣ)–2, ಭವ್ಯಾ ಸಚ್‌ದೇವ್ (ದೆಹಲಿ)–3, ಕಾಲ: 4 ನಿ.24.70 ಸೆ., ಕೂಟ ದಾಖಲೆ; 4X200 ಮೀ ಫ್ರೀಸ್ಟೈಲ್ ರಿಲೇ: ಕರ್ನಾಟಕ –1; ಮಹಾರಾಷ್ಟ್ರ–2; ಒಡಿಶಾ– 3, ಕಾಲ: (8 ನಿ. 54.85 ಸೆ.

ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ: ಶುಭಾಂಗ್ ಸ್ಪಿನ್ ಮೋಡಿ

ಪ್ರಣವ್–ಅಬ್ದುಲ್ ದ್ವಿಶತಕದ ಜೊತೆಯಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಕೆಎಸ್‌ಸಿಎ ಕೋಲ್ಟ್ಸ್ ನಾಯಕ ಶುಭಾಂಗ್ ಹೆಗ್ಡೆ (117ಕ್ಕೆ 5) ಸ್ಪಿನ್ ಮೋಡಿಯ ನಡುವೆಯೂ ಡಿ.ವೈ. ಪಾಟೀಲ ಅಕಾಡೆಮಿಯು ದೊಡ್ಡ ಮೊತ್ತ ಕಲೆ ಹಾಕುವಲ್ಲಿ ಯಶಸ್ವಿಯಾಯಿತು. ಅದಕ್ಕೆ ಕಾರಣವಾಗಿದ್ದು ಪ್ರಣವ್ ಕೇಲಾ ಮತ್ತು ಅಬ್ದುಲ್ ಸಮದ್ ಅವರ ದ್ವಿಶತಕದ ಜೊತೆಯಾಟ.

ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ 2ನೇ ದಿನದ ಅಂತ್ಯಕ್ಕೆ ಡಿ.ವೈ. ಪಾಟೀಲ ಅಕಾಡೆಮಿಯು 415 ರನ್ ಕಲೆ ಹಾಕಿದೆ.

ಮಂಗಳವಾರ ಇನಿಂಗ್ಸ್ ಆರಂಭಿಸಿದ ಡಿ.ವೈ. ಪಾಟೀಲ ಅಕಾಡೆಮಿಯ ಆರಂಭಿಕ ಬ್ಯಾಟರ್ ಪ್ರಣವ್ (139; 208 ಎ, 4X21) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ಅಬ್ದುಲ್ ಸಮದ್ (118;125 ಎ, 4X13, 6X6) ಕೂಡ ಶತಕ ದಾಖಲಿಸಿದರು. ಈ ಜೋಡಿಯು 4ನೇ ವಿಕೆಟ್‌ಗೆ 200 ರನ್ (229 ಎಸೆತ) ಕಲೆ ಹಾಕಿತು. ಧೀರಜ್ ಗೌಡ ಅವರು ಸಮದ್ ವಿಕೆಟ್ ಪಡೆಯುವ ಮೂಲಕ ಈ ಜೋಡಿಯನ್ನು ಬೇರ್ಪಡಿಸಿದರು.

32 ಓವರ್ ಬೌಲ್ ಮಾಡಿದ ಶುಭಾಂಗ್, ಸ್ಪಿನ್ ಮೂಲಕ ಎದುರಾಳಿ ತಂಡದ ಬಾಲಂಗೋಚಿ ಬ್ಯಾಟರ್‌ಗಳನ್ನು



ಕೆಎಸ್‌ಸಿಎ ಕೋಲ್ಟ್ಸ್ ಪರ ಐದು ವಿಕೆಟ್ ಉರುಳಿಸಿದ ಶುಭಾಂಗ್ ಹೆಗ್ಡೆ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಪೆವಿಲಿಯನ್‌ಗೆ ಕಳುಹಿಸಿದರು.

ದ್ವಿಶತಕದತ್ತ ಪೊದ್ದಾರ್: ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಒಡಿಶಾ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದಲ್ಲಿ ಬರೋಡಾ ಕ್ರಿಕೆಟ್ ಸಂಸ್ಥೆಯ ಗೋವಿಂದ ಪೊದ್ದಾರ್ (180; 277ಎ, 4X15, 6X2) ದ್ವಿಶತಕದತ್ತ ಹೆಜ್ಜೆ ಇಟ್ಟಿದ್ದಾರೆ. 2ನೇ ದಿನದ ಅಂತ್ಯಕ್ಕೆ ಒಡಿಶಾ 8 ವಿಕೆಟ್‌ಗೆ 386 ರನ್ ಗಳಿಸಿದ್ದು, ಸುಸ್ಥಿತಿಯಲ್ಲಿದೆ. ಎದುರಾಳಿ ತಂಡದ ಪರ ಬಾಬಾ ಸಫಿ ಪಠಾಣ್ 81ಕ್ಕೆ 5 ವಿಕೆಟ್ ಉರುಳಿಸಿ ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ (ಮೈಸೂರು): ಡಾ.ಡಿ. ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 98 ಓವರ್‌ಗಳಲ್ಲಿ 9 ವಿಕೆಟ್‌ಗೆ 416 (ಪ್ರಣವ್ ಕೇಲಾ 139, ಅಬ್ದುಲ್ ಸಮದ್ 118, ಕರ್ಶ್ ಕೊಠಾರಿ 49. ಶುಭಾಂಗ್ ಹೆಗ್ಡೆ 117ಕ್ಕೆ 5, ಧನುಷ್ ಗೌಡ 59ಕ್ಕೆ 1)– ಕೆಎಸ್‌ಸಿಎ ಕೋಲ್ಟ್ಸ್ ವಿರುದ್ಧ.

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಬರೋಡಾ ಕ್ರಿಕೆಟ್ ಸಂಸ್ಥೆ: 119.4 ಓವರ್‌ಗಳಲ್ಲಿ 8 ವಿಕೆಟ್‌ಗೆ 386 (ಗೋವಿಂದ ಪೊದ್ದಾರ್ ಔಟಾಗದೆ 180, ವಿಪ್ಲವ್ ಸಾಮಂತ್ರೆ 66. ಬಾಬಾಸಫಿ ಪಠಾಣ್ 81ಕ್ಕೆ5)– ಒಡಿಶಾ ಕ್ರಿಕೆಟ್ ಸಂಸ್ಥೆ ವಿರುದ್ಧ.

ಬೆಂಗಳೂರು ಪಂದ್ಯಗಳು: ಚಿನ್ನಸ್ವಾಮಿ ಕ್ರೀಡಾಂಗಣ: ಮೊದಲ ಇನಿಂಗ್ಸ್:ಮಧ್ಯಪ್ರದೇಶ ಕ್ರಿಕೆಟ್ ಅಕಾಡೆಮಿ: 79.3 ಓವರ್‌ಗಳಲ್ಲಿ 187. ಕೆಎಸ್‌ಸಿಎ ಇಲೆವನ್: 86.2 ಓವರ್‌ಗಳಲ್ಲಿ 201 (ಕೆ.ವಿ. ಅನೀಶ್ 42, ಸ್ಮರಣ್ ಆರ್. 45, ಆದಿತ್ಯ ನಾಯರ್ 34, ಆರ್ಯನ್ ಪಾಂಡೆ 28ಕ್ಕೆ3, ಅರ್ಷದ್ ಖಾನ್ 37ಕ್ಕೆ2) ಎರಡನೇ ಇನಿಂಗ್ಸ್: ಮಧ್ಯಪ್ರದೇಶ: ವಿಕೆಟ್ ನಷ್ಟವಿಲ್ಲದೇ 4.

ಬಿಜಿಎಸ್ ಮೈದಾನ: ವಿದರ್ಭ: 109.4 ಓವರ್‌ಗಳಲ್ಲಿ 331 (ಅಕ್ಷಯ್ ಕರ್ಣೇವರ್ 78, ಪಾರ್ಥ ರೇಖಡೆ 47, ನಚಿಕೇತ್ ಭೂತೆ 22, ಉಮೇಶ್ ಯಾದವ್ ಔಟಾಗದೆ 23, ರಾಜವೀರ್ ವಾಧ್ವಾ 61ಕ್ಕೆ2, ಎಂ.ಎಸ್. ಭಾಂಡಗೆ 55ಕ್ಕೆ2, ಪಾರಸ್ ಗುರುಭಕ್ಷ ಆರ್ಯ 50ಕ್ಕೆ2) ಕೆಎಸ್‌ಸಿಎ ಅಧ್ಯಕ್ಷರ ಇಲೆವನ್: 67 ಓವರ್‌ಗಳಲ್ಲಿ 7ಕ್ಕೆ200 (ಅನೀಶ್ವರ್ ಗೌತಮ್ 31, ಸುಜಯ್ ಸತೇರಿ ಔಟಾಗದೆ 48, ಅಭಿನವ್ ಮನೋಹರ್ 62, ನಚಿಕೇತ್ ಭೂತೆ 35ಕ್ಕೆ4)

ಆಲೂರು (3): ಮೊದಲ ಇನಿಂಗ್ಸ್: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 63.1 ಓವರ್‌ಗಳಲ್ಲಿ 181. ಆಂಧ್ರ: 51 ಓವರ್‌ಗಳಲ್ಲಿ 188 (ಎಂ. ವಂಶಿಕೃಷ್ಣ 81, ಕೆ.ವಿ. ಶಶಿಕಾಂತ್ 31, ಆದಿತ್ಯ ಗೋಯಲ್ 38ಕ್ಕೆ2, ನಿಶ್ಚಿತ್ ಎನ್ ರಾವ್ 19ಕ್ಕೆ2), ಶಿಖರ್ ಶೆಟ್ಟಿ 39ಕ್ಕೆ5) 2ನೇ ಇನಿಂಗ್ಸ್: ಕರ್ನಾಟಕ: 61 ಓವರ್‌ಗಳಲ್ಲಿ 7ಕ್ಕೆ257 (ವಿಶಾಲ್ ಓನತ್ 65, ಕಿಶನ್ ಬೆದರೆ 40, ಕೆ.ಎಲ್. ಶ್ರೀಜಿತ್ 83, ಶ್ರೇಯಸ್ ಗೋಪಾಲ್ 36, ಜಿ. ಮನೀಶ್ 59ಕ್ಕದ2, ವೈ. ಸಂದೀಪ್ 14ಕ್ಕೆ3).

ಭಾರತ ಎ ತಂಡಕ್ಕೆ ಮಯಂಕ್ ನಾಯಕ

ದುಲೀಪ್ ಟ್ರೋಫಿ; 2ನೇ ಪಂದ್ಯಕ್ಕೆ ಗಿಲ್, ರಾಹುಲ್ ಇಲ್ಲ

ಅನಂತಪುರ(ಪಿಟಿಐ): ಮುಂಬರುವ ಬಾಂಗ್ಲಾದೇಶ ಎದುರಿನ ಟೆಸ್ಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರರಿಗೆ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯದಿಂದ ವಿಶ್ರಾಂತಿ ನೀಡಲಾಗಿದೆ. ಇದರಿಂದಾಗಿ ಶುಭಮನ್ ಗಿಲ್ ಅವರ ಬದಲಿಗೆ ಭಾರತ ಎ ತಂಡವನ್ನು ಕರ್ನಾಟಕದ ಮಯಂಕ್ ಅಗರವಾಲ್ ಮುನ್ನಡೆಸಲಿದ್ದಾರೆ.

ಕೆ.ಎಲ್. ರಾಹುಲ್, ವಿಕೆಟ್‌ಕೀಪರ್ ರಿಷಭ್ ಪಂತ್, ಆಕಾಶದೀಪ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಯಶಸ್ವಿ ಜೈಸ್ವಾಲ್ ಮತ್ತು ಧ್ರುವ ಜುರೇಲ್ ಅವರು ಗುರುವಾರ ಆರಂಭವಾಗುವ ಎರಡನೇ ಪಂದ್ಯದಲ್ಲಿ ಕಣಕ್ಕಿಳಿಯುವುದಿಲ್ಲ.

ಆದರೆ ಟೆಸ್ಟ್ ತಂಡದಲ್ಲಿರುವ ಎಡಗೈ ವೇಗಿ ಯಶ್ ದಯಾಳ್ ಮತ್ತು ಬ್ಯಾಟರ್ ಸರ್ಫರಾಜ್ ಖಾನ್ ಅವರನ್ನು ದುಲೀಪ್ ಟ್ರೋಫಿ ಬಳಗದಲ್ಲಿ ಉಳಿಸಿಕೊಳ್ಳಲಾಗಿದೆ.

ಋತುರಾಜ್ ಗಾಯಕವಾಡ ನಾಯಕರಾಗಿರುವ ಭಾರತ ಸಿ ತಂಡದಲ್ಲಿ



ಮಯಂಕ್ ಅಗರವಾಲ್

ಯಾವುದೇ ಬದಲಾವಣೆಗಳಿಲ್ಲ. ಮೊದಲ ಪಂದ್ಯದಲ್ಲಿ ಆಡಿದ್ದ ತಂಡವೇ ಕಣಕ್ಕಿಳಿಯಲಿದೆ.

ತಂಡಗಳು: ಭಾರತ ಎ: ಮಯಂಕ್ ಅಗರವಾಲ್ (ನಾಯಕ), ರಿಯಾನ್ ಪರಾಗ್, ತಿಲಕ್ ವರ್ಮಾ, ಶಿವಂ ದುಬೆ, ತನುಷ್ ಕೋಟ್ಯಾನ್, ಪ್ರಸಿದ್ಧ ಕೃಷ್ಣ, ಖಲೀಲ್ ಅಹಮದ್, ಆವೇಶ್ ಖಾನ್, ಕುಮಾರ್ ಕುಶಾಗ್ರ, ಶಾಶ್ವತ್ ರಾವತ್, ಪ್ರಥಮ್ ಸಿಂಗ್, ಅಕ್ಷಯ್ ವಾಡೇಕರ್, ಎಸ್.ಕೆ. ರಶೀದ್, ಶಮ್ಸ್ ಮುಲಾನಿ, ಅಕೀಬ್ ಖಾನ್.

ಭಾರತ ಬಿ: ಅಭಿಮನ್ಯು ಈಶ್ವರನ್ (ನಾಯಕ), ಸರ್ಫರಾಜ್ ಖಾನ್, ಮುಷೀರ್ ಖಾನ್, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ನವದೀಪ್ ಸೈನಿ, ಮುಕೇಶ್ ಕುಮಾರ್, ರಾಹುಲ್ ಚಾಹರ್, ಆರ್. ಸಾಯಿಕಿಶೋರ್, ಮೋಹಿತ್ ಅವಸ್ತಿ, ಹಿಮಾಂಶು ಮಂತ್ರಿ(ವಿಕೆಟ್‌ಕೀಪರ್), ಎನ್. ಜಗದೀಶನ್ (ವಿಕೆಟ್‌ಕೀಪರ್), ಸುಯಶ್ ಪ್ರಭುದೇಸಾಯಿ, ರಿಂಕು ಸಿಂಗ್.

ಭಾರತ ಡಿ: ಶ್ರೇಯಸ್ ಅಯ್ಯರ್ (ನಾಯಕ), ಅಥರ್ವ ತೈಡೆ, ಯಶ್ ದುಬೆ, ದೇವದತ್ತ ಪಡಿಕ್ಕಲ್, ರಿಕಿ ಭುಯ್, ಸಾರಾಂಶ್ ಜೈನ್, ಅರ್ಷದೀಪ್ ಸಿಂಗ್, ಆದಿತ್ಯ ಠಾಕ್ರೆ, ಹರ್ಷಿತ್ ರಾಣಾ, ಆಕಾಶ್ ಸೇನ್‌ಗುಪ್ತಾ, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ನಿಶಾಂತ್ ಸಿಂಧು, ವಿದ್ವತ್ ಕಾವೇರಪ್ಪ.

ಸ್ಯಾಫ್ ಅಥ್ಲೆಟಿಕ್ಸ್: ಭಾರತ ತಂಡದಲ್ಲಿ ಕರ್ನಾಟಕದ ಕ್ರೀಡಾಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈನಲ್ಲಿ ಬುಧವಾರ ಆರಂಭವಾಗಲಿರುವ 4ನೇ ದಕ್ಷಿಣ ಏಷ್ಯಾ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್‌ನಲ್ಲಿ ಸ್ಪರ್ಧಿಸಲಿರುವ ಭಾರತ ತಂಡದಲ್ಲಿ ಕರ್ನಾಟಕದ ಐವರು ಅಥ್ಲೀಟ್‌ಗಳು ಸ್ಥಾನ ಪಡೆದಿದ್ದಾರೆ.

ಬೋಪಣ್ಣ (800 ಮೀ ಓಟ), ಉನ್ನತಿ ಅಯ್ಯಪ್ಪ (ಮಹಿಳೆಯರ 100 ಮೀ ಹರ್ಡಲ್ಸ್, 200 ಮೀ ಓಟ), ನಿಯೊಲ್ ಕಾರ್ನೆಲಿಯೊ (4X100 ಮೀ ರಿಲೆ), ವಿ. ಸುಧೀಕ್ಷಾ (100 ಮೀ ಓಟ, 4X100 ಮೀ ರಿಲೆ), ಸಿ. ರಿಹಾನ್ (400 ಮೀ ಓಟ, 4X400 ಮೀ ರಿಲೆ) ಅವರು ಸ್ಪರ್ಧಿಸುವರು. ಶಿವಾನಂದ ಮತ್ತು ಬಿಂದುರಾಣಿ ಅವರು ತರಬೇತುದಾರರಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ ಕಾರ್ಯದರ್ಶಿ ಎ. ರಾಜವೇಲು ತಿಳಿಸಿದ್ದಾರೆ.



ಸ್ಯಾಫ್ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸುವ ಭಾರತ ತಂಡದಲ್ಲಿ ಸ್ಥಾನ ಪಡೆದ ಕರ್ನಾಟಕದ ಅಥ್ಲೀಟ್‌ಗಳು; ಐ.ಎ. ಶಿವಾನಂದ (ಕೋಚ್), ಬೋಪಣ್ಣ, ವಿ. ಸುಧೀಕ್ಷಾ, ಉನ್ನತಿ ಅಯ್ಯಪ್ಪ, ನಿಯೊಲ್ ಅನ್ನಾ ಕಾರ್ನೆಲಿಯೊ, ರಿಹಾನ್, ಬಿಂದುರಾಣಿ(ಕೋಚ್)

ಅಫ್ಗಾನಿಸ್ತಾನ–ನ್ಯೂಜಿಲೆಂಡ್ ಪಂದ್ಯಕ್ಕೆ ಮಳೆ ಅಡ್ಡಿ

ನೊಯ್ಡಾ ಕ್ರೀಡಾಂಗಣದ ಅವ್ಯವಸ್ಥೆ

ಗ್ರೇಟರ್ ನೊಯ್ಡಾ (ಪಿಟಿಐ): ಅಫ್ಗಾನಿಸ್ತಾನ ಮತ್ತು ನ್ಯೂಜಿಲೆಂಡ್ ನಡುವಣ ಏಕೈಕ ಟೆಸ್ಟ್ ಪಂದ್ಯ ನಡೆಯುತ್ತಿರುವ ಶಹೀದ್ ವಿಜಯ್ ಸಿಂಗ್ ಪಥಿಕ್ ಕ್ರೀಡಾ ಸಂಕೀರ್ಣದ ಮೈದಾನವು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿದೆ. ಅದಕ್ಕೆ ಕಾರಣ ಇಲ್ಲಿಯ ಅವ್ಯವಸ್ಥೆ. ಇದರಿಂದಾಗಿ ಈ ಕ್ರೀಡಾಂಗಣದ ಆಡಳಿತ ನೋಡಿಕೊಳ್ಳುವ ಗ್ರೇಟರ್ ನೊಯ್ಡಾ ಪ್ರಾಧಿಕಾರವು ಮುಜುಗರಕ್ಕೆ ಒಳಗಾಗಿದೆ.

ಪಂದ್ಯದ ಮೊದಲ ದಿನ ಸೋಮವಾರ ಮಳೆ ಸುರಿದು ಕ್ರೀಡಾಂಗಣ ಒದ್ದೆಯಾಗಿತ್ತು. ಆದರೆ ಅದನ್ನು ಒಣಗಿಸಿ ಪಂದ್ಯ ಆರಂಭಿಸಲು ಸೂಕ್ತ ವ್ಯವಸ್ಥೆಗಳು ಇಲ್ಲಿ ಇಲ್ಲ. ಹೀಗಾಗಿ ಸಾಧಾರಣ ಟಾರ್ಪಾಲಿನ್ ಮತ್ತು ಫ್ಯಾನ್‌ಗಳನ್ನು ಬಳಸಲಾಯಿತು. ಅದರ ನಂತರ ಡೆಲ್ಲಿ ಡಿಸ್ಟ್ರಿಕ್ಟ್ ಕ್ರಿಕೆಟ್ ಸಂಸ್ಥೆಯಿಂದ ಪಿಚ್ ಕವರ್‌ಗಳು ಮತ್ತು ಉತ್ತರಪ್ರದೇಶ ಕ್ರಿಕೆಟ್ ಸಂಸ್ಥೆಯಿಂದ ಸೂಪರ್ ಸಾಪರ್ ಯಂತ್ರಗಳನ್ನು ಎರವಲು ಪಡೆಯಲಾಗಿದೆ.

ಮಳೆ ಬಂದಾಗ ನಡೆಸುವ



ಮಳೆಯಿಂದಾಗಿ ಒದ್ದೆಯಾದ ಗ್ರೇಟರ್ ನೊಯ್ಡಾ ಕ್ರೀಡಾಂಗಣವನ್ನು ಒಣಗಿಸಲು ವಿದ್ಯುತ್‌ಚಾಲಿತ ಫ್ಯಾನ್ ಬಳಸುತ್ತಿರುವುದು –ಪಿಟಿಐ ಚಿತ್ರ

ಕಾರ್ಯಾಚರಣೆಯ ಕುರಿತ ತರಬೇತಿಯೇ ಇಲ್ಲದ ಸಿಬ್ಬಂದಿಯನ್ನು ಮೈದಾನದಲ್ಲಿ ನಿಯೋಜಿಸಿರುವುದು ಗೊಂದಲಕ್ಕೆ ಕಾರಣವಾಯಿತು.

ಸೋಮವಾರ ಸಂಜೆಯೂ ಸುಮಾರು ಒಂದು ಗಂಟೆ ರಭಸದ ಮಳೆ ಸುರಿದ ಕಾರಣ ಮಂಗಳವಾರವೂ ತೇವ ಉಳಿದಿತ್ತು. ಇದರಿಂದಾಗಿ ಎರಡನೇ ದಿನದಾಟವೂ ನಡೆಯಲಿಲ್ಲ. ಮೈದಾನದ ಮಿಡ್ ಆನ್ ಮತ್ತು ಮಿಡ್ ವಿಕೆಟ್ ಭಾಗಗಳಲ್ಲಿ ಹೆಚ್ಚು ತೇವ ಇದ್ದು ಜಾರುವ ಆತಂಕವಿದೆ. ಆಟಗಾರರ ಸುರಕ್ಷತೆ ಮುಖ್ಯವಾಗಿದ್ದು ಅಂಪೈರ್‌ಗಳು ಆಟಕ್ಕೆ ಅನುಮತಿ ನೀಡಲಿಲ್ಲ.

ಪಂದ್ಯದ ಆಯೋಜನೆಗಾಗಿ ಬಿಸಿಸಿಐ ಅಫ್ಗಾನಿಸ್ತಾನ ಕ್ರಿಕೆಟ್ ಸಂಸ್ಥೆಗೆ ಮೂರು ತಾಣಗಳ ಆಯ್ಕೆ ನೀಡಿತ್ತು. ಅದರಲ್ಲಿ ನೊಯ್ಡಾ, ಕಾನ್ಪುರ ಮತ್ತು ಬೆಂಗಳೂರಿನಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು. ಆದರೆ ಮೊದಲಿನಿಂದಲೂ ತನ್ನ 'ತವರಿನ ತಾಣ'ವಾಗಿರುವ ನೊಯ್ಡಾವನ್ನು ಅಫ್ಗಾನಿಸ್ತಾನ ಆಯ್ಕೆ ಮಾಡಿಕೊಂಡಿತು.

ಕೆಲವು ಸಮುದಾಯ, ಭಾಷೆ, ರಾಜ್ಯಗಳು ಕೀಳು ಎಂದು ಆರ್‌ಎಸ್‌ಎಸ್ ಭಾವಿಸಿದೆ– ರಾಹುಲ್

'ಸಮಾನತೆ ಬಂದಾಗ ಮೀಸಲು ರದ್ದತಿಗೆ ಚಿಂತನೆ'

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಸಮಾನತೆಯ ಸ್ಥಿತಿ ಮೂಡಿದಾಗ ಮೀಸಲಾತಿಯನ್ನು ತೆಗೆದುಹಾಕುವ ಬಗ್ಗೆ ಕಾಂಗ್ರೆಸ್ ಪಕ್ಷವು ಆಲೋಚಿಸಲಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು. ಈಗ ಸಮಾನತೆಯ ಪರಿಸ್ಥಿತಿ ಇಲ್ಲ ಎಂದೂ ಅವರು ಹೇಳಿದರು.

ಪ್ರತಿಷ್ಠಿತ ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆಗಿನ ಸಂವಾದದಲ್ಲಿ, ಮೀಸಲಾತಿಯು ಎಷ್ಟು ಕಾಲ ಮುಂದುವರಿಯಲಿದೆ ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಈ ಮಾತು ಹೇಳಿದರು.

'ಹಣಕಾಸಿನ ಅಂಕಿ–ಅಂಶಗಳನ್ನು ಗಮನಿಸಿದಾಗ; ಪ್ರತಿ ₹100ರಲ್ಲಿ ಆದಿವಾಸಿ ಸಮುದಾಯಗಳಿಗೆ ಸಿಗುತ್ತಿರುವುದು 10 ಪೈಸೆ ಮಾತ್ರ, ದಲಿತರಿಗೆ ಸಿಗುತ್ತಿರುವುದು ₹5, ಒಬಿಸಿಗಳಿಗೆ ಕೂಡ ಸರಿಸುಮಾರು ಇಷ್ಟೇ ಮೊತ್ತ ಸಿಗುತ್ತಿದೆ ಎಂಬುದು ಗೊತ್ತಾಗುತ್ತದೆ. ಈ ಸಮುದಾಯಗಳ ಪಾಲ್ಗೊಳ್ಳುವಿಕೆಗೆ ಅವಕಾಶ ಸಿಗುತ್ತಿಲ್ಲ ಎಂಬುದು ವಾಸ್ತವ' ಎಂದರು.

'ದೇಶದ ಶೇ 90ರಷ್ಟು ಮಂದಿಗೆ ಪಾಲುದಾರಿಕೆಯ ಅವಕಾಶ ಸಿಗುತ್ತಿಲ್ಲ. ಭಾರತದ ಉದ್ಯಮಿಗಳ ಪಟ್ಟಿಯನ್ನು ಗಮನಿಸಿ. ಆದಿವಾಸಿ ಸಮುದಾಯಗಳಿಗೆ ಸೇರಿದವರ ಹೆಸರನ್ನು ತೋರಿಸಿ, ದಲಿತರ ಹೆಸರು ತೋರಿಸಿ, ಒಬಿಸಿ ಹೆಸರು ತೋರಿಸಿ. ಮುಂಚೂಣಿ 200 ಉದ್ಯಮಿಗಳ ಪೈಕಿ ಒಬಿಸಿಗೆ ಸೇರಿದ ಒಬ್ಬರು ಮಾತ್ರ ಇದ್ದಾರೆ. ಒಬಿಸಿಗೆ ಸೇರಿದವರ ಸಂಖ್ಯೆಯು ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿದೆ. ಆದರೆ ನಾವು ರೋಗಲಕ್ಷಣಕ್ಕೆ ಚಿಕಿತ್ಸೆ ನೀಡುತ್ತಿಲ್ಲ' ಎಂದು ಹೇಳಿದರು.

ಏಕರೂಪಿ ನಾಗರಿಕ ಸಂಹಿತೆ ಕುರಿತ ಪ್ರಶ್ನೆಗೆ ರಾಹುಲ್ ಅವರು, ಆ ಬಗ್ಗೆ ಬಿಜೆಪಿಯ ಪ್ರಸ್ತಾವ ಏನು ಎಂಬುದು ಗೊತ್ತಾದ ನಂತರವೇ ಪ್ರತಿಕ್ರಿಯೆ ನೀಡುವುದಾಗಿ ಹೇಳಿದರು. 'ಬಿಜೆಪಿಯವರು ಏಕರೂಪಿ ನಾಗರಿಕ ಸಂಹಿತೆಯನ್ನು ಪ್ರಸ್ತಾಪಿಸಿದ್ದಾರೆ. ಅದನ್ನು ನಾನು ಗಮನಿಸಿಲ್ಲ. ಅವರು ಏನು ಮಾತನಾಡುತ್ತಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ. ಅವರು ಅದನ್ನು ಬಹಿರಂಗಪಡಿಸಿದಾಗ ಮಾತ್ರ ಪರಿಶೀಲಿಸಿ, ಪ್ರತಿಕ್ರಿಯೆ ನೀಡುವೆ' ಎಂದರು.

'ಇಂಡಿಯಾ' ಮೈತ್ರಿಕೂಟದ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಇದ್ದರೂ, ಹಲವು ವಿಷಯಗಳಲ್ಲಿ ಸಹಮತ ಕೂಡ ಇದೆ ಎಂದರು. 'ಜಾತಿಗಣತಿ ವಿಚಾರದಲ್ಲಿ ನಮ್ಮಲ್ಲಿ ಬಹುತೇಕರಲ್ಲಿ ಸಹಮತವಿದೆ. ಇಬ್ಬರು ಉದ್ಯಮಿಗಳು, ಅಂದರೆ ಅಂಬಾನಿ ಮತ್ತು ಅದಾನಿ, ಭಾರತದ ಅಷ್ಟೂ ಉದ್ಯಮಗಳನ್ನು ನಡೆಸುವಂತಾಗಬಾರದು ಎಂಬ ವಿಚಾರದಲ್ಲಿಯೂ ಸಹಮತ ಇದೆ' ಎಂದು ತಿಳಿಸಿದರು.



ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದ ಜಾರ್ಜ್‌ಟೌನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ಪಿಟಿಐ ಚಿತ್ರ

ಜಾರ್ಜ್‌ಟೌನ್ ವಿ.ವಿಯಲ್ಲಿ ರಾಹುಲ್ ಹೇಳಿದ್ದು

- ನರೇಂದ್ರ ಮೋದಿ ಸೃಷ್ಟಿಸಿದ್ದ ಭೀತಿಯು ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರದಲ್ಲಿ ಇಲ್ಲವಾಗಿದೆ. ಈ ಭೀತಿ ಸೃಷ್ಟಿಸಲು ವರ್ಷಗಳೇ ಬೇಕಾಗಿದ್ದವು. ಆದರೆ ಅದು ಒಂದೇ ಕ್ಷಣದಲ್ಲಿ ಇಲ್ಲವಾಯಿತು.
- ಮೋದಿ ಅವರ ಕುರಿತ ಪರಿಕಲ್ಪನೆ, ಅಂದರೆ 56 ಇಂಚುಗಳ ಎದೆ, ದೇವರ ಜೊತೆ ನೇರ ಸಂಭಾಷಣೆ ಇಂಥವೆಲ್ಲ ಮಾಯವಾದವು.
- ಲೋಕಸಭಾ ಚುನಾವಣೆಯು ಮುಕ್ತವಾಗಿ ನಡೆದಿರಲಿಲ್ಲ. ಬಹಳ ನಿಯಂತ್ರಿತವಾಗಿ ಅದು ನಡೆದಿತ್ತು. ಚುನಾವಣೆ ಮುಕ್ತವಾಗಿ ಇದ್ದಿದ್ದರೆ ಬಿಜೆಪಿಯು 246 ಸೀಟುಗಳ ಸನಿಹಕ್ಕೆ ಬರುತ್ತಿತ್ತು ಎಂದೂ ನಾನು ಭಾವಿಸಿಲ್ಲ. ಬಿಜೆಪಿಗೆ ಆರ್ಥಿಕವಾಗಿ ಬಹಳ ಅನುಕೂಲಗಳಿದ್ದವು.
- ಚುನಾವಣಾ ಆಯೋಗವು ಬಿಜೆಪಿಗೆ ಬೇಕಿದ್ದುದನ್ನು ಮಾಡುತ್ತಿತ್ತು. ಮೋದಿ ಅವರಿಗೆ ತಮ್ಮ ಕಾರ್ಯಸೂಚಿಯನ್ನು ಜಾರಿಗೆ ತರಲು ಅನುಕೂಲವಾಗುವ ರೀತಿಯಲ್ಲಿ ಇಡೀ ಚುನಾವಣಾ ಪ್ರಚಾರವನ್ನು ರೂಪಿಸಲಾಯಿತು.
- ಕಾಂಗ್ರೆಸ್ ಪಕ್ಷವು ತನ್ನ ಬ್ಯಾಂಕ್ ಖಾತೆ ಸ್ಥಗಿತಗೊಂಡಿದ್ದರೂ ಚುನಾವಣೆ ಎದುರಿಸಿತು, ಮೋದಿ ಕುರಿತ ಪರಿಕಲ್ಪನೆಯೊಂದನ್ನು ಧ್ವಂಸಗೊಳಿಸಿತು. ಮೋದಿ ಅವರು ಮಾನಸಿಕವಾಗಿ ಸಿಕ್ಕಿಹಾಕಿಕೊಂಡಿದ್ದಾರೆ. ಇವೆಲ್ಲ ಸಾಧ್ಯವಾಗಿದ್ದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಆಗುತ್ತಿಲ್ಲ.

ಆರ್‌ಎಸ್‌ಎಸ್ ವಿರುದ್ಧ ಮುಂದುವರಿದ ವಾಗ್ದಾಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೆಲವು ಧರ್ಮಗಳು, ಕೆಲವು ಭಾಷೆಗಳು ಮತ್ತು ಕೆಲವು ಸಮುದಾಯಗಳು ಇತರರಿಗಿಂತ ಕೀಳು ಎಂದು ಭಾವಿಸುತ್ತದೆ ರಾಹುಲ್ ದೂರಿದರು. ಭಾರತದಲ್ಲಿನ ಹೋರಾಟವು ಈ ವಿಚಾರದ ಕುರಿತಾಗಿದೆಯೇ ವಿನಾ ಅದು ರಾಜಕೀಯಕ್ಕೆ ಸಂಬಂಧಿಸಿಲ್ಲ ಎಂದು ಹೇಳಿದರು.

ಇಲ್ಲಿನ ಹಂಡನ್‌ನಲ್ಲಿ ಭಾರತೀಯ ಅಮೆರಿಕನ್ನರನ್ನು ಉದ್ದೇಶಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿದ್ದ ಸಿಖ್ ಸಮುದಾಯದವರೊಬ್ಬರನ್ನು ಉದ್ದೇಶಿಸಿ, 'ಟರ್ಬನ್ ಸುತ್ತಿಕೊಂಡಿರುವ ನಿಮ್ಮ ಹೆಸರೇನು' ಎಂದು ಕೇಳಿದರು.

'ಸಿಖ್ಖರೊಬ್ಬರಿಗೆ ಭಾರತದಲ್ಲಿ ಟರ್ಬನ್ ಧರಿಸಲು ಅವಕಾಶ ಇದೆಯೇ? ಈ ವಿಷಯವಾಗಿ ಹೋರಾಟ ನಡೆದಿದೆ. ಸಿಖ್ಖರಾಗಿ ಅವರಿಗೆ ಗುರುದ್ವಾರಕ್ಕೆ ಹೋಗಲು ಸಾಧ್ಯವೇ? ಇದಕ್ಕೂ ಹೋರಾಟ ನಡೆದೇ ಇದೆ. ಎಲ್ಲ ಧರ್ಮಗಳ ವಿಚಾರದಲ್ಲಿಯೂ ಇಂತಹುದು ಆಗುತ್ತಿದೆ' ಎಂದು ರಾಹುಲ್ ಪ್ರತಿಪಾದಿಸಿದರು.

ಆರ್‌ಎಸ್‌ಎಸ್‌ನ ನೀತಿಗಳು ಹಾಗೂ ದೇಶದ ಕುರಿತು ಆ ಸಂಘಟನೆ ಹೊಂದಿರುವ ದೃಷ್ಟಿಕೋನವನ್ನು ಟೀಕಿಸಿದ ರಾಹುಲ್, 'ಕೆಲವು ರಾಜ್ಯಗಳು ಇತರ ರಾಜ್ಯಗಳಿಗಿಂತ ಕೀಳು ಎಂದು ಆರ್‌ಎಸ್‌ಎಸ್ ಹೇಳುತ್ತದೆ. ಕೆಲವು ಭಾಷೆಗಳು ಇತರ ಭಾಷೆಗಳಿಗಿಂತ ಕೀಳು ಎನ್ನುತ್ತದೆ. ಕೆಲವು ಧರ್ಮಗಳು ಇತರ ಧರ್ಮಗಳಿಗಿಂತ ಕೀಳು ಎನ್ನುತ್ತದೆ. ಕೆಲವು ಸಮುದಾಯಗಳು ಇತರ ಧರ್ಮಗಳಿಗಿಂತ ಕೀಳು ಎನ್ನುತ್ತದೆ. ಇದರ ಬಗೆಗೂ ಹೋರಾಟ ನಡೆದಿದೆ' ಎಂದರು.

'...ಇದು ಆರ್‌ಎಸ್‌ಎಸ್‌ನ ಸಿದ್ಧಾಂತ. ತಮಿಳು, ಮರಾಠಿ, ಬಂಗಾಳಿ, ಮಣಿಪುರಿ. ಇವೆಲ್ಲ ಕೀಳು ಭಾಷೆಗಳು. ಹೋರಾಟವು ಇದರ ಬಗ್ಗೆ ಇದೆ' ಎಂದು ಅವರು ಹೇಳಿದರು. ಬಿಜೆಪಿಯು ಭಾರತವನ್ನು ಅರ್ಥ ಮಾಡಿಕೊಂಡಿಲ್ಲ ಎಂದು ಅವರು ದೂರಿದರು.

ಅಪಾಯಕಾರಿ ಸಂಕಥನ ಸೃಷ್ಟಿಗೆ ರಾಹುಲ್ ಯತ್ನ: ಬಿಜೆಪಿ ಕಿಡಿ

ನವದೆಹಲಿ (ಪಿಟಿಐ): ಸಿಖ್ ಸಮುದಾಯದ ವಿಚಾರವಾಗಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ಆಡಿರುವ ಮಾತುಗಳ ಕುರಿತು ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿಯು, ಸೂಕ್ಷ್ಮ ವಿಷಯಗಳ ಬಗ್ಗೆ ವಿದೇಶಗಳಲ್ಲಿ ಮಾತನಾಡಿ, ಅಪಾಯಕಾರಿ ಸಂಕಥನವನ್ನು ಸೃಷ್ಟಿಸಲು ರಾಹುಲ್ ಯತ್ನಿಸುತ್ತಿದ್ದಾರೆ ಎಂದು ಹೇಳಿದೆ.



ಹರದೀಪ್ ಸಿಂಗ್ ಪುರಿ

ಬಿಜೆಪಿಯ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ಅವರು, 'ನಿತ್ಯದ ಜೀವನಕ್ಕೆ ವಿದೇಶಗಳಲ್ಲಿ ಕಷ್ಟಪಡುತ್ತಿರುವ ಸಿಖ್ ಸಮುದಾಯದವರಲ್ಲಿ ಸುಳ್ಳುಗಳನ್ನು ಹರಡಲು ರಾಹುಲ್ ಯತ್ನಿಸಿದ್ದಾರೆ, ಅವರ ಹೇಳಿಕೆಗಳು ಅಪಶಕುನದಂತೆ ಇವೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಸಿಖ್ಖರಿಗೆ ಟರ್ಬನ್ ಧರಿಸಲು ಆಗುತ್ತಿಲ್ಲ ಎಂದು ರಾಹುಲ್ ನೀಡಿರುವ ಹೇಳಿಕೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ' ಎಂದು ಸಿಖ್ ಸಮುದಾಯಕ್ಕೆ ಸೇರಿರುವ ಸಚಿವ ಸಿಂಗ್ ಹೇಳಿದರು.

ಕಾಂಗ್ರೆಸ್ ಆಡಳಿತ ಇದ್ದಾಗ, 1984ರಲ್ಲಿ ನಡೆದ ಸಿಖ್ ವಿರೋಧಿ ದಂಗೆಯನ್ನು ಉಲ್ಲೇಖಿಸಿದ ಪುರಿ ಅವರು, 'ಒಂದು ಸಮುದಾಯವಾಗಿ ನಾವು ಆತಂಕವನ್ನು ಎದುರಿಸಿದ, ಅಭದ್ರತೆಯ ಭಾವನೆ ಅನುಭವಿಸಿದ ಹಾಗೂ ಅಸ್ತಿತ್ವಕ್ಕೆ ಬೆದರಿಕೆ ಎದುರಾಗಿದ್ದನ್ನು ಕಂಡ ಸಂದರ್ಭ ಇತಿಹಾಸದಲ್ಲಿ ಇದೆಯೆಂದಾದರೆ ಅದು ರಾಹುಲ್ ಅವರ ಕುಟುಂಬವು ಅಧಿಕಾರದಲ್ಲಿ ಇದ್ದಾಗಿನ ಸಂದರ್ಭ' ಎಂದರು.

'1984ರಲ್ಲಿ ಸಿಖ್ ಸಮುದಾಯವನ್ನು ಗುರಿಯಾಗಿಸಿಕೊಂಡು ಹತ್ಯಾಕಾಂಡವೊಂದು ನಡೆಯಿತು. ಮೂರು ಸಾವಿರ ಮಂದಿ ಅಮಾಯಕರನ್ನು ಹತ್ಯೆ ಮಾಡಲಾಯಿತು. ಜನರನ್ನು ಮನೆಗಳಿಂದ ಹೊರಗೆಳೆದು, ಅವರ ಸುತ್ತ ಟಯರ್ ಇರಿಸಿ, ಜೀವಂತವಾಗಿ ಅವರನ್ನು ಸುಡಲಾಯಿತು' ಎಂದು ಪುರಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಹುಲ್ ಅವರು ಈಚೆಗೆ 'ನಮ್ಮ ರಾಷ್ಟ್ರೀಯ ಅಸ್ಮಿತೆ, ವಿವಿಧತೆಯಲ್ಲಿನ ಏಕತೆಯ ಶಕ್ತಿಯ' ಕುರಿತು ಹೇಳಿಕೆಗಳನ್ನು ನೀಡುತ್ತಿದ್ದಾರೆ. 'ಅವರು ಹೊಸ ಸಂಕಥನವೊಂದನ್ನು ಹುಟ್ಟುಹಾಕಲು ಯತ್ನಿಸುತ್ತಿದ್ದಾರೆ. ನನ್ನ ಪ್ರಕಾರ ಇದು ಅಪಾಯಕಾರಿ ಸಂಕಥನ' ಎಂದು ಅವರು ಹೇಳಿದರು.

ಮುಖ್ಯಾಂಶಗಳು

- ವಿದೇಶಗಳಲ್ಲಿರುವ ಸಿಖ್ ಸಮುದಾಯದವರಲ್ಲಿ ಸುಳ್ಳು ಹರಡಲು ಯತ್ನ
- ಸಿಖ್ಖರು ಟರ್ಬನ್ ಧರಿಸಲು ಆಗುತ್ತಿಲ್ಲ ಎಂಬ ರಾಹುಲ್ ಹೇಳಿಕೆಗೆ ಸಚಿವ ಖಂಡನೆ

ಬಿಜೆಪಿ ಟೀಕೆಗೆ ಕಾಂಗ್ರೆಸ್ ತಿರುಗೇಟು

ಲೋಕಸಭೆಯ ವಿರೋದ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ಆಡಿರುವ ಮಾತುಗಳ ಬಗ್ಗೆ ಬಿಜೆಪಿ ಮಾಡಿರುವ ಟೀಕೆಗೆ ತಿರುಗೇಟು ನೀಡಿರುವ ಕಾಂಗ್ರೆಸ್ ಪಕ್ಷವು, 'ಆಡಳಿತಾರೂಢ ಪಕ್ಷವು ದೇಶ ಅಂದರೆ ತಾನು ಎಂದು ಭಾವಿಸಬಾರದು' ಎಂದು ಹೇಳಿದೆ.

ಕೇಂದ್ರ ಸರ್ಕಾರದ ನೀತಿಗಳ ಬಗ್ಗೆ ಟೀಕೆ ಮಾಡುವುದನ್ನು ತಾನು ಮುಂದುವರಿಸುವುದಾಗಿ ಕಾಂಗ್ರೆಸ್ ಸ್ಪಷ್ಟಪಡಿಸಿದೆ.


ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ರಾಹುಲ್ ಅವರು ಸತ್ಯವನ್ನು ಮಾತನಾಡಿರುವ ಕಾರಣಕ್ಕೆ ಬಿಜೆಪಿಯವರಿಗೆ ಭೀತಿ ಉಂಟಾಗಿದೆ' ಎಂದು ಹೇಳಿದರು.

'ಮೋದಿ ಗುಳ್ಳೆ ಒಡೆದುಹೋಗಿದೆ. ಅವರು ಪಾಲಿಸುತ್ತಿದ್ದ ಭೀತಿಯ ರಾಜಕಾರಣ ಸೋತಿದೆ. ಮೋದಿ ಅವರನ್ನಾಗಲಿ, ಅವರ ಹೊಗಳುಭಟರನ್ನಾಗಲಿ ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ' ಎಂದು ವೇಣುಗೋಪಾಲ್ ಹೇಳಿದರು.

ಬಿಜೆಪಿಯವರು ಅರ್ಥವಿಲ್ಲದ ಆಕ್ರೋಶ ವ್ಯಕ್ತಪಡಿಸುವ ಬದಲು, ಟೀಕೆಗಳನ್ನು ರಚನಾತ್ಮಕವಾಗಿ ಸ್ವೀಕರಿಸಿದರೆ ಚೆನ್ನ ಎಂದು ವೇಣುಗೋಪಾಲ್ ಅವರು ಹೇಳಿದರು.

ಚೀನಾದಲ್ಲಿ ಅದಾನಿ ಕಂಪನಿ: ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಚೀನಾದಲ್ಲಿ 'ಅದಾನಿ ಎನರ್ಜಿ ರಿಸೋರ್ಸಸ್ (ಶಾಂಘೈ)' ಎನ್ನುವ ಕಂಪನಿಯನ್ನು ತೆರೆದಿದೆ. ಈ ಬಗ್ಗೆ ಸಮೂಹವು ಸೆಪ್ಟೆಂಬರ್ 2ರಂದು ಸೆಬಿಗೆ ಮಾಹಿತಿ ನೀಡಿದ್ದು ಈ ಕುರಿತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಮಂಗಳವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.



ಜೈರಾಮ್ ರಮೇಶ್

'ಅದಾನಿ ಅವರು ಚೀನಾದಲ್ಲಿ ಕಂಪನಿ ತೆರೆದಿರುವುದು ದೇಶದ ಭದ್ರತೆ ಹಾಗೂ ಭೌಗೋಳಿಕ ಸಾರ್ವಭೌಮತೆಗೆ ಬೆದರಿಕೆ ಒಡ್ಡಿದಂತಾಗಿದೆ. ಮೋದಿ ಹಾಗೂ ಅದಾನಿ ಅವರ 'ವಿಶೇಷ ಸ್ನೇಹ'ಕ್ಕಾಗಿ ದೇಶದ ಹಿತಾಸಕ್ತಿ ಬಲಿ ಕೊಟ್ಟ ದೃಷ್ಟಾಂತಗಳ ಪಟ್ಟಿ ಬೆಳೆಯುತ್ತಲೇ ಇದೆ' ಎಂದು ಕುಟುಕಿದ್ದಾರೆ.

'2020ರ ಜೂನ್ 19ರಂದು ಚೀನಾವು ದೇಶದೊಳಗೆ ನುಗ್ಗಿಯೇ ಇಲ್ಲ ಎಂದು ಅತಿಮಾನುಷ ಪ್ರಧಾನಿ ಮೋದಿ ಅವರು ಚೀನಾವು ನಿರ್ದೋಷಿ ಎಂದು ಹೇಳಿದ್ದರು. ಈಗ ಅದಾನಿ ಸಮೂಹವು ಚೀನಾದಲ್ಲಿ ಕಂಪನಿ ತೆರೆಯುತ್ತಿದೆ. ಬಹುಶಃ ಚೀನಾ ನಿರ್ದೋಷಿ ಎಂದು ಹೇಳಿದ್ದು ಈ ಕಂಪನಿ ಆರಂಭಕ್ಕೆ ಅನುಕೂಲವಾಯಿತು' ಎಂದರು.

'ಅದಾನಿ ಸಮೂಹವು ಈ ಹಿಂದೆ ಚೀನಾ ಹಾಗೂ ಪೂರ್ವ ಏಷ್ಯಾದಲ್ಲಿ ಕೆಲವು ವ್ಯವಹಾರಗಳನ್ನು ನಡೆಸಿದೆ. ಇವೆಲ್ಲವೂ ಅನುಮಾನಾಸ್ಪದವಾಗಿ ಕಂಡಿವೆ. ಚಾಂಗ್ ಚುಂಗ್ ಲೀ ಎನ್ನುವ ಥೈವಾನ್ ಉದ್ಯಮಿಯು ಅದಾನಿ ಸಮೂಹದ ಹಲವು ಕಂಪನಿಗಳಲ್ಲಿ ನಿರ್ದೇಶಕನಾಗಿ ಕೆಲಸ ಮಾಡಿದ್ದಾರೆ. ಈ ಉದ್ಯಮಿಯ ಕುಟುಂಬಸ್ಥರಿಗೆ ಸೇರಿದ ಹಡಗಿನಲ್ಲಿ ಅಕ್ರಮವಾಗಿ ತೈಲವನ್ನು ಉತ್ತರ ಕೋರಿಯಾಕ್ಕೆ ರವಾನಿಸಲಾಗುತ್ತಿತ್ತು. ಇದು ವಿಶ್ವಸಂಸ್ಥೆಯ ನಿರ್ದೇಶನಕ್ಕೆ ವಿರುದ್ಧವಾದ ನಡೆಯಾಗಿತ್ತು. ಈ ಅಕ್ರಮ ತೈಲ ಸಾಗಣೆಯಲ್ಲಿ ಶಾಂಘೈ ಅದಾನಿ ಶಿಪ್ಪಿಂಗ್ ಕಂಪನಿಯ ಭಾಗಶಃ ಪಾಲೂ ಇತ್ತು' ಎಂದು ಆರೋಪಿಸಿದರು.

'ಚುಂಗ್ ಲಿಂಗ್ ಅವರ 'ಹೀ ಲಿಂಗೋಸ್' ಕಂಪನಿಯೊಂದಿಗೆ ವ್ಯವಹಾರ ನಡೆಸಿದ ಅದಾನಿ ಶಾಂಘೈ ಶಿಪ್ಪಿಂಗ್ ಕಂಪನಿ, ಅದಾನಿ ಗ್ಲೋಬಲ್ ಕಂಪನಿ– ಈ ಎಲ್ಲ ಕಂಪನಿಗಳು ಹಲವು ಅಕ್ರಮ ಚಟುವಟಿಕೆಗಳಲ್ಲಿ ತೊಡಗಿವೆ' ಎಂದು ದೂರಿದರು.

'ರಾಷ್ಟ್ರೀಯ ಭದ್ರತೆಗೆ ಕಂಟಕ'

'ಶ್ರೀಲಂಕಾ, ಕೆನ್ಯಾ ಹಾಗೂ ಆಸ್ಟ್ರೇಲಿಯಾದಲ್ಲಿನ ಉದ್ಯಮಿ ಗೌತಮ್ ಅದಾನಿ ಅವರ ಉದ್ಯಮವು ಭಾರತಕ್ಕೆ ಕಂಟಕವನ್ನೇ ತಂದೊಡ್ಡಿದೆ. ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಚಳವಳಿಗೆ ಅದಾನಿ ವಿದ್ಯುತ್ ಯೋಜನೆಯೂ ಒಂದು ಕಾರಣ. ಆದ್ದರಿಂದ, ಅದಾನಿ ಸಮೂಹದ ವ್ಯಾವಹಾರಿಕ ಹಿತಾಸಕ್ತಿಗೆ ಅನುಗುಣವಾಗಿ ಭಾರತವು ವಿದೇಶಿ ನೀತಿಯನ್ನು ಅಳವಡಿಸಿಕೊಳ್ಳುತ್ತಿದೆ. ಇದರಿಂದ ದೇಶಕ್ಕೆ ಶತ್ರುಗಳು ಹೆಚ್ಚುತ್ತಿದ್ದಾರೆ' ಎಂದು ಜೈರಾಮ್ ರಮೇಶ್ ಅಭಿಪ್ರಾಯಪಟ್ಟರು.

ಸೈಬರ್ ಅಪರಾಧ ತಡೆಗೆ ಕೇಂದ್ರ ಸ್ಥಾಪನೆ: ಅಮಿತ್ ಶಾ

ಒಂದನೇ ಪುಟದಿಂದ...

'ಜಾಗತಿಕ ಡಿಜಿಟಲ್ ವಹಿವಾಟಿನ ಶೇ 46ರಷ್ಟು ಪ್ರಕ್ರಿಯೆಗಳು ಈಗ ಭಾರತದಲ್ಲಿಯೇ ನಡೆಯುತ್ತವೆ.ಸೈಬರ್ ಅಪರಾಧದ ವಿರುದ್ಧದ ಹೋರಾಟದಲ್ಲಿ ಎಲ್ಲ ಭಾಗೀದಾರರು, ಗಡಿಗಳನ್ನು ಮೀರಿ ಒಂದುಗೂಡಬೇಕಾಗಿದೆ' ಎಂದರು.

ಆನ್‌ಲೈನ್ ಮೂಲಕ ನಗದು ವಂಚನೆ, ಸುಳ್ಳು ಸುದ್ದಿ ಹರಡುವಿಕೆ, ಮಹಿಳೆಯರು ಹಾಗೂ ಮಕ್ಕಳನ್ನು ನಿಂದಿಸುವ ಪ್ರವೃತ್ತಿ ಸೇರಿದಂತೆ ಸೈಬರ್ ಅಪರಾಧಿಗಳ ಒಟ್ಟು ಕಾರ್ಯಶೈಲಿಯನ್ನು ಗುರುತಿಸಲು ಕೃತಕ ಬುದ್ಧಿಮತ್ತೆಯನ್ನು (ಎ.ಐ) ಬಳಸಿಕೊಳ್ಳಬೇಕಾದ ಅಗತ್ಯವನ್ನು ಗೃಹಸಚಿವರು ಇದೇ ಸಂದರ್ಭದಲ್ಲಿ ಪ್ರತಿಪಾದಿಸಿದರು.

ಸೈಬರ್ ಅಪರಾಧ ಕುರಿತ ಶಂಕಿತ ಮಾಹಿತಿಗಳನ್ನು ಈಗಾಗಲೇ ಹಲವು ರಾಜ್ಯಗಳು ಹೊಂದಿವೆ. ಆದರೆ, ರಾಷ್ಟ್ರ ಮಟ್ಟದಲ್ಲಿ ಸಮಗ್ರವಾಗಿ ಇದು ಲಭ್ಯ ಇಲ್ಲ. ಈ ಸ್ಥಿತಿಯು, ಪರಿಣಾಮಕಾರಿಯಾದ ಕಾರ್ಯಾಚರಣೆಗೂ ತೊಡಕಾಗಿದೆ. ರಾಷ್ಟ್ರ ಮಟ್ಟದಲ್ಲಿ ಸಮಾನ ವೇದಿಕೆ ಬೇಕಾಗಿದೆ ಎಂಬ ಕಾರಣಕ್ಕೆ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಎಂದರು.

15 ಸಾವಿರ ಕಾರ್ಮಿಕರಿಗೆ ಇಸ್ರೇಲ್ ಬೇಡಿಕೆ

ಮುಂಬೈ: 10 ಸಾವಿರ ಕಟ್ಟಡ ನಿರ್ಮಾಣ ಕಾರ್ಮಿಕರ ಅಗತ್ಯವಿದ್ದು, ಮತ್ತೆ ನೇಮಕ ಪ್ರಕ್ರಿಯೆ ನಡೆಸಿಕೊಡುವಂತೆ ಭಾರತಕ್ಕೆ ಇಸ್ರೇಲ್ ಮನವಿ ಮಾಡಿದೆ. ಅಲ್ಲದೇ, ಮನೆ ಆರೈಕೆಗಾಗಿ 5 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಡುವಂತೆಯೂ ಕೋರಿದೆ.

ಇಸ್ರೇಲ್ ಮನವಿಗೆ ಸ್ಪಂದಿಸಿರುವ ರಾಷ್ಟ್ರೀಯ ಕೌಶಲಾಭಿವೃದ್ಧಿ ನಿಗಮ (ಎನ್‌ಎಸ್‌ಡಿಸಿ), ಈ ಸಂಬಂಧ ಎಲ್ಲ ರಾಜ್ಯಗಳಿಗೆ ಪತ್ರ ಬರೆದಿದೆ.

ಕಟ್ಟಡ ನಿರ್ಮಾಣ ಕಾರ್ಮಿಕರ ನೇಮಕ ಪ್ರಕ್ರಿಯೆ ಈ ಬಾರಿ ಮಹಾರಾಷ್ಟ್ರದಲ್ಲಿ ನಡೆಯಲಿದೆ.

ಯುಎಇ: ಚಿನ್ನ ಕಳ್ಳಸಾಗಣೆ ಆರೋಪಿ ಭಾರತಕ್ಕೆ

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಚಿನ್ನ ಕಳ್ಳಸಾಗಣೆ ಜಾಲದ ಪ್ರಮುಖ ಸದಸ್ಯನನ್ನು ಯುಎಇಯಿಂದ ಭಾರತಕ್ಕೆ ಕರೆತರಲಾಗಿದೆ. ಈತನ ವಿರುದ್ಧ ಇಂಟರ್‌ಪೋಲ್ ರೆಡ್ ನೋಟಿಸ್ ಜಾರಿಯಾಗಿತ್ತು.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಮುನಿಯಾದ್ ಅಲಿಖಾನ್‌ನನ್ನು ಎನ್‌ಐಎ ಮತ್ತು ಇಂಟರ್‌ಪೋಲ್ ಸಹಯೋಗದಲ್ಲಿ ಸಿಬಿಐ ಭಾರತಕ್ಕೆ ಕರೆತಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುಎಇಯಿಂದ ಜೈಪುರ್ ವಿಮಾನ ನಿಲ್ದಾಣಕ್ಕೆ ಬಂದಿಳಿದ ಈತನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದರು.

ಚಿನ್ನದ ಗಟ್ಟಿಗಳನ್ನು ರಿಯಾದ್, ಸೌದಿ ಅರೇಬಿಯದಿಂದ ಭಾರತಕ್ಕೆ ಕಳ್ಳಸಾಗಣೆ ಮಾಡುವಲ್ಲಿ ಈತನ ಪಾತ್ರ ಪ್ರಮುಖವಾಗಿತ್ತು ಎಂದು ಸಿಬಿಐನ ವಕ್ತಾರರು ತಿಳಿಸಿದ್ದಾರೆ. ಇತರ ಇಬ್ಬರು ಆರೋಪಿಗಳನ್ನು ಸೌದಿ ಅರೇಬಿಯದಿಂದ ಕರೆತರಲಾಗಿತ್ತು.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್: ಪದಕ ವಿಜೇತರಿಗೆ ನಗದು ಬಹುಮಾನ ಪ್ರದಾನ

ಚಿನ್ನ ಗೆದ್ದವರಿಗೆ ₹75 ಲಕ್ಷ



ಪ್ಯಾರಾಲಿಂಪಿಕ್ಸ್ ಪದಕ ವಿಜೇತರಿಗೆ ನವದೆಹಲಿಯಲ್ಲಿ ಮಂಗಳವಾರ ನಡೆದ ಅಭಿನಂದನೆ ಮತ್ತು ನಗದು ಬಹುಮಾನ ಪ್ರದಾನ ಸಮಾರಂಭದ ವೇಳೆ ಚಿನ್ನದ ಪದಕ ವಿಜೇತ ಅಥ್ಲೀಟ್ ಸುಮಿತ್ ಅಂಟಿಲ್ (ಬಲಗಡೆ) ಅವರಿಗೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ (ಮಧ್ಯದಲ್ಲಿ) ₹75 ಲಕ್ಷದ ಚೆಕ್ ನೀಡಿದರು

ನವದೆಹಲಿ (ಪಿಟಿಐ): ಪ್ಯಾರಿಸ್‌ನಲ್ಲಿ ಮುಕ್ತಾಯಗೊಂಡ ಪ್ಯಾರಾಲಿಂಪಿಕ್ಸ್ ಕ್ರೀಡೆಗಳಲ್ಲಿ ಚಿನ್ನ ಗೆದ್ದ ಭಾರತದ ಕ್ರೀಡಾಪಟುಗಳಿಗೆ ₹75 ಲಕ್ಷ, ಬೆಳ್ಳಿ ಗೆದ್ದವರಿಗೆ ₹50 ಲಕ್ಷ ಹಾಗು ಕಂಚಿನ ಪದಕ ಗೆದ್ದವರಿಗೆ ₹30 ಲಕ್ಷ ನಗದು ಬಹುಮಾನವನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮಂಗಳವಾರ ಪ್ರದಾನ ಮಾಡಿದರು.

ಮಿಶ್ರ ತಂಡ ವಿಭಾಗದಲ್ಲಿ ಪದಕ ಗೆದ್ದ ಕ್ರೀಡಾಪಟುಗಳು ₹22.5 ಲಕ್ಷ ಬಹುಮಾನ ಪಡೆದರು. ತೋಳುಗಳಿಲ್ಲದೇ ಕಾಲಿನಿಂದ ಬಾಣ ಪ್ರಯೋಗಿಸುವ ಆರ್ಚರಿ ಪಟು ಶೀತಲ್ ದೇವಿ, ರಾಕೇಶ್ ಕುಮಾರ್ ಇವರಲ್ಲಿ ಒಳಗೊಂಡಿದ್ದಾರೆ.

ಪದಕ ವಿಜೇತರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಚಿವರು ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ಮೊತ್ತದ ಚೆಕ್‌ಗಳನ್ನು ನೀಡಿದರು. 2028ರ ಲಾಸ್ ಏಂಜಲೀಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಇನ್ನಷ್ಟು ಪದಕ ಪಡೆಯುವ ಗುರಿಯೊಂದಿಗೆ ಪ್ಯಾರಾ ಅಥ್ಲೀಟುಗಳಿಗೆ ಪೂರ್ಣ ಬೆಂಬಲ ಮತ್ತು ಸೌಲಭ್ಯಗಳನ್ನು ನೀಡುವುದಾಗಿಯೂ ಮಾಂಡವೀಯ ಆಶ್ವಾಸನೆ ನೀಡಿದರು.

'ದೇಶ ಪ್ಯಾರಾಲಿಂಪಿಕ್ಸ್ ಮತ್ತು ಪ್ಯಾರಾ ಕ್ರೀಡೆಗಳಲ್ಲಿ ದಾಪುಗಾಲು ಹಾಕುತ್ತಿದೆ. 2016ರ ಕ್ರೀಡೆಗಳಲ್ಲಿ 4 ಪದಕ ಗೆದ್ದಿದ್ದ ಭಾರತವು, ಟೋಕಿಯೊ (2020) ಕ್ರೀಡೆಗಳಲ್ಲಿ 19 ಮತ್ತು ಇತ್ತೀಚಿನ ಪ್ಯಾರಿಸ್ ಕ್ರೀಡೆಗಳಲ್ಲಿ 29 ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ 18ನೇ ಸ್ಥಾನ ಗಳಿಸಿದೆ' ಎಂದು ಮಾಂಡವೀಯ ಹೇಳಿದರು.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ 7 ಚಿನ್ನ, 9 ಬೆಳ್ಳಿ ಮತ್ತು 13 ಕಂಚಿನ ಪದಕಗಳನ್ನು ಗೆದ್ದುಕೊಂಡಿತ್ತು.

ಇದಕ್ಕೆ ಮೊದಲು, ಪ್ಯಾರಿಸ್‌ನಿಂದ ಮಂಗಳವಾರ ಇಲ್ಲಿಗೆ ತಲುಪಿದ ಪ್ಯಾರಾ ಅಥ್ಲೀಟುಗಳಿಗೆ ಸಂಭ್ರಮದ ಸ್ವಾಗತ ನೀಡಲಾಯಿತು.

ಕಾಮನ್‌ವೆಲ್ತ್ ಚೆಸ್: ಶುಭಿಗೆ ಎರಡು ಪದಕ

ನವದೆಹಲಿ (ಪಿಟಿಐ): ಭಾರತದ ಶುಭಿ ಗುಪ್ತಾ ಅವರು ಶ್ರೀಲಂಕಾದ ಕಲುತರಾದಲ್ಲಿ ನಡೆದ ಕಾಮನ್‌ವೆಲ್ತ್ ಚೆಸ್ ಚಾಂಪಿಯನ್‌ಷಿಪ್‌ನ 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಿನ್ನದ ಪದಕ ಮತ್ತು 20 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಮಹಿಳಾ ಫಿಡೆ ಮಾಸ್ಟರ್ ಆಗಿರುವ ಶುಭಿ, 19 ವರ್ಷದೊಳಗಿನವರ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ. ಅವರು 16 ವರ್ಷದೊಳಗಿನವರ ವಿಭಾಗದಲ್ಲಿ ಅಜೇಯ ಪ್ರದರ್ಶನ ನೀಡಿ, ಏಳು ಪಂದ್ಯಗಳನ್ನು ಗೆದ್ದು, ಎರಡನ್ನು ಡ್ರಾ ಮಾಡಿಕೊಂಡು ಸಂಭವನೀಯ ಒಂಬತ್ತರಲ್ಲಿ ಎಂಟು ಪಾಯಿಂಟ್ಸ್ ಕಲೆಹಾಕಿದರು. ಭಾರತದ ಇನ್ನಿಬ್ಬರು ಆಟಗಾರ್ತಿಯರಾದ ಮೃತಿಕಾ ಮಲಿಕ್ (7 ಪಾಯಿಂಟ್ಸ್) ಮತ್ತು ಯಶ್ವಿ ಜೈನ್ (6.5) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

20 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲೂ ಮೂರನೇ ಸ್ಥಾನ ಗಳಿಸಿದರು.

ಉತ್ತರ ಪ್ರದೇಶದ ಗಾಜಿಯಾಬಾದ್‌ನವರಾದ ಶುಭಿ ₹ 1ಲಕ್ಷ ಬಹುಮಾನ ಪಡೆದಿದ್ದಾರೆ.

ಈ ಹಿಂದೆ ಅವರು ಕಾಮನ್‌ವೆಲ್ತ್ ಯೂತ್ ಚಾಂಪಿಯನ್‌ಷಿಪ್‌ನ 12 ವರ್ಷದೊಳಗಿವನವರ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಎರಡು ವರ್ಷಗಳ ಹಿಂದೆ ವಿಶ್ವ ಕೆಡೆಟ್ ಚಾಂಪಿಯನ್‌ಷಿಪ್ ಅನ್ನೂ ಗೆದ್ದುಕೊಂಡಿದ್ದರು.

ಓಪನ್ ವಿಭಾಗದಲ್ಲಿ ಭಾರತದ ಎಸ್.ಪಿ.ಸೇತುರಾಮನ್ ಮತ್ತು ಎನ್.ಆರ್. ವಿಘ್ನೇಶ್ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಪಡೆದರು. ಅವರು 9 ಸುತ್ತುಗಳಿಂದ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದರು.

ಫುಟ್‌ಬಾಲ್ ತಾರೆ ಅನ್ವರ್ ಅಲಿಗೆ ನಾಲ್ಕು ತಿಂಗಳ ನಿಷೇಧ



ಅನ್ವರ್ ಅಲಿ

ಕೋಲ್ಕತ್ತ (ಪಿಟಿಐ): ಅಂತರರಾಷ್ಟ್ರೀಯ ಆಟಗಾರ ಅನ್ವರ್ ಅಲಿ ಅವರ ಮೇಲೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ನಾಲ್ಕು ತಿಂಗಳ ನಿಷೇಧ ಹೇರಿದೆ. ಮೋಹನ್ ಬಾಗನ್ ಕ್ಲಬ್ ಜೊತೆ ಮಾಡಿಕೊಂಡಿದ್ದ ನಾಲ್ಕು ವರ್ಷಗಳ ಗುತ್ತಿಗೆ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದುಗೊಳಿಸಿದ ಪ್ರಕರಣದಲ್ಲಿ ಅವರನ್ನು 'ದೋಷಿ' ಎಂದು ಫೆಡರೇಷನ್ ಹೇಳಿದೆ.

ಈ ಪ್ರಕರಣದಲ್ಲಿ ಕೋಲ್ಕತ್ತದ ಕ್ಲಬ್ ಮೋಹನ್ ಬಾಗನ್ ₹12.90 ಕೋಟಿ ಮೊತ್ತದ ಪರಿಹಾರ ಪಡೆಯಲು ಅರ್ಹವಾಗಿದೆ ಎಂದೂ ಫೆಡರೇಷನ್ ತಿಳಿಸಿದೆ.

ರಕ್ಷಣೆ ಆಟಗಾರ ಅನ್ವರ್ ಅವರು ಡೆಲ್ಲಿ ಎಫ್‌ಸಿ ಮತ್ತು ಈಸ್ಟ್ ಬೆಂಗಾಲ್ ಜೊತೆ ದೊಡ್ಡ ಮೊತ್ತದ ಒಪ್ಪಂದ ಮಾಡಿಕೊಂಡಿದ್ದರು. ಈ ಎರಡೂ ಕ್ಲಬ್‌ಗಳಿಗೆ ಮುಂದಿನ ಎರಡು ಸಾಲಿನಲ್ಲಿ (2024-25 ಮತ್ತು 2025-26ರ ಬೇಸಿಗೆಯಲ್ಲಿ) ಆಟಗಾರರ ವರ್ಗಾವಣೆ ವೇಳೆ ನೋಂದಣಿ ಮಾಡಿಕೊಳ್ಳುವುದಕ್ಕೆ ಫೆಡರೇಷನ್‌ನ ಪ್ಲೇಯರ್ಸ್ ಸ್ಟೇಟಸ್ ಕಮಿಟಿ (ಪಿಎಸ್‌ಸಿ) ನಿಷೇಧ ಹೇರಿದೆ.

ಅನ್ವರ್ ಅಲಿ, ಈಸ್ಟ್ ಬೆಂಗಾಲ್ ಮತ್ತು ಡೆಲ್ಲಿ ಎಫ್‌ಸಿ ಸೇರಿಕೊಂಡು ಬಾಗನ್‌ಗೆ ಆದ ನಷ್ಟಕ್ಕೆ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥರು ಎಂದು ಪಿಎಸ್‌ಸಿ ತಿಳಿಸಿದೆ.

23 ವರ್ಷದ ಸೆಂಟರ್ ಬ್ಯಾಕ್ ಆಟಗಾರ ಅಲಿ ಅವರು ಬಾಗನ್ ಜೊತೆಗಿನ ಒಪ್ಪಂದವನ್ನು ಏಕಪಕ್ಷೀಯವಾಗಿ ಕೊನೆಗೊಳಿಸಿ ಈಸ್ಟ್ ಬೆಂಗಾಲ್‌ಗೆ ವರ್ಗಾವಣೆ ಆಗಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು. ಅನ್ವರ್ ಕ್ರಮವನ್ನು ಪ್ರಶ್ನಿಸಿ ಮೋಹನ್ ಬಾಗನ್ ಪಿಎಸ್‌ಸಿಗೆ ದೂರು ಸಲ್ಲಿಸಿತ್ತು.

ಅನ್ವರ್ ಮೇಲಿನ ಅಮಾನತು ಕ್ಲಬ್ ಪಂದ್ಯಗಳಿಗೆ ಅನ್ವಯವಾಗಲಿದೆ. ಅವರು ಭಾರತ ತಂಡಕ್ಕೆ ಆಡಲು ಅರ್ಹರಾಗಿರುತ್ತಾರೆ.

ಒಂದೊಮ್ಮೆ ಮೋಹನ್ ಬಾಗನ್ ಕ್ಲಬ್‌ಗೆ 45 ದಿನಗಳ ಒಳಗೆ ಮೊತ್ತ ಪಾವತಿಸದೇ ಹೋದಲ್ಲಿ, ಈಸ್ಟ್ ಬೆಂಗಾಲ್ ಮತ್ತು ಡೆಲ್ಲಿ ಎಫ್‌ಸಿ ಕ್ಲಬ್‌ಗಳು ಹೊಸ ಆಟಗಾರರ ನೋಂದಣಿ ಮಾಡಿಕೊಳ್ಳುವುದಕ್ಕೆ ಮೂರು ವರ್ಷ ನಿಷೇಧ ಹೇರಲಾಗುವುದು ಎಂದೂ ಫೆಡರೇಷನ್ ಎಚ್ಚರಿಕೆ ನೀಡಿದೆ.

ಕೌಂಟಿ ಕ್ರಿಕೆಟ್: ಚಾಹಲ್‌ಗೆ 5 ವಿಕೆಟ್

ನಾರ್ತಾಂಪ್ಟನ್ (ಪಿಟಿಐ): ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ನಾರ್ತಾಂಪ್ಟನ್ ಶೈರ್ ತಂಡದಲ್ಲಿ ಆಡುತ್ತಿರುವ ಭಾರತದ ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಡರ್ಬಿಶೈರ್ ವಿರುದ್ಧದ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು.

45 ರನ್‌ಗಳಿಗೆ 5 ವಿಕೆಟ್ ಗಳಿಸಿದ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 100 ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ನಾರ್ತಾಂಪ್ಟನ್ ಶೈರ್ ತಂಡವು ಮಂಗಳವಾರ ದಿನದಾಟದ ಕೊನೆಗೆ 232 ರನ್‌ಗಳ ಮುನ್ನಡೆ ಸಾಧಿಸಿದೆ.

ಡೈಮಂಡ್ ಲೀಗ್ ಫೈನಲ್‌ಗೆ ಸಾಬ್ಳೆ

ನವದೆಹಲಿ (ಪಿಟಿಐ): ಒಲಿಂಪಿಯನ್, 3000 ಮೀ. ಸ್ಟೀಪಲ್‌ಚೇಸ್ ಓಟಗಾರ ಅವಿನಾಶ ಸಾಬ್ಳೆ ಅವರು ಮೊದಲ ಬಾರಿ ಡೈಮಂಡ್ ಲೀಗ್ ಫೈನಲ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.



ಅವಿನಾಶ್ ಸಾಬ್ಳೆ

ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಅವರ ಜೊತೆ ಸಾಬ್ಳೆ ಇದೇ ತಿಂಗಳ 13 ಮತ್ತು 14ರಂದು ಜ್ಯೂರಿಚ್‌ನಲ್ಲಿ ನಡೆಯಲಿರುವ ಈ ಕೂಟದಲ್ಲಿ ಭಾಗವಹಿಸುತ್ತಿರುವ ಭಾರತದ ಎರಡನೇ ಸ್ಪರ್ಧಿಯಾಗಿದ್ದಾರೆ.

ಸಾಬ್ಳೆ ಡೈಮಂಡ್ ಲೀಗ್‌ನಲ್ಲಿ ಮೂರು ಪಾಯಿಂಟ್‌ಗಳೊಂದಿಗೆ ಒಟ್ಟಾರೆ 14ನೇ ಸ್ಥಾನ ಪಡೆದಿದ್ದರು. ಆದರೆ ಅವರಿಗಿಂತ ಮೇಲಿನ ಸ್ಥಾನದಲ್ಲಿದ್ದ ನಾಲ್ವರು ಫೈನಲ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದರಿಂದ ಸಾಬ್ಳೆ ಅವರಿಗೆ ಅವಕಾಶ ದೊರೆಯಿತು. ಋತುವಿನ ಈ ಕೊನೆಯ ಕೂಟದಲ್ಲಿ ಸ್ಟೀಪಲ್‌ಚೇಸ್ ಸ್ಪರ್ಧೆ 13ರಂದು ಮತ್ತು ಜಾವೆಲಿನ್ ಥ್ರೊ ಸ್ಪರ್ಧೆ 14ರಂದು ನಡೆಯಲಿದೆ.

ಹಾಕಿ: ಬೆಂಗಳೂರು ಬ್ಲ್ಯೂಸ್‌ಗೆ ಜಯ

ಬೆಂಗಳೂರು: ನಗರದ ಬೆಂಗಳೂರು ಬ್ಲ್ಯೂಸ್ ಹಾಕಿ ಕ್ಲಬ್ 'ಎ' ತಂಡವು ಇಲ್ಲಿ ನಡೆಯುತ್ತಿರುವ ಕೆಎಸ್‌ಎಚ್‌ಎ ಡಿ.ಎಸ್. ಮೂರ್ತಿ ಸ್ಮಾರಕ ಹಾಕಿ ಟೂರ್ನಿಯ ಪಂದ್ಯದಲ್ಲಿ ಕೋಲಾರ ಜಿಲ್ಲೆ ತಂಡದ ಎದುರು ಜಯಿಸಿತು. ಶಾಂತಿನಗರದಲ್ಲಿರುವ ಕೆಎಸ್‌ಎಚ್‌ಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಬ್ಲ್ಯೂಸ್ ತಂಡವು 3-1ರಿಂದ ಕೋಲಾರ ತಂಡವನ್ನು ಸೋಲಿಸಿತು.



ಭಾರತದ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್

ಬ್ಯಾಡ್ಮಿಂಟನ್: ಪ್ರಿಕ್ವಾರ್ಟರ್‌ಗೆ ಟ್ರಿಸಾ –ಗಾಯತ್ರಿ ಜೋಡಿ

ಹಾಂಗ್‌ಕಾಂಗ್ (ಪಿಟಿಐ): ಭಾರತದ ಚಿರಾಗ್ ಸೇನ್ ಮತ್ತು ಮಾನವ್ ಚೌಧರಿ ಅವರು ಮಂಗಳವಾರ ಹಾಂಗ್‌ಕಾಂಗ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಅರ್ಹತಾ ಸುತ್ತಿನ ಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು. ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಮಹಿಳಾ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸೂಪರ್ 500 ಟೂರ್ನಿಯ ಡಬಲ್ಸ್‌ನಲ್ಲಿ ಜೋಳಿ ಮತ್ತು ಗಾಯತ್ರಿ 32ರ ಸುತ್ತಿನ ಪಂದ್ಯದಲ್ಲಿ 21-14, 21-13 ರಿಂದ ಉಕ್ರೇನ್‌ನ ಪೊಲಿನಾ ಬುಹ್ರೊವಾ- ಯೆವೆನಿಯಾ ಕಂಟೆಮಿರ್ ಜೋಡಿಯನ್ನು ಸೋಲಿಸಿದರು. ಋತುಪರ್ಣಾ- ಶ್ವೇತಪರ್ಣಾ ಪಂಡಾ ಸೋದರಿಯರ ಜೋಡಿ 11-21, 8-21 ರಲ್ಲಿ ಚೀನಾ ತೈಪಿಯ ಸಿಯಾ ಪೀ ಶಾನ್- ಹುಂಗ್ ಎನ್-ತ್ಸು ಅವರನ್ನು ಸೋಲಿಸಿದರು.

ಚಿರಾಗ್ ಸೇನ್ ಪುರುಷರ ಸಿಂಗಲ್ಸ್ ಕ್ವಾಲಿಫಿಕೇಷನ್ ಸುತ್ತಿನ ಕ್ವಾರ್ಟರ್‌ಫೈನಲ್‌ನಲ್ಲಿ ಕೆನಡಾದ ಶೆಂಗ್ ಷಿಯಾವೊಡಾಂಗ್ ಅವರಿಗೆ 12-21, 21-13, 14-21 ರಿಂದ ಮಣಿದರು. ಮಾನವ್ ಚೌಧರಿ ತಮ್ಮ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಹಾಂಗ್‌ಕಾಂಗ್‌ನ ಚಾನ್ ಯಿನ್ ಚಾಖ್ ಅವರಿಗೆ 6-21, 10-21ರಲ್ಲಿ ಸೋತರು.